ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 19 ಸಂಚಿಕೆ 40 ಸೆ. 29–ಅ. 5, 1997 ಬೆಲೆ ರೂ. 2.00



ಎಂ.ಪಿ.ಎಂ. ಕಾರ್ಖಾನೆಯಲ್ಲಿ ಎಷ್ಟೊಂದು ಅವ್ಯವಹಾರಗಳು?

ಸಿ.ಓ.ಡಿ. ತನಿಖೆಗೆ ಕಾಂ|| ಸೂರಿ ಆಗ್ರಹ

ಎಂ.ಪಿ.ಎಂ ಕರ್ನಾಟಕದ ಒಂದು ಹೆಮ್ಮೆಯ ಕಾರ್ಖಾನೆ. ಎಂ.ಪಿ.ಎಂ. ಅಥವಾ ಮೈಸೂರು ಕಾಗದ ಕಾರ್ಖಾನೆ ಈಗ ಸರ್ಕಾರದ ಆರ್ಥಿಕ ನೀತಿಗಳು ಹಾಗೂ ಕಾರ್ಖಾನೆಯ ಉಚ್ಚ ಅಧಿಕಾರಿಗಳ ಪ್ರಶ್ನಾರ್ಹ ವರ್ತನೆಗಳಿಂದಾಗಿ ನಷ್ಟದತ್ತ ಭರದಿಂದ ಸಾಗುತ್ತಿದೆ. ಆದ್ದರಿಂದ ಮುಖ್ಯ ಮಂತ್ರಿಗಳು ತಕ್ಷಣ ಮಧ್ಯ ಪ್ರವೇಶಿಸಿ ಕಾರ್ಖಾನೆಯನ್ನು ಕಾಪಾಡಬೇಕು ಎಂದು ಎಂ.ಪಿ.ಎಂ ನ ಕಾರ್ಮಿಕರು ಹಾಗೂ ಅಧಿಕಾರಿ ವರ್ಗದವರು ಆಗ್ರಹ ಪಡಿಸಿದ್ದಾರೆ. ಮೈಸೂರು ಕಾಗದ ಕಾರ್ಖಾನೆಯ ಕಾರ್ಮಿಕ ಸಂಘದ ಸಲಹಾಗಾರರಾದ ಹಾಗೂ ಅಧಿಕಾರಿಗಳ ಸಂಘದ ಗೌರವ ಅಧ್ಯಕ್ಷರೂ ಆದ ಹಿರಿಯ ಕಾರ್ಮಿಕ ಮುಖಂಡ ಎಸ್. ಸೂರ್ಯನಾರಾಯಣ್ ರಾವ್ ಸೆಪ್ಟೆಂಬರ್ 26 ರಂದು ಪತ್ರಿಕಾಗೋಷ್ಠಿಯೊಂದರಲ್ಲಿ ಕಾರ್ಖಾನೆಯಲ್ಲಿ ಉಚ್ಚ ಅಧಿಕಾರಿಗಳು ನಡೆಸುತ್ತಿರುವ ಅವ್ಯವಹಾರಗಳ ಪಟ್ಟಿಯನ್ನು ಮುಂದಿಟ್ಟು ಈ ಬಗ್ಗೆ ತಕ್ಷಣ ಸಿ.ಓ.ಡಿ.ಯಿಂದ ತನಿಖೆ ನಡೆಸಬೇಕು. ಅದುವರೆಗೆ ಕಾರ್ಖಾನೆಯಲ್ಲಿ ತೆಗೆದುಕೊಳ್ಳಲಾಗುತ್ತಿರುವ ಕಳಪೆ ಯಂತ್ರ, ಕಚ್ಚಾವಸ್ತುಗಳನ್ನು, ಉಚ್ಚ ಅಧಿಕಾರಿಗಳ ವಿದೇಶಿ ಯಾತ್ರೆಗಳನ್ನು ನಿಲ್ಲಿಸಬೇಕು ಎಂದು ಒತ್ತಾಯ ಮಾಡಿದ್ದಾರೆ.

ಮೈಸೂರು ಕಾಗದ ಕಾರ್ಖಾನೆ 50 ಕ್ಕೂ ಹೆಚ್ಚಿನ ವರ್ಷಗಳ ಇತಿಹಾಸವನ್ನು ಹೊಂದಿದ್ದು ವಾರ್ತಾ ಮುದ್ರಣ ಕಾಗದವನ್ನು ತಯಾರಿಸುತ್ತಿದ್ದು, ದೇಶಾದ್ಯಂತ ತನ್ನ ಉತ್ತಮ ಮುದ್ರಣ ಕಾಗದಕ್ಕೆ ಹೆಸರು ಪಡೆದ ಸಂಸ್ಥೆ. ವಿದೇಶಿ ಕಂಪನಿಗಳು ತಮ್ಮ ಮುದ್ರಣ ಕಾಗದವನ್ನು ನಮ್ಮ ದೇಶದಲ್ಲಿ ಕಡಿಮೆ ಬೆಲೆಗೆ ಮಾರುತ್ತಿರುವ ವಿಷಯವನ್ನು ಕಾರ್ಮಿಕ ಸಂಘಟನೆಗಳು ಹಾಗೂ ಉತ್ಪಾದಕರ ಸಂಘಟನೆಗಳು ಕೇಂದ್ರ ಸರ್ಕಾರದ ಗಮನಕ್ಕೆ ತಂದಿದ್ದರೂ ಕೂಡ, ಸರ್ಕಾರದಿಂದ ವಿದೇಶಿ ಕಂಪನಿಗಳ ಈ ಕಾನೂನು ಬಾಹಿರ ಕೆಲಸವನ್ನು ತಡೆಗಟ್ಟಲು ಸಾಧ್ಯವಾಗಿಲ್ಲ. ಇದರಿಂದಾಗಿ ಇದುವರೆಗೂ ಸರ್ಕಾರದ ಆರ್ಥಿಕ ನೀತಿಯ ರಕ್ಷಣೆಯಿಂದ ಬೆಳೆಯುತ್ತಿದ್ದ ಮುದ್ರಣ ಕಾಗದ ಕಾರ್ಖಾನೆಗಳು, ಈಗ ತಮ್ಮ ವಸ್ತುವಿನ ಬೆಲೆಯನ್ನು ಕಡಿಮೆ (ರೂ. 28,000 ಸಾವಿರದಿಂದ 19,000 ರೂ.ಗೆ) ಮಾಡಿ ವಿದೇಶಿ ಕಂಪನಿಗಳ ದಾಳಿಯನ್ನು ತಡೆಯಲು ಹೋರಾಡಿ ನಷ್ಟವನ್ನು ಅನುಭವಿಸುತ್ತಿವೆ.

ಉದಾ: ವಿದೇಶಿ ಕಂಪನೆಗಳು ಇದುವರೆಗೆ ಒಂದು ಟನ್ ಗೆ 600- ಡಾಲರ್ ರೂ.ನಂತೆ ಮಾರುತ್ತಿದ್ದ ಮುದ್ರಣ ಕಾಗದದ ಬೆಲೆಯನ್ನು ತಕ್ಷಣವೇ ಒಂದು ಟನ್ ಗೆ 450: ಡಾಲರ್ ನಂತೆ ಮಾರಲು ಪ್ರಾರಂಭಿಸಿವೆ. ಅಲ್ಲದೆ ಇದೇ ಕಂಪನಿಗಳು ತಮ್ಮ ದೇಶದಲ್ಲಿ ಇದೇ ಮುದ್ರಣ ಕಾಗದವನ್ನು ಈಗಲೂ ಒಂದು ಟನ್ ಗೆ 600 ಡಾಲರ್ ನಂತೆಯೇ ಮಾರುತ್ತಲಿವೆ. ಸರ್ಕಾರ ಮುದ್ರಣ ಕಾಗದ ಸ್ವಯಂ ಸಾಮರ್ಥ್ಯ ಪಡೆಯುವ ದೃಷ್ಟಿಯಿಂದಲಾದರೂ ವಿದೇಶಿ ಕಂಪನೆಗಳು ಕಡಿಮೆ ಬೆಲೆಗೆ ನಮ್ಮ ದೇಶದಲ್ಲಿ ಮಾರುವುದನ್ನು ತಡೆಗಟ್ಟಬೇಕಾಗಿತ್ತು. ಕೇಂದ್ರ ಸರ್ಕಾರದ ಈ ನೀತಿಯಿಂದಾಗಿ ಮೈಸೂರು ಕಾಗದ ಕಾರ್ಖಾನೆ ತನ್ನ ಲಾಭವನ್ನು ಕಳೆದುಕೊಂಡು ನಷ್ಟದ ಹಾದಿಯಲ್ಲಿ ಭರದಿಂದ ಸಾಗುತ್ತಿದೆ.

ಇಂತಹ ಕಷ್ಟದ ದಿನಗಳಲ್ಲಿ ಕಾರ್ಖಾನೆಯನ್ನು ಉಳಿಸುವ ದೃಷ್ಟಿಯಿಂದ ಕಾರ್ಖಾನೆಯ ಆಡಳಿತ ವರ್ಗ, ಕಾರ್ಖಾನೆಯಲ್ಲಿ ಖರ್ಚನ್ನು ಕಡಿಮೆ ಮಾಡುವುದು, ಪೋಲನ್ನು ತಡೆಗಟ್ಟುವುದು; ಅಲ್ಲದೆ ಕಾರ್ಖಾನೆಗೆ ಬೇಕಾಗುವ ಸಾಮಗ್ರಿಗಳನ್ನು ಕೊಳ್ಳುವಾಗ ತುಂಬ ಎಚ್ಚರಿಕೆ ವಹಿಸಬೇಕಾಗಿತ್ತು. ಆದರೆ ದುರದೃಷ್ಟವಶಾತ್ ಸಂಬಂಧಪಟ್ಟ ಹಿರಿಯ ಅಧಿಕಾರಿಗಳು ಈ ದಾರಿಯಲ್ಲಿ ಯೋಚಿಸುತ್ತಲೇ ಇಲ್ಲ. ಕಾರ್ಖಾನೆಯ ಅಧ್ಯಕ್ಷರು, ನಿರ್ದೇಶಕರು (ಹಣಕಾಸು), ನಿರ್ದೇಶಕರು (ಅರಣ್ಯ), ಪ್ರಧಾನ ವ್ಯವಸ್ಥಾಪಕರು (ಮಾರುಕಟ್ಟೆ)ಗಳು ಈ ವಿಷಯದಲ್ಲಿ ತೋರುತ್ತಿರುವ ಮನೋಭಾವ ಹಾಗೂ ನಡೆದುಕೊಳ್ಳುತ್ತಿರುವ ರೀತಿ ನೋಡಿದರೆ ಕಾರ್ಖಾನೆಯ ಬಾಗಿಲು ಮುಚ್ಚುವ ದಿನ ಬಹಳ ದೂರವಿಲ್ಲವೆಂದು ತೋರುತ್ತದೆ. ಉತ್ಪಾದನಾವೆಚ್ಚ ತಗ್ಗಿಸಲು, ಕಾರ್ಖಾನೆಯಲ್ಲಿನ ಅನುತ್ಪಾದಕ ಖರ್ಚನ್ನು ತಡೆಗಟ್ಟುವಲ್ಲಿ ಹಿರಿಯ ಅಧಿಕಾರಿ ವರ್ಗ ಯಾವುದೇ ಶ್ರಮ ತೆಗೆದುಕೊಂಡಂತೆ ಕಾಣುವುದಿಲ್ಲ ಎಂದ ಕಾಂ. ಸೂರಿ ಪತ್ರಿಕಾಗೋಷ್ಠಿಯಲ್ಲಿ ಅದಕ್ಕೆ ಸಮರ್ಥನೆಯಾಗಿ ಈ ಕೆಳಗಿನ ಮಾಹಿತಿಗಳನ್ನು ನೀಡಿದರು.

1) 15,000 ಟನ್‌ಗಳಷ್ಟು ಅಸ್ಸಾಂ ಬೊಂಬು ತರಿಸುವ ಒಪ್ಪಂದವೊಂದನ್ನು ಅತಿ ಹೆಚ್ಚಿನ ಬೆಲೆಗೆ ಕಲ್ಪತರು ಆಗ್ರೋ ಇಂಡಸ್ಟ್ರೀಸ್ ಕಲ್ಕತ್ತ ಇವರೊಂದಿಗೆ ಮಾಡಿಕೊಳ್ಳಲಾಗಿದೆ. ವಿಚಿತ್ರವೆಂದರೆ ಈ ಸದರಿ ಕಂಪನಿಯ ಮಾಲೀಕರಾದ ಅಗರವಾಲ್ ರವರು ಕೋಟ್ಯಾಂತರ ರೂ. ಎಕ್ಸೈಜ್ ಸುಂಕವನ್ನು ಕೊಡುವಲ್ಲಿ ಸರ್ಕಾರಕ್ಕೆ ಮೋಸವೆಸಗಿದ ಬಗ್ಗೆ ದಿನಾಂಕ: 21-3-1996 ರ 'ಸ್ಟೇಟ್ಸ್‌ಮನ್' ಪತ್ರಿಕೆ ಇವರ ಮೇಲೆ ಅಪಾದನೆಯನ್ನು ಹೊರಿಸಿ ತನ್ನ ಪತ್ರಿಕೆಯಲ್ಲಿ ಪ್ರಕಟಿಸಿದೆ. ಈ ವ್ಯಕ್ತಿಯನ್ನು ನಗರದ 'ಬಿಸ್ಕಟ್ ಕಿಂಗ್ ಪಿನ್' ಎಂದು ಕರೆಯಲಾಗುತ್ತಿದೆ. ಈ ಮೋಸಗಾರ ಈಗ ಮೈಸೂರು ಕಾಗದ ಕಾರ್ಖಾನೆಯನ್ನು ನಗರದಲ್ಲಿ ಮೋಸಗೊಳಿಸುತ್ತಿದ್ದಾರೆ. ಈತ ಕಾರ್ಖಾನೆಗೆ ಉತ್ತಮ ಬೊಂಬನ್ನೂ ಕೊಡದೆ ಕಳಪೆ ದರ್ಜೆಯ ಬೊಂಬನ್ನು ನೀಡುತ್ತಿದ್ದು ಒಪ್ಪಂದದಂತೆ ಅಸ್ಸಾಂನಿಂದ ಬೊಂಬನ್ನು ತರಿಸಿಕೊಡದೆ, ನಾಗಪುರದಿಂದ ತರಿಸಿಕೊಡುತ್ತಿದ್ದಾನೆ. ಇದಕ್ಕೆ ಸಾಗಾಣಿಕೆ ವೆಚ್ಚವಾಗಿ ರೂ. 2700-00 ಒಂದು ಟನ್ನಿಗೆ ಪಡೆಯುತ್ತಿದ್ದಾನೆ. ಈ ಮೋಸಗಾರ ಒಪ್ಪಂದದಂತೆ ರಸ್ತೆ ಮೂಲಕ ಬೊಂಬನ್ನು ತರಿಸದೆ, ರೈಲಿನಲ್ಲಿ ತರಿಸಿ ರಸ್ತೆ ಮೂಲಕ ತಂದಂತೆ ಸಾಗಾಣಿಕೆ ವೆಚ್ಚವನ್ನು ಪಡೆಯಲು ಪ್ರಯತ್ನಿಸುತ್ತಿದ್ದಾನೆ.

ಎಂ.ಪಿ.ಎಂ ನ ಕೆಲ ಕಾರ್ಮಿಕರು ಈತ ನೀಡಿದ ಬೊಂಬಿನ ಗುಣಮಟ್ಟ ಹಾಗೂ ಕಡಿಮೆ ಫೈಬರ್, ಇರುವುದನ್ನು ಕಂಡು ಹಿಡಿದು ಆಡಳಿತ ವರ್ಗಕ್ಕೆ ದೂರು ನೀಡಿರುತ್ತಾರೆ. ಆಡಳಿತ ವರ್ಗ ಈಗ ಅನಿವಾರ್ಯವಾಗಿ ಈ ಕಳಪೆ ಬೊಂಬನ್ನು ಬೇರೆ ಕಡೆ ಇಡಲು ವ್ಯವಸ್ಥೆ ಮಾಡಿದ್ದಾರೆ. ಆಶ್ಚರ್ಯಕರ ವಿಷಯವೆಂದರೆ, ಇಷ್ಟೆಲ್ಲಾ ಕಳಪೆ ಇದ್ದ ಈ ಬೊಂಬನ್ನು ಆಡಳಿತ ವರ್ಗ ಮೇಲ್ಕಂಡ ಕಂಪನಿಗೆ ಹಿಂತಿರುಗಿಸದೇ ಹಾಗೇ ಇಟ್ಟುಕೊಂಡಿದೆ. ಅಲ್ಲದೆ ಈತನ ಒಪ್ಪಂದವನ್ನು ರದ್ದುಗೊಳಿಸದೇ ಹಾಗೇ ಇಟ್ಟುಕೊಂಡಿದೆ. ಎಂ.ಪಿ.ಎಂ ಆಡಳಿತ ವರ್ಗ ಕ್ರಮೇಣ ಕಾರ್ಖಾನೆಯಲ್ಲಿ ಈ ಕಚ್ಚಾ ಮಾಲೀನ ಕೊರತೆಯನ್ನು ಕೃತಕವಾಗಿ ಸೃಷ್ಟಿಸಿ ಈ ಕಳಪೆ ಬೊಂಬನ್ನು ಅನಿವಾರ್ಯವಾಗಿ ಉಪಯೋಗಿಸುವಂತ ಲಕ್ಷಣಗಳು ತೋರುತ್ತಿವೆ ಎಂದು ಕಾಂ. ಸೂರಿ. ಸಂದೇಹ ವ್ಯಕ್ತಪಡಿಸಿದರು.

ಬೆಲೆಯಲ್ಲಿ ಕಡಿಮೆಯಲ್ಲದ, ನಂಬಿಕೆಗೆ ಅರ್ಹನಲ್ಲದ ಶ್ರೀ ಅಗರ್‌ವಾಲ್‌ರವರೊಂದಿಗೆ ಆಡಳಿತವರ್ಗ ಹೇಗೆ ಒಪ್ಪಂದ ಮಾಡಿಕೊಂಡಿತು ಎಂಬುದು ಯಾರಿಗೂ ಅರ್ಥವಾಗದ ಸಂಗತಿ.

2. ಮಾರುಕಟ್ಟೆ ವಿಭಾಗವು ಅನುಮಾನಾಸ್ಪದ ತೀರ್ಮಾನವನ್ನು ಕೈಗೊಂಡು ಸ್ವಲ್ಪಭಾಗದ ಮುದ್ರಣ ಕಾಗದಕ್ಕೆ 'ಗ್ರೀನ್ ಲೇಬಲ್' ಮುದ್ರಣ ಕಾಗದ ಎಂದು ಹೆಸರಿಸಿ ಮಾರಾಟ ಮಾಡುತ್ತಿದೆ. ಇಂತಹ ಮುದ್ರಣ ಕಾಗದಕ್ಕೆ ನಿರ್ದಿಷ್ಟವಾದ ಬೆಲೆಯನ್ನು ಪ್ರಕಟಿಸದೆ ಅತೀ ಕಡಿಮೆ

ಪುಟ 2 ನೋಡಿ



ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯೇರಿಕೆ ಸಿಪಿಐ(ಎಂ) ಮೊದಲೇ ಎಚ್ಚರಿಸಿದಂತೆ ಇನ್ನಷ್ಟು ಬೆಲೆಯೇರಿಕೆಯನ್ನುಂಟುಮಾಡಿದೆ. ಇತ್ತೀಚೆಗಷ್ಟೆ ಬಸ್ ದರಗಳನ್ನು ಏರಿಸಿದ್ದ ಕರ್ನಾಟಕ ಸರ್ಕಾರ ಮತ್ತೊಮ್ಮೆ ಅದನ್ನು ಹೆಚ್ಚಿಸಿದೆ. ಇದಕ್ಕೆ ವ್ಯಾಪಕ ಪ್ರತಿಭಟನೆಗಳು ವ್ಯಕ್ತವಾಗುತ್ತಿವೆ. ಬೆಂಗಳೂರಿನಲ್ಲಿ ವಿದ್ಯಾರ್ಥಿ ಯುವಜನರು ಎಸ್ ಎಫ್ ಐ - ಡಿ ವೈ ಎಫ್ ಐ ನೇತೃತ್ವದಲ್ಲಿ ಪ್ರತಿದಿನ ನಗರದ ವಿವಿಧೆಡೆ ರಸ್ತೆತಡೆ ಮಾಡಿ ಜನರ ಪ್ರತಿಭಟನೆಗಳಿಗೆ ದನಿ ನೀಡುತ್ತಿದ್ದಾರೆ. ರಸ್ತೆತಡೆಯನ್ನು ಮುರಿಯುವ ಪೋಲೀಸರ ಪ್ರಯತ್ನವನ್ನು ಪ್ರತಿರೋಧಿಸುತ್ತಿರುವ ವಿದ್ಯಾರ್ಥಿ ಪ್ರತಿಭಟನಾಕಾರರು.

ಉತ್ತರ ಕರ್ನಾಟಕದಲ್ಲಿ ಮಂತ್ರಿ ಮಂಡಲದ ದಂಡ ಯಾತ್ರೆ

ಎನ್.ಕೆ.ಉಪಾಧ್ಯಾಯ

ಸ್ವಾತಂತ್ರ್ಯ ಚಳುವಳಿಯ ಅಂಗವಾಗಿ 1930 ರಲ್ಲಿ ಉತ್ತರ ಕರ್ನಾಟಕದಲ್ಲಿ ಉಪ್ಪು ಸತ್ಯಾಗ್ರಹದ ದಂಡೀ ಯಾತ್ರೆ ನಡೆದಿತ್ತು. ಸ್ವಾತಂತ್ರ್ಯ ಪಡೆದ ಐವತ್ತು ವರ್ಷಗಳ ನಂತರ ಪ್ರಾದೇಶಿಕ ಅಸಮಾನತೆಯ ದೂರಿನ ಹಿನ್ನೆಲೆಯಲ್ಲಿ ಜೆ.ಎಚ್.ಪಟೇಲ್ ಮಂತ್ರಿ ಮಂಡಲದ ದಂಡ ಯಾತ್ರೆ ನಡೆಯಿತು.

ಹೈದರಾಬಾದ್ ಕರ್ನಾಟಕದ ನಾಲ್ಕು ಜಿಲ್ಲೆಗಳಾದ ಬೀದರ್, ಗುಲ್ಬರ್ಗಾ, ರಾಯಚೂರು, ಬಳ್ಳಾರಿ ಹಾಗೆಯೇ ಮುಂಬಯಿ ಕರ್ನಾಟಕದ ಬಿಜಾಪುರ, ಬೆಳಗಾವಿ, ಕಾರವಾರ, ಧಾರವಾಡ ಜಿಲ್ಲೆಗಳು ಕರ್ನಾಟಕ ಏಕೀಕರಣದ ಪೂರ್ವದಲ್ಲಿ ಹಾಗೂ ಅನಂತರ ಆಳುವ ಪಕ್ಷಗಳಿಂದ ನಿರ್ಲಕ್ಷಿಸಲ್ಪಟ್ಟಿವೆ. ಅಭಿವೃದ್ಧಿ ಕೆಲಸಗಳನ್ನು ಕೈಬಿಡಲಾಗಿದೆ. ಸಂಪನ್ಮೂಲಗಳ ಕ್ರೋಢೀಕರಣ, ಕೈಗಾರಿಕೆಗಳ ಸ್ಥಾಪನೆಯನ್ನು ನಿರ್ಲಕ್ಷಿಸಲಾಗಿದೆ. ಅಪಾರ ನೀರಾವರಿ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಳ್ಳದೆ ಬರಗಾಲಕ್ಕೆ ಹಗಲೆಲ್ಲ ತುತ್ತಾಗಿರುವ ಈ ಪ್ರದೇಶ ಆರ್ಥಿಕವಾಗಿಯೂ, ಸಾಮಾಜಿಕವಾಗಿಯೂ ಹಿಂದುಳಿದಿದೆ.

ಕೇಂದ್ರ ಮತ್ತು ರಾಜ್ಯ ಸರಕಾರಗಳು ಹಿಂದುಳಿದ ಪ್ರದೇಶಗಳನ್ನು ಗುರ್ತಿಸಿ, ಆ ಪ್ರದೇಶಗಳ ಅಭಿವೃದ್ಧಿಗಾಗಿ ಆದ್ಯತೆ ನೀಡಿ ತಮ್ಮ ಬಜೆಟ್ಟಿನಲ್ಲಿ ಹೆಚ್ಚು ಹಣವನ್ನು ಈ ಪ್ರದೇಶಗಳ ನೀರಾವರಿ, ರಸ್ತೆ ಕೈಗಾರಿಕೆ, ವಿದ್ಯುತ್, ಶಿಕ್ಷಣ, ಆರೋಗ್ಯ ಗಳಿಗಾಗಿ ಮೀಸಲಿಟ್ಟು ಅವು ಸರಿಯಾಗಿ ವ್ಯಯ ಆಗುವಂತೆ ನೋಡಿಕೊಳ್ಳುವ ಜವಾಬ್ದಾರಿ ಸರಕಾರದ್ದಾಗಿದೆ.

ಜನಗಳ ಭ್ರಮನಿರಸನದ ಅರಿವಾಗಿದೆಯೇ?

ಆದರೆ ಹಲವಾರು ಸಂಘ-ಸಂಸ್ಥೆಗಳು ಹೋರಾಟ ನಡೆಸಿದರೂ ಫಲ ನೀಡಲಾರದಾದಾಗ ಪ್ರತ್ಯೇಕ ರಾಜ್ಯ ರಚನೆಯ ಕೂಗೂ ಕೇಳಲಾರಂಭಿಸಿತು. ಇದರ ಜೊತೆಯಲ್ಲಿಯೇ ಜೆ. ಎಚ್. ಪಟೇಲ ಸರಕಾರ ನಿಷ್ಕ್ರಿಯವಾಗಿದೆ, ಆಡಳಿತೆ ವಿಫಲಗೊಂಡಿದೆ. ಭ್ರಷ್ಟಾಚಾರ, ಸ್ವಜನ ಪಕ್ಷಪಾತ ತಾಂಡವವಾಡುತ್ತಿದೆ. ಜನತಾ ದಳದಲ್ಲಿಯ ಅಶಿಸ್ತು, ಗುಂಪುಗಾರಿಕೆಯಿಂದಾಗಿ ಜನರ ಸಮಸ್ಯೆಗಳಿಗೆ ಪರಿಹಾರವೇ ಒದಗದಂತಾಗಿದೆ. ಜನವಿರೋಧಿ ನಿಲುಮೆ ತಾಳಿದ ಕಾಂಗ್ರೆಸ್ಸನ್ನು ಸೋಲಿಸಿ ಅಧಿಕಾರ ಧಾರಣೆ ಮಾಡಿದಾಗ, ಜನತಾ ದಳದ ಸರಕಾರ ಆಡಳಿತೆಯನ್ನು ಚುರುಕುಗೊಳಿಸಿ, ಲಂಚಗುಳಿತನ ನಿರ್ಮೂಲನೆಮಾಡಿ ಸಮಗ್ರ ಕರ್ನಾಟಕದ ಬೆಳವಣಿಗೆಗಾಗಿ ಪರ್ಯಾಯ ಕಾರ್ಯಕ್ರಮವನ್ನು ಹಮ್ಮಿಕೊಂಡು ಜನಪರ ನೀತಿಯನ್ನನುಸರಿಸಬಹುದೆಂಬ ಆಸೆ ಆಕಾಂಕ್ಷೆ ಹೊಂದಿದ್ದ ರಾಜ್ಯದ ಜನ ಈ ಆಡಳಿತೆಯಿಂದ ಭ್ರಮನಿರಸನಗೊಂಡಿರುವ ಅಂಶ ಪಟೇಲ ಸರಕಾರವನ್ನು ಎಚ್ಚರಿಸಿದಂತೆ ಕಂಡು ಬರುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ, 76 ಸದಸ್ಯರನ್ನು ಹೊಂದಿರುವ ರಾಜ್ಯದ ವಿಧಾನ ಪರಿಷತ್ತಿಗೆ 26 ಸದಸ್ಯರ ಚುನಾವಣೆ ನಡೆಸಬೇಕಾದ ಸಂಧಿ ಕಾಲ ಬಂದಿದೆ. ಈಗಾಗಲೇ ನಡೆದ ವಿಧಾನ ಸಭೆ, ಲೋಕ ಸಭೆ ಉಪ ಚುನಾವಣೆಗಳಲ್ಲಿ ಸೋಲುಂಡ ಜನತಾದಳ ಸ್ಥಳೀಯ ಸಂಸ್ಥೆಗಳ ಸದಸ್ಯ ರಿಂದ ಆರಿಸಲ್ಪಡಬೇಕಾದ ಈ 26 ಸ್ಥಾನಗಳ ಚುನಾವಣೆಯ ಫಲಿತಾಂಶದ ಕುರಿತು ಚಿಂತಿಸಬೇಕಾಗಿದೆ. ಅದರ ಪರಿಣಾಮ ತಮ್ಮ ಸರಕಾರದ ಮೇಲೆ ಏನಾಗಬಹುದೆಂಬ ಭೀತಿ ಅವರನ್ನು ಆವರಿಸಿದಂತೆ ಕಂಡು ಬರುತ್ತದೆ. ಆ ಕಾರಣದಿಂದಲೇ ಈ ದಂಡಯಾತ್ರೆಯನ್ನು ಹಮ್ಮಿಕೊಳ್ಳುವ ಪ್ರಯತ್ನವನ್ನು ಜನತಾದಳ ಸರ್ಕಾರ ಮಾಡಿತ್ತೆಂದರೆ ತಪ್ಪಾಗಲಾರದು.

ದಂಡಯಾತ್ರೆಯ ಪ್ರಯೋಜನವೇನು?


ದೇವೇಗೌಡ ಮಂತ್ರಿ ಮಂಡಲದಲ್ಲಿದ್ದ ಕೆಲವು ಮಂತ್ರಿಗಳನ್ನು ಕೈಬಿಟ್ಟು, ಗಜಗಾತ್ರದ ಹೊಸ ಮಂತ್ರಿ ಮಂಡಲವನ್ನು ರಚಿಸಿದಂದಿನಿಂದಲೇ ಜನತಾದಳದಲ್ಲಿ ಗುಂಪುಗಾರಿಕೆ, ಅಸಮಾಧಾನದ ಹೊಗೆಯೆದ್ದಿತ್ತು. ರಾಮಕೃಷ್ಣ ಹೆಗಡೆಯವರನ್ನು ಪಕ್ಷದಿಂದ 6 ವರ್ಷ ಅಮಾನತುಗೊಳಿಸಿದ ನಂತರ ಜನತಾದಳದಲ್ಲಿಯ ಹೆಗಡೆ ಪರ ಗುಂಪಿನ ಚಟುವಟಿಕೆ ಕಾಣಬಂತು. ಒಳಗಿಂದೊಳಗೆ ಕುದಿಯುತ್ತಿದ್ದ ಈ ಬೆಂಕಿಯ ಕಾವು ಉಪಚುನಾವಣೆ ಹಾಗೆಯೇ ಸ್ಥಳೀಯ ಸಂಸ್ಥೆಗಳ ಚುನಾವಣೆಗಳ ಮೇಲೂ ಪರಿಣಾಮ ಬೀರಿತ್ತು. ಕೇಂದ್ರ ಸರ್ಕಾರದ ಆರ್ಥಿಕ ನೀತಿಯನ್ನು ಹೆಚ್ಚಿನ ಸ್ಫೂರ್ತಿ ಯಿಂದಲೇ ರಾಜ್ಯದಲ್ಲಿ ಅನುಷ್ಠಾನಕ್ಕೆ ತರುವುದರಲ್ಲೇ ಸಂತೃಪ್ತಿಗೊಂಡು ಕಾರ್ಖಾನೆಗಳ ಮುಚ್ಚುವಿಕೆಗೆ ಬೆಲೆ ಹೆಚ್ಚಳಕ್ಕೆ, ನಿರುದ್ಯೋಗ ಉಲ್ಬಣಕ್ಕೆ ಕಾರ್ಮಿಕ, ರೈತರ ಮೇಲಿನ ದಬ್ಬಾಳಿಕೆಗೆ, ಹೆಚ್ಚು ಆಸಕ್ತಿ ತೋರಿಸಿದ ದಳ ಸರಕಾರ ಜನರ ಮಧ್ಯೆ ಮತ್ತಷ್ಟು ವಿಶ್ವಾಸ ಕಳೆದುಕೊಳ್ಳುವಂತಾಯಿತು. ಪೋಲೀಸ್ ಗೋಲಿಬಾರಿನಿಂದ ಸಾವು ಜನತಾದಳ ಸರಕಾರದ ವಿಷಯದಲ್ಲಿ ಜನರ ಮಧ್ಯೆ ದ್ವೇಷ ಕುದುರುವಂತೆ ಮಾಡಿದೆ. ಪಟೇಲ್ ಮಂತ್ರಿ ಮಂಡಲಕ್ಕೆ ಇವುಗಳ ಬಿಸಿ ತಾಗಿದಂತೆ ಕಂಡು ಬಂದಿರುವುದರಿಂದಲೇ ತಮ್ಮ ಪಕ್ಷ ಮತ್ತು ಜನರಲ್ಲುಂಟಾಗಿರುವ ಅಗಾಧ ಅಸಮಾಧಾನಕ್ಕೆ ಸಮಜಾಯಿಷಿ ನೀಡಲು ದಂಡಯಾತ್ರೆ ನಡೆಸಿ, ಹುಬ್ಬಳಿಯಲ್ಲಿ ಮಂತ್ರಿಮಂಡಲದ ಸಭೆ ನಡೆಸುವ ವಿಚಾರ ಜೆ.ಎಚ್. ಪಟೇಲ ಮಂತ್ರಿಮಂಡಲದಲ್ಲಿ ಮೂಡಿ ಬಂದಿರಬೇಕು. ಆ ನಿರ್ಧಾರದಿಂದಲೇ ಮುಖ್ಯಮಂತ್ರಿ ಜೆ.ಎಚ್. ಪಟೇಲರ ಒಂದು ತಂಡ ಮುಂಬಯಿ ಕರ್ನಾಟಕದಲ್ಲಿಯೂ, ಉಪ-ಮುಖ್ಯಮಂತ್ರಿ ಸಿದ್ರಾಮಯ್ಯ ನವರ ನೇತೃತ್ವದಲ್ಲಿ ಮತ್ತೊಂದು ತಂಡ ಹೈದರಾ

ಪುಟ 8 ನೋಡಿ

ಸಿಪಿಐ(ಎಂ) ರಾಜ್ಯ ಸಮ್ಮೇಳನ - ಡಿ. 30–ಜ.2

ಮುಂದಿನ ವರ್ಷದ ಫೆಬ್ರುವರಿ ತಿಂಗಳಲ್ಲಿ ನಡೆಯಲಿರುವ ಸಿಪಿಐ(ಎಂ)ನ 16ನೇ ಮಹಾಧಿವೇಶನದ ಪೂರ್ವಭಾವಿಯಾಗಿ ಸಿಪಿಐ(ಎಂ) ನ ರಾಜ್ಯ ಸಮ್ಮೇಳನ ಕೋಲಾರದಲ್ಲಿ ಡಿಸೆಂಬರ್ 30 ರಿಂದ ಜನವರಿ 2 ರವರೆಗೆ ನಡೆಯಲಿದೆ. ಸಮ್ಮೇಳನದ ಆರಂಭದ ದಿನವಾದ ಡಿಸೆಂಬರ್ 30 ರಂದು ಬೃಹತ್ ರ್‍ಯಾಲಿ ನಡೆಯಲಿದೆ.

ಸ್ವಾತಂತ್ರ್ಯದ ಸ್ವರ್ಣ ಜಯಂತಿ ವರ್ಷದಲ್ಲಿನ ಗಾಂಧೀ ಜಯಂತಿಯ ಸಂದರ್ಭದಲ್ಲಿ ಮಾರ್ಕ್ಸ್‌ವಾದಿ ಚಿಂತಕ ಇ.ಎಂ.ಎಸ್. ನಂಬೂದಿರಿಪಾದ್‌ರವರ ಒಂದು ಚಿಂತನೆ.



ಭಾರತೀಯ ಸ್ವಾತಂತ್ರ್ಯಹೋರಾಟದಲ್ಲಿ ಗಾಂಧೀವಾದ ಹಾಗೂ ಮಾರ್ಕ್ಸ್‌ವಾದ

ಪ್ರಥಮ ಮಹಾಯುದ್ಧ ಕೊನೆಗೊಂಡಾಗ, ನಮ್ಮ ಸ್ವಾತಂತ್ರ್ಯ ಹೋರಾಟ ಒಂದು ಅಖಿಲ ಭಾರತ ಸಾಮೂಹಿಕ ಆಂದೋಲನವಾಗಿ ಪರಿವರ್ತನೆಗೊಂಡಿತು. ಮಹಾತ್ಮಾ ಗಾಂಧೀ ಈ ಆಂದೋಲನದ ಸರ್ವ ಮಾನ್ಯ ನಾಯಕರಾದರು. 1919-21 ರ ಅಸಹಕಾರ-ಖಿಲಾಫತ್ ಚಳುವಳಿಗಳು, ಭಾರತೀಯ ಜನಸಾಮಾನ್ಯರ ಎಲ್ಲ ವಿಭಾಗಗಳನ್ನೂ, ನಿರ್ದಿಷ್ಟವಾಗಿ ಗಾಂಧೀಜಿ "ದರಿದ್ರನಾರಾಯಣರು" ಎಂದು ಕರೆದ ಕಾರ್ಮಿಕರು, ರೈತರು ಮುಂತಾದವರನ್ನೊಳಗೊಂಡ ಮೊದಲ ಸಾಮೂಹಿಕ ಆಂದೋಲನವಾಯಿತು.

ಕಾಂಗ್ರೆಸ್ ಪಕ್ಷವನ್ನು ನಿಯಂತ್ರಣದಲ್ಲಿಟ್ಟುಕೊಂಡಿದ್ದ ಮಂದಗಾಮಿಗಳಂತೆಯೇ ಗಾಂಧೀಜಿ ಕೂಡ ಬ್ರಿಟನ್ನಿನ ಬಿಕ್ಕಟ್ಟಿನ ಲಾಭ ಪಡೆದು, ವಿದೇಶಿ ಸಹಾಯದೊಡನೆ ಸ್ವಾತಂತ್ರ್ಯ ಗಳಿಸುವ ಧೋರಣೆ ಹೊಂದಿದ್ದ ಕ್ರಾಂತಿಕಾರಿಗಳಿಂದ ಹಾಗೂ ವ್ಯಕ್ತಿಗತ ಉಗ್ರಗಾಮಿ ಚಟುವಟಿಕೆಗಳನ್ನು ಸಂಘಟಿಸಿದ ರಾಷ್ಟ್ರೀಯ ಕ್ರಾಂತಿಕಾರಿಗಳಿಂದ ಬಹುದೂರ ನಿಂತರು. ರಾಷ್ಟ್ರೀಯ ಕ್ರಾಂತಿಕಾರಿಗಳ ಈ ಚಳುವಳಿಯು ಹಿಂದೆ ಲೋಕಮಾನ್ಯ ತಿಲಕರು ಆರಂಭಿಸಿದ ಸಾಮೂಹಿಕ ಹೋರಾಟದ ಮುಂದುವರಿಕೆಯಾಗಿತ್ತು. ಆದರೆ ಇದು ಕೇವಲ ಮಹಾರಾಷ್ಟ್ರ, ಪಂಜಾಬ್, ಉತ್ತರ ಪ್ರದೇಶ, ಬಂಗಾಳದ ಕೆಲವೇ ಭಾಗಗಳಿಗೆ ಸೀಮಿತವಾಗಿತ್ತು.

ಗಾಂಧೀಜಿಯವರು ನೇತೃತ್ವ ನೀಡಿದ ಹೋರಾಟ ಅತ್ಯಂತ ಸಮರಶೀಲವಾದ ಅಖಿಲಭಾರತ ಹೋರಾಟವಾಗಿತ್ತು. ಆದರೆ ಇದಕ್ಕೆ ಬಂಡವಾಳಶಾಹಿ ಪರಿಮಿತಿಗಳಿದ್ದವು. ಭಾರತೀಯ ಜನತೆ ಪ್ರಕ್ಷುಬ್ಧರಾಗಿದ್ದಾಗ, ಹೊಸ ರೀತಿ ಕ್ರಾಂತಿಕಾರಿಗಳು ರಂಗಕ್ಕೆ ಬರಲು ತೊಡಗಿದಾಗ, ಗಾಂಧೀಜಿಯವರ ಹೋರಾಟ ಪ್ರಾರಂಭಗೊಂಡಿತು. ಬ್ರಿಟಿಷ್ ಅಧಿಕಾರಿಗಳು ಹಾಗೂ ಅವರ ಭಾರತೀಯ ಜೊತೆಗಾರರ ವಿರುದ್ಧ ವ್ಯಕ್ತಿಗತ ಉಗ್ರಗಾಮಿ ಚಟುವಟಿಕೆ ನಡೆಸಿದ ಹಿಂದಿನ ರಾಷ್ಟ್ರೀಯ ಕ್ರಾಂತಿಕಾರಿಗಳಿಗಿಂತ ಈ ಹೊಸ ರೀತಿಯ ಕ್ರಾಂತಿಕಾರಿಗಳು ಭಿನ್ನರಾಗಿದ್ದರು. ವಿಶ್ವರಾಜಕೀಯದ ಹೊಸ ಬೆಳವಣಿಗೆ ಅಕ್ಟೋಬರ್ ಕ್ರಾಂತಿ ಹಾಗೂ ಸೋವಿಯತ್ ಯೂನಿಯನ್ ನ ಉದಯದೊಂದಿಗೆ ಇವರು ತಮ್ಮನ್ನು ಗುರುತಿಸಿಕೊಂಡಿದ್ದರು. ಇವರು ಹಿಮಾಲಯದ ದುರ್ಗಮ ಹಾದಿಯಲ್ಲಿ ಹೊಸ ಕ್ರಾಂತಿಯ ನಾಡಿಗೆ "ತೀರ್ಥಯಾತ್ರೆ"ಯನ್ನೇ ನಡೆಸಿದರು. ಇವರು ನಂತರ ಕಮ್ಯುನಿಸ್ಟ್ ಕ್ರಾಂತಿಕಾರಿಗಳಾಗಿ ರೂಪಾಂತರಗೊಂಡರು.

ಕ್ರಾಂತಿಯ ಹೊಸ ಪವಿತ್ರ ನಾಡಿಗೆ 'ತೀರ್ಥಯಾತ್ರೆ' ಕೈಗೊಳ್ಳುವ ಸಾಹಸ ಮಾಡದ ಹೊಸ ರೀತಿಯ ರಾಷ್ಟ್ರೀಯ ಕ್ರಾಂತಿಕಾರಿಗಳು ಮುಂಬೈ, ಕಲ್ಕತ್ತಾ, ಪಂಜಾಬ್, ಮದ್ರಾಸ್, ಮುಂತಾದೆಡೆ ಕಮ್ಯುನಿಸ್ಟ್ ಗುಂಪುಗಳನ್ನೂ ರೂಪಿಸಿಕೊಂಡರು.


ಈ ಹೊಸ ಕ್ರಾಂತಿಕಾರಿಗಳು, ಮಹೋನ್ನತ ರಷ್ಯನ್ ಕ್ರಾಂತಿಯ ಬಗ್ಗೆ ಪ್ರಚಾರ ಕೈಗೊಳ್ಳುತ್ತಾ, ಕಾರ್ಮಿಕರು ಹಾಗೂ ರೈತರನ್ನು ಅವರ ದೈನಂದಿನ ಹೋರಾಟಗಳಿಗಾಗಿ ಸಂಘಟಿಸುತ್ತಾ, ಉತ್ಸಾಹಪೂರ್ಣ ಚಟುವಟಿಕೆಯನ್ನು ಪ್ರಾರಂಭಿಸಿದರು. ಭಾರತದಲ್ಲಿ ಮಾರ್ಕ್ಸ್‌ವಾದ ಹೀಗೆ ಆರಂಭವಾಯಿತು. ದೇಶಾದ್ಯಂತ ಹಂಚಿಹೋಗಿದ್ದ, ಕಮ್ಯುನಿಸ್ಟ್ ಗುಂಪುಗಳಿಗಿಂತಲೂ, ಗಾಂಧೀಜಿ ನೇತೃತ್ವದ ಸಿದ್ಧಾಂತ ಹಾಗೂ ರಾಜಕಾರಣ ಬಹುದೊಡ್ಡ ಶಕ್ತಿ ಎಂಬುದನ್ನು ಗಾಂಧೀಜಿಯವರ ನೇತೃತ್ವದಲ್ಲಿ ನಡೆದ ಅಸಹಕಾರ ಚಳುವಳಿ ಸ್ಪಷ್ಟಪಡಿಸಿತ್ತಾದರೂ ಹೊಸ ಕಮ್ಯುನಿಸ್ಟ್ ಗುಂಪುಗಳು ಹೆಚ್ಚು ಸಕ್ರಿಯವಾಗಿದ್ದವು.

ಸಣ್ಣ ಸಣ್ಣ ಕಮ್ಯುನಿಸ್ಟ್ ಗುಂಪುಗಳು ಭಾರತದೆಲ್ಲೆಡೆ ಪ್ರಾರಂಭಿಸಿದಾಗಲೇ ಗಾಂಧೀವಾದಕ್ಕೆ ದೇಶಾದ್ಯಂತ ಆಳವಾಗಿ ಬೇರೂರಲಾಂಭಿಸಿತು ಎಂಬುದು ಗಮನಾರ್ಹ. ಸೈದ್ಧಾಂತಿಕ, ರಾಜಕಾರಣ ಹಾಗೂ ಸಂಘಟನಾತ್ಮಕವಾಗಿ ಇವೆರಡೂ ಸಂಘಟನೆಗಳು ಪರಸ್ಪರ ವಿರುದ್ಧವಾಗಿದ್ದರೂ, ಏಕಕಾಲದಲ್ಲಿ ಇವು ಬೆಳವಣಿಗೆ ಹೊಂದಿದವು. ಗಾಂಧೀವಾದಕ್ಕೆ ಲಕ್ಷಾಂತರ, ಕೋಟಿಗಟ್ಟಲೆ ಅನುಯಾಯಿಗಳಿದ್ದರೆ, ಮಾರ್ಕ್ಸ್‌ವಾದವನ್ನು ಅನುಸರಿಸಿದವರು ಕೆಲವೇ ನೂರು, ಸಾವಿರ ಮಂದಿ. ಕಮ್ಯುನಿಸ್ಟರು ಅಲ್ಲಲ್ಲಿ ಚದುರಿದ್ದ ಸಣ್ಣ ಗುಂಪುಗಳಾಗಿದ್ದಾಗ, ಗಾಂಧೀಜಿ ನೇತೃತ್ವದ ಕಾಂಗ್ರೆಸ್ ಸುಸಂಘಟಿತವಾದ ಸಾಮೂಹಿಕ ಆಂದೋಲನವಾಗಿತ್ತು.

ಈ ಎರಡೂ ಸಂಘಟನೆಗಳ ವಿಶ್ವ ಕಣ್ಣೋಟ ಪರಸ್ಪರ ವಿರೋಧಿ ಎನ್ನುವಷ್ಟರ ಮಟ್ಟಿಗೆ ಭಿನ್ನವಾಗಿತ್ತು. ಗಾಂಧೀವಾದದ ಸೈದ್ಧಾಂತಿಕ ರಾಜಕೀಯ ನೆಲೆಗಟ್ಟು ಅಹಿಂಸಾತ್ಮಕ ಸಾಮೂಹಿಕ ಹೋರಾಟವಾಗಿದ್ದರೆ, ಮಾರ್ಕ್ಸ್‌ವಾದ ಸಮರಶೀಲ ಸಾಮೂಹಿಕ ಹೋರಾಟಕ್ಕೆ ಒತ್ತು ನೀಡಿತ್ತು. ಇದು ಶೋಷಕರ ವಿರುದ್ಧ ಅಗತ್ಯವಿದ್ದರೆ ಬಲಪ್ರಯೋಗಕ್ಕೂ ಸಿದ್ಧವಾಗಿತ್ತು. ಗಾಂಧೀವಾದ ಭೂಮಾಲಿಕರು, ಬಂಡವಾಳಗಾರರನ್ನೂ ಜನತೆಗೋಸ್ಕರ ಆಸ್ತಿಯನ್ನು ಕಾಪಾಡುವ ಟ್ರಸ್ಟಿ ಅಥವಾ ಧರ್ಮಾದರ್ಶಿಗಳು ಎಂದು ಪರಿಗಣಿಸಿತ್ತು.ತದ್ವಿರುದ್ಧವಾಗಿ ಮಾರ್ಕ್ಸ್‌ವಾದ ಬ್ರಿಟಿಶ್ ಸಾಮ್ರಾಜ್ಯಶಾಹಿಯೊಂದಿಗೆ ಭೂಮಿ, ಕೈಗಾರಿಕೆ, ಗಣಿಗಳು ಮತ್ತಿತರೇ ರಾಷ್ಟ್ರೀಯ ಸಂಪತ್ತನ್ನು ಹೊಂದಿರುವ ಭಾರತೀಯ ಮಾಲಿಕರನ್ನು ಕಿತ್ತೊಗೆಯುಲು ಕ್ರಾಂತಿಗೆ ಬದ್ಧವಾಗಿತ್ತು. ಮಾರ್ಕ್ಸ್‌ವಾದಿಗಳಿಗೆ ದುಡಿಯುವ ಜನರು ನಡೆಸುವ ಕಾರ್ಷಿಕ ಕ್ರಾಂತಿಯು ಸಾಮ್ರಾಜ್ಯಶಾಹಿ ವಿರೋಧಿ ರಾಷ್ಟ್ರೀಯ ಕ್ರಾಂತಿಯ ಅನಿವಾರ್ಯ ಅಂಗವಾಗಿತ್ತು.

ಆದರೂ, ಬ್ರಿಟಿಷ್ ಸಾಮ್ರಾಜ್ಯಶಾಹಿಗಳಿಗಿದುರಾದ ಹೋರಾಟಗಳಲ್ಲಿ ಎರಡೂ ಸಂಘಟನೆಗಳು ಪರಸ್ಪರ ಕೈಜೋಡಿಸಿದವು. ಆಗಿನ ಕೇಂದ್ರ ಸಮಸ್ಯೆಯ ಪರಿಹಾರದಲ್ಲಿ ಎರಡೂ ಎದುರು ವರ್ಗ ಬಣಗಳು- ಬಂಡವಾಳಶಾಹಿ ಹಾಗೂ ಕಾರ್ಮಿಕರ ವರ್ಗ -ಪರಸ್ಪರ ಸಹಕರಿಸಬೇಕಾದುದು ಅಗತ್ಯವಾಗಿತ್ತು. ಆದರೆ, ಕಾರ್ಮಿಕ ವರ್ಗ ಹಾಗೂ ಅವರ ಮಿತ್ರರುಗಳಾದ ಪಟ್ಟಣ ಹಾಗೂ ಗ್ರಾಮೀಣ ಪ್ರದೇಶದ ಬಡ ಜನ ಸಮೂಹಗಳು ತಮ್ಮದೇ ಸ್ವತಂತ್ರ ದಾರಿಯನ್ನು ಕಂಡುಕೊಳ್ಳಬೇಕಾಗಿತ್ತು . ಎರಡು ವರ್ಗಗಳ ನಡುವಿನ ಸಿದ್ಧಾಂತ, ನೀತಿ ಹಾಗೂ ಸಂಘಟನೆಗಳ ನಡುವಿನ ಸಂಬಂಧದ ಅಂತಃಸತ್ವವು ಬ್ರಿಟಿಷ್ ಸಾಮ್ರಾಜ್ಯಶಾಹಿ ಗಳೆದುರು ಐಕ್ಯತೆ ಮತ್ತು ಭೂಮಾಲಿಕ ಬಂಡವಾಳಶಾಹಿ ಶೋಷಕ ವರ್ಗಗಳ ದಬ್ಬಾಳಿಕೆ ಹಾಗೂ ಶೋಷಣೆಗಳನ್ನು ಸಂಯೋಜಿಸುವುದೇ ಈ ಎರಡು ವರ್ಗಗಳ, ಎರಡು ಸಿದ್ಧಾಂತಗಳ, ಧೋರಣೆಗಳ ಮತ್ತು ಸಂಘಟನೆಗಳ ನಡುವಿನ ಸಂಬಂಧಗಳ ಸಾರಾಂಶವಾಗಿತ್ತು. ಆರಂಭದಿಂದಲೂ ರಾಷ್ಟ್ರೀಯ ಹೋರಾಟದಲ್ಲಿ ಎರಡು ವರ್ಗಗಳ ನಡುವಿನ ಈ 'ಐಕ್ಯತೆ ಹಾಗೂ ಹೋರಾಟ' ವು ಒಂದು ವಾಸ್ತವ ಸಂಗತಿಯಾಗಿತ್ತು. ಇದು 1947 ರ ಆಗಸ್ಟ್ 15 ರಂದು ಸ್ವಾತಂತ್ರ್ಯ ಗಳಿಸುವವರೆಗೂ ಮುಂದುವರಿಯಿತು. ಸಾಮ್ರಾಜ್ಯಶಾಹಿಗೆದುರಾದ ಸಾಮೂಹಿಕ ರಾಜಕೀಯ ಆಂದೋಲನದ ಬೆಳವಣಿಗೆಯ ಪ್ರತಿಘಟ್ಟದಲ್ಲೂ ಕಾಂಗ್ರೆಸ್ಸಿನ ಬಲಪಂಥೀಯ ನೇತೃತ್ವ ಹಾಗೂ ಅದರಲ್ಲಿನ ಎಡಪಂಥೀಯರು ನಿರಂತರವಾಗಿ 'ಐಕ್ಯತೆ ಹಾಗೂ ಹೋರಾಟ' ದ ಸಂಬಂಧವನ್ನು ಕಾಯ್ದುಕೊಂಡರು.

1935-36 ಹಾಗೂ 1939-40 ರಲ್ಲಿ ಕಾಂಗ್ರೆಸ್ಸಿನ ಎಡ ಮತ್ತು ಬಲಪಂಥೀಯರ ನಡುವಿನ ಸಂಬಂಧ, ಒಟ್ಟಾರೆ ಕಾಂಗ್ರೆಸ್ ಹಾಗೂ ಕಮ್ಯುನಿಸ್ಟ್‌ರ ನಡುವಿನ ಸಂಬಂಧ ಐಕ್ಯ ಹೋರಾಟದ ಸಂಬಂಧವಾಗಿತ್ತು. ಆದರೆ, 1939-40 ರಲ್ಲಿ ಈ ಐಕ್ಯ ಹೋರಾಟದ ಸಂಬಂಧ ಮುರಿದುಬಿತ್ತು. ಇದರಿಂದಾಗಿ, 1942 ರಲ್ಲಿ ಕ್ವಿಟ್ ಇಂಡಿಯಾ ಹೋರಾಟ ಬ್ರಿಟಿಶ್ ಸಾಮ್ರಾಜ್ಯಶಾಹಿಗೆದುರಾದ ಹೋರಾಟ ನಡೆಸುವ ಜನರ ಇಚ್ಛಾಶಕ್ತಿಯ ಅಭಿವ್ಯಕ್ತಿಯಾಗಿದ್ದರೂ ಸಹಾ, ಕಮ್ಯುನಿಸ್ಟರು ಈ ಹೋರಾಟದಿಂದ ದೂರ



ನಿಲ್ಲುವ ಸ್ಥಿತಿ ಉಂಟಾಯಿತು. ಕಮ್ಯುನಿಸ್ಟರು ಜಪಾನಿನ ಸೈನಿಕ ಶಾಹಿಗಳ ರಾಜತಾಂತ್ರಿಕ ಹಾಗೂ ಮಿಲಿಟರಿ ಸಹಾಯದೊಂದಿಗೆ ಭಾರತವನ್ನು ವಿಮೋಚನೆ ಗೊಳಿಸಲು ಸುಭಾಶ್ ಚಂದ್ರ ಬೋಸ್ ನಡೆಸಿದ ಪ್ರಯತ್ನದಿಂದಲೂ ದೂರ ಉಳಿದರು.

ಇದು ಸಾಮ್ರಾಜ್ಯಶಾಹಿ ವಿರೋಧಿ ಜನತೆ ಹಾಗೂ ಕಮ್ಯುನಿಸ್ಟರ ನಡುವೆ ತಾತ್ಕಾಲಿಕವಾಗಿ ಬಿರುಕನ್ನು ಸೃಷ್ಟಿಸಿದರೂ ಸಹಾ ರಾಷ್ಟ್ರೀಯ ಹಿತಾಸಕ್ತಿಗೆ ಮಾರಕ ಎಂದು ಅವರು ಪರಿಗಣಿಸಿದ್ದರು. ಅದರಿಂದ ದೂರ ನಿಲ್ಲುವ ನೀತಿಯನ್ನು ಕಮ್ಯುನಿಸ್ಟರು ಅನುಸರಿಸಿದ್ದರಿಂದ ಕೊನೆಗೂ ತಲೆ ಎತ್ತಿ ನಿಲ್ಲುವುದು ಸಾಧ್ಯವಾಯಿತು. ಅಂದು ಕಮ್ಯುನಿಸ್ಟರು ತಾತ್ಕಾಲಿಕವಾಗಿ ಸಾಮ್ರಾಜ್ಯಶಾಹಿ ವಿರೋಧಿ ಜನತೆಯಿಂದ ದೂರವಾಗುವ ಒಂದು ಅಪಾಯಕ್ಕೆ ತಲೆ ಕೊಟ್ಟಿದ್ದರು. 'ಕ್ವಿಟ್ ಇಂಡಿಯಾ' ಆಂದೋಲನವನ್ನು ಬ್ರಿಟಿಷರು ದಮನ ಮಾಡಿ ಫಾಸಿಸ್ಟ್ ವಿರೋಧಿ ವಿಶ್ವ ಮಹಾಯುದ್ಧ ಫಾಸಿಸ್ಟ ವಿರೋಧಿ ಶಕ್ತಿಗಳ ವಿಜಯದೊಂದಿಗೆ ಕೊನೆಗೊಂಡಾಗ ಕಮ್ಯುನಿಸ್ಟರು ಮತ್ತೆ ಹಲವಾರು ಸಾಮ್ರಾಜ್ಯಶಾಹಿ ವಿರೋಧಿ ಸಮರ ಶೀಲ ಹೋರಾಟಗಳಲ್ಲಿ ತಲ್ಲೀನರಾದರು. ಇದರಿಂದಾಗಿ ಕೊನೆಗೆ ಮಧ್ಯಮವರ್ಗದ ನೌಕರಗಳ ಹೋರಾಟಗಳು, ಬಂಗಾಲದ ತೇಭಾಗ, ಮಹಾರಾಷ್ಟ್ರದ ವೊರ್ಲಿ ಆದಿವಾಸಿ ಹೋರಾಟ, ತಿರುವಾಂಕೂರಿನ ಪುನ್ನಪ್ರ- ವಯಲಾರ್ ಮಲಬಾರಿನ ರೈತ ಹೋರಾಟಗಳು ಭುಗಿಲೆದ್ದವು. ಆಗಲೂ ಸಹಾ ರಾಷ್ಟ್ರಮಟ್ಟದಲ್ಲಿ ಕಮ್ಯುನಿಸ್ಟ್ ಪಕ್ಷ ರಾಜಕೀಯವಾಗಿ ಬಹು ಸಣ್ಣ ಶಕ್ತಿಯಾಗಿದ್ದರೂ ಒಂದು ಪ್ರಧಾನ ಕ್ರಾಂತಿಕಾರಿ ಶಕ್ತಿಯಾಗಿ ಅದು ಗಮನ ಸೆಳೆಯಿತು. ಏಕೆಂದರೆ ಅದು ರಾಷ್ಟ್ರೀಯ ಆಂದೋಲನ ಬಂಡವಾಳಶಾಹಿ ನೇತೃತ್ವದ ಸಂಧಾನಪರ ನೀತಿಗಳಿಗೆ ಸವಾಲು ಹಾಕಿತ್ತು.

ಈ ಸಂಧಾನದ ನೀತಿಯಿಂದಾಗಿ ಒಂದೆಡೆ ಬ್ರಿಟಿಷ್ ಸಾಮ್ರಾಜ್ಯಶಾಹಿ, ಮತ್ತೊಂದೆಡೆ ಕಾಂಗ್ರೆಸ್ ಮುಸ್ಲಿಂ ಲೀಗಿನ ನಡುವೆ ಮಾತುಕತೆಗಳತ್ತ ಸಾಗಿ, ಇದರ ಫಲವಾಗಿಯೇ ಕಾಂಗ್ರೆಸ್ ಹಾಗೂ ಮುಸ್ಲಿಂ ಲೀಗ್ ಎತ್ತಿದ ಬೇಡಿಕೆಗಳು- ಕಾಂಗ್ರೆಸ್‌ನ ಕ್ವಿಟ್ ಇಂಡಿಯಾ ಅಥವಾ ಭಾರತ ಬಿಟ್ಟು ತೊಲಗಿ ಹಾಗೂ ಮುಸ್ಲಿಂ ಲೀಗಿನ ಡಿವೈಡ್ ಅಂಡ್ ಕ್ವಿಟ್ (ವಿಭಜಿಸಿ, ತೊಲಗಿ)- ಇವೆರಡೂ ಈಡೇರಿದವು. ಹಿಂದೂ ಬಹುಸಂಖ್ಯಾತ ಭಾರತದಲ್ಲಿ ಕಾಂಗ್ರೆಸ್ ಹಾಗೂ ಮುಸ್ಲಿಂ ಬಹುಸಂಖ್ಯಾತ ಪಾಕಿಸ್ತಾನದಲ್ಲಿ ಮುಸ್ಲಿಂ ಲೀಗಿಗೆ ಅಧಿಕಾರ ಹಸ್ತಾಂತರಗೊಂಡಿತು.

ಮಹಾತ್ಮಾಗಾಂಧೀಜಿಯವರನ್ನು ಬಿಟ್ಟು ಉಳಿದೆಲ್ಲಾ ಕಾಂಗ್ರೆಸ್ ನೇತಾರರು ಇದನ್ನು ಮಹಾವಿಜಯವೆಂದು ಕೊಂಡಾಡಿದರು. ಆದರೆ, ಗಾಂಧೀಜಿ ಆಗಸ್ಟ್ 15 ರ 'ಸ್ವಾತಂತ್ರ್ಯ ಸಾಧನೆ'ಯ ಯಾವುದೇ ಆಚರಣೆಗಳಲ್ಲಿ ಭಾಗವಹಿಸಲು ನಿರಾಕರಿಸಿದರು. ಭಾರತ ಪಾಕಿಸ್ತಾನಗಳನ್ನು ವಿಭಜಿಸಿದ ಗಡಿಯ ಎರಡೂ ಬದಿಗಳಲ್ಲಿ ಕೋಮುಗಲಭೆಗಳಿಂದ ನೊಂದ ಜನರನ್ನು ಸಂತೈಸಲು ಗಾಂಧೀಜಿ ಹೊರಟರು. ಕಾಂಗ್ರೆಸ್ ಪಕ್ಷವನ್ನು ಒಂದು ರಾಜಕೀಯ ಪಕ್ಷವಾಗಿ ಮುಂದುವರಿಸದೇ ಅದನ್ನು ವಿಸರ್ಜಿಸಿ, ರಾಜಕೀಯೇತರ ಲೋಕ ಸೇವಕ ಸಂಘ ಸ್ಥಾಪಿಸಲು ಕಾಂಗ್ರೆಸ್ಸಿಗರಿಗೂ ಸಲಹೆ ಇತ್ತರು.

ಗಾಂಧೀವಾದ, ಮಾರ್ಕ್ಸ್‌ವಾದಗಳ ನಡುವೆ ಮತ್ತೊಮ್ಮೆ ಭಿನ್ನಾಭಿಪ್ರಾಯ ಉಂಟಾಯಿತು. ಲೋಕ ಸೇವಕ ಸಂಘವೆಂಬ ರಾಜಕೀಯೇತರ ಗಾಂಧೀ ಧೋರಣೆಯನ್ನು ವಿರೋಧಿಸಿದ ಕಮ್ಯುನಿಸ್ಟರು ಹೊಸ ಕಾಂಗ್ರೆಸ್ ಆಡಳಿತದ ವಿರುದ್ಧ ಹೋರಾಟ ಆರಂಭಿಸಿದರು. ಏತನ್ಮಧ್ಯೆ, ಗಾಂಧೀ ಹಾಗೂ ಅವರ ಕೆಲವು ಶಿಷ್ಯರು "ರಚನಾತ್ಮಕ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳುವ ಮೂಲಕ ರಾಜಕೀಯೇತರ ಆಂದೋಲನವನ್ನು ಪ್ರಾರಂಭಿಸಿದರು. ಆದರೆ, ಬಹುತೇಕ ಗಾಂಧೀ ಅನುಯಾಯಿಗಳು ಗಾಂಧೀಜಿಯವರ ಕಾಂಗ್ರೆಸ್ ವಿಸರ್ಜನೆಯ ಕರೆಯನ್ನು ತಿರಸ್ಕರಿಸಿ, ರಾಜಕೀಯ ಪಕ್ಷವಾಗಿ ಮುಂದುವರೆದರು. ಇದು ಇಂದಿಗೂ 1997 ರಲ್ಲೂ ಮುಂದುವರಿದಿದೆ.

ಇಂದಾದರೋ ಸ್ವಾತಂತ್ರ್ಯ ಆಂದೋಲನದಲ್ಲಿನ ಗಾಂಧೀಜಿಯವರ ಅನುಯಾಯಿಗಳು ಎಷ್ಟೊಂದು ಭ್ರಷ್ಟರೂ, ಜನವಿರೋಧಿ ಕೃತ್ಯಗಳಲ್ಲಿ ತೊಡಗಿರುವವರೂ ಆಗಿದ್ದಾರೆಂದರೆ ಉನ್ನತ ಮುಖಂಡರು ನ್ಯಾಯಾಲಯಗಳಲ್ಲಿ ಕ್ರಿಮಿನಲ್ ಆರೋಪಿಗಳಾಗಿ ನಿಂತಿದ್ದಾರೆ. ನಿಜ, ಗಾಂಧೀವಾದಿಗಳೆಂದು ಸ್ವತಃ ಕರೆದುಕೊಳ್ಳುವ, ಗಾಂಧೀಜಿಯವರ ಸಕ್ರಿಯ ರಾಜಕೀಯದಿಂದ ದೂರವಿರುವ ಸಣ್ಣ ಅಲ್ಲಲ್ಲಿ ಚದುರಿ ಹೋದ ಗುಂಪುಗಳೂ ಇವೆ.

ಇದು ಗಾಂಧೀಜಿಯ ಅನುಯಾಯಿಗಳ ಬಹುದೊಡ್ಡ ವಿಭಾಗ ಮಾರ್ಕ್ಸ್‌ವಾದಿಗಳೊಂದಿಗೆ ಸೇರಿಕೊಂಡು ಹಿಂದಿನ ಸ್ವತಂತ್ರ ಆಂದೋಲನದ ಹೊಸ ಆವೃತ್ತಿಯೊಂದನ್ನು ಅಂದರೆ ಎಡ ಪ್ರಜಾಸತ್ತಾತ್ಮಕ ಧರ್ಮ ನಿರಪೇಕ್ಷ ಶಕ್ತಿಗಳ ಹೊಸ ಐಕ್ಯತೆಯನ್ನು ಬೆಳೆಸುವ ಅವಕಾಶವನ್ನು ತೆರೆದಿಟ್ಟಿದೆ. ಅದು ಈಗಾಗಲೇ ಕೇಂದ್ರದಲ್ಲಿ ಆಳುವ ಮೈತ್ರಿ ಕೂಟವಾಗಿಬಿಟ್ಟಿದೆಯೆಂಬ ಸಂಗತಿ ಇಂತಹ ಹೊಸದೊಂದು ಶಕ್ತಿಯ ಉದಯವಾಗಿದೆ ಎಂಬುದಕ್ಕೆ ಉದಾಹರಣೆ.

ಅನುವಾದ: ಎಮ್.ದಾಸ್

ಎಂ.ಪಿ.ಎಂ. ಅವ್ಯವಹಾರ.........

ಪುಟ 1 ರಿಂದ

ಬೆಲೆಗೆ ತಮಗೆ ಬೇಕಾದವರಿಗೆ ಮಾತ್ರ ನೀಡುತ್ತಿದೆ. ಇದರಿಂದಾಗಿ ಎಂ.ಪಿ.ಎಂ. ರೂ 3 ಕೋಟಿಗೂ ಹೆಚ್ಚು ಹಣವನ್ನು ಕಳೆದುಕೊಂಡಿದೆ.

3. ಕಂಪನಿಯ ಆರ್ಥಿಕ ಪರಿಸ್ಥಿತಿ ಕಷ್ಟಕರವಾಗಿದ್ದರೂ ಕೂಡ ಆಡಳಿತ ವರ್ಗ ಕಲ್ಲಿದ್ದಲನ್ನು 6 ರಿಂದ 8 ತಿಂಗಳಿಗೂ ಹೆಚ್ಚು ಬೇಕಾಗುವಷ್ಟು ಕೊಂಡು ದಾಸ್ತಾನು ಇಟ್ಟಿದೆ ಹೀಗಾಗಿ ಈಗ ಕಾರ್ಖಾನೆಯಲ್ಲಿ ಸುಮಾರು ರೂ. 20 ಕೋಟಿ ಮೌಲ್ಯದ ಕಲ್ಲಿದ್ದಲು ದಾಸ್ತಾನು ಶೇಖರವಾಗಿದೆ.

4. ಉತ್ಪಾದನಾ ಪ್ರಮಾಣವು ಗಣನೀಯವಾಗಿ ಕಡಿಮೆಯಾಗಿದ್ದರೂ ಸಹ, ಸುಮಾರು 14 ಕೋಟಿ ಮೌಲ್ಯದ ಹತ್ತು ಸಾವಿರ ಟನ್ ಪಲ್ಪನ್ನು ವಿದೇಶಿದಿಂದ ಆಮದು ಮಾಡಿಕೊಳ್ಳಲಾಗುತ್ತಿದೆ.

5. ಕಾರ್ಖಾನೆಯಲ್ಲಿ ಆಧುನೀಕರಣದ ಹೆಸರಿನಲ್ಲಿ ಕಂಪ್ಯೂಟರ್ಸ್ ಮತ್ತು (ಸಾಫ್ಟವೇರ್) ಗಳನ್ನು ಭಾರಿ ಪ್ರಮಾಣದಲ್ಲಿ ಖರೀದಿಸುತ್ತಿದ್ದು ಯಾವುದೇ ನಿಯಮಗಳನ್ನು ಪಾಲಿಸದೇ ಅಲ್ಲದೆ ಕಾರ್ಖಾನೆಯ ಇತರ ಅಗತ್ಯಗಳನ್ನು ಮನಗಾಣದೆ ಏಕವ್ಯಕ್ತಿಯಿಂದ ಬಂದ ಬೇಡಿಕೆಯ ಮೇಲೆ ತೀರ್ಮಾನಿಸಿ ಗುತ್ತಿಗೆಯನ್ನು ನೀಡಿರುವುದನ್ನು ನೋಡಿದರೆ ಇದು ಸರ್ಕಾರಿ ಕಾರ್ಖಾನೆಯೇ ಅಥವಾ ಖಾಸಗಿ ವ್ಯಕ್ತಿಗಳ ಸ್ವಂತ ಆಸ್ತಿಯೇ ಎಂಬ ಸಂದೇಹ ಬರುತ್ತದೆ.

6. ಕಾರ್ಖಾನೆಗೆ ಯಾವುದೇ ಉಪಯೋಗವಿಲ್ಲದೆ ಮತ್ತು ಒಳ್ಳೆಯ ಉದ್ದೇಶಗಳಿಲ್ಲದೆ ನಿರ್ದೇಶಕರು (ಹಣಕಾಸು) ವಿದೇಶಿ ಪ್ರವಾಸ ಮಾಡುತ್ತಿರುವುದು ಅವರ ಹವ್ಯಾಸವಾಗಿ ಬಿಟ್ಟಿದೆ. ಕಾರ್ಖಾನೆಗೆ ಸೇರಿದಂದಿನಿಂದ ಈಗಾಗಲೇ 4 ಬಾರಿ ವಿದೇಶ ಪ್ರವಾಸ ನಡೆಸಿರುವ ಶ್ರೀಯುತರು 5 ನೇ ಭಾರಿ ಕಾರ್ಖಾನೆಗೆ ಎರಡನೇಯ ದರ್ಜೆಯ ಯಂತ್ರವೊಂದನ್ನು ನೋಡಲು ವಿದೇಶಿ ಪ್ರವಾಸಕ್ಕೆ ಸಿದ್ಧತೆ ನಡೆಸಿದ್ದಾರೆ.

7. ಅಸಮರ್ಥ ಸೆಕ್ಯೂರಿಟಿ ಏಜೆನ್ಸಿಯನ್ನು ಹೊಂದಿರುವುದು ಎಂ.ಪಿ.ಎಂ ನ ಹೆಗ್ಗಳಿಕೆ, ಬೆಲೆಯಲ್ಲಿ ಕಡಿಮೆಯಿಲ್ಲದೆ, ಈ ಅಸಮರ್ಥ ಏಜೆನ್ಸಿಗೆ ಬಹಳಷ್ಟು ಕಾನೂನಿಗೆ ವಿರುದ್ಧವಾದ ನೆರವುಗಳನ್ನು ನೀಡಿ ಪ್ರೋತ್ಸಾಹಿಸಲಾಗಿದೆ. ಗುತ್ತಿಗೆಯಲ್ಲಿ ಸ್ಪಷ್ಟ ಪಡಿಸಿದ್ದ ಹಲವಾರು ಮುಖ್ಯ ನಿಯಮಗಳನ್ನು ಈ ಏಜೆನ್ಸಿಗೋಸ್ಕರ ಸಡಿಲಗೊಳಿಸಲಾಗಿದೆ. ಇದರಿಂದಾಗಿ ಒಟ್ಟು ಭದ್ರತಾ ವ್ಯವಸ್ಥೆಯೇ ಕುಸಿದಿದೆ. ಹಾಗಾಗಿ ಕಾಗದ ನಗರದಲ್ಲಿ ಹಲವಾರು ಕಳ್ಳತನ ಕೊಲೆಗಳು ನಿರಂತರವಾಗಿ ನಡೆಯುತ್ತಿವೆ. ಏಜೆನ್ಸಿಯ ವಿರುದ್ಧ ಗುತ್ತಿಗೆಯ ಯಾವುದೇ ನಿಯಮಗಳನ್ನು ಉಪಯೋಗಿಸಿಕೊಂಡು ಶಿಕ್ಷಿಸದೇ ಆಡಳಿತವರ್ಗ ಸುಮ್ಮನಿರುವುದನ್ನು ನೋಡಿದರೆ ಇದರಲ್ಲೂ ಕೂಡ ಹಿರಿಯ ಅಧಿಕಾರಿಗಳ ಕೈವಾಡವಿರುವುದು ಸ್ಪಷ್ಟವಾಗುತ್ತದೆ.

8. ಶ್ರೀ ಬಂಗಾರಪ್ಪನವರು 1990 ರಲ್ಲಿ ಮುಖ್ಯ ಮಂತ್ರಿಗಳಾಗಿದ್ದಾಗ, ಈಗಿನ ಕೃಷಿ ಮಂತ್ರಿಗಳಾದ ಶ್ರೀ ಬೈರೇಗೌಡರು ವಿಧಾನಸಭೆಯಲ್ಲಿ ಕೇಳಿದ ಎಂ.ಪಿ.ಎಂ. ಅಧ್ಯಕ್ಷರ ಕಾರ್ಯಸ್ಥಳ ಯಾವುದು ಎಂಬ ಪ್ರಶ್ನೆಗೆ 'ಭದ್ರಾವತಿ' ಎಂದು ತಿಳಿಸಿದ್ದರು. ಅಪರೂಪಕ್ಕೆ ಒಮ್ಮೆ ಭದ್ರಾವತಿಗೆ ಬಂದು ತಮ್ಮ ಮುಖ ತೋರಿಸುತ್ತಾರೆ. ಇದರಿಂದಾಗಿ ಕಾರ್ಖಾನೆಯಲ್ಲಿ ಹಿರಿಯ ಅಧಿಕಾರಿಗಳಿಗೆ ಮತ್ತು ಸೆಕ್ಯೂರಿಟಿ ಏಜೆನ್ಸಿಯವರಿಗೆ ಯಾರು ಕೇಳುವವರು ಇಲ್ಲದಾಗಿ ಕಾರ್ಖಾನೆಯ ಆಸ್ತಿಪಾಸ್ತಿಗಳು ದುರುಪಯೋಗ ಪ್ರಾರಂಭವಾಗಿದೆ.

9. ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲು ಸರ್ಕಾರದಿಂದ ನಿಷೇಧವಿದ್ದರೂ ಕೂಡ ಆಡಳಿತ ವರ್ಗ ಅದನ್ನು ಗಾಳಿಗೆ ತೂರಿ, ಕಂಪನಿಯ ನಿಯಮಗಳನ್ನು ಉಲ್ಲಂಘಿಸಿ ಬಾರಿ ಪ್ರಮಾಣದ ನೇಮಕಾತಿಯಲ್ಲಿ ತೊಡಗಿದೆ.

10. ಉತ್ಪಾದನೆ ಕಡಿಮೆಯಾಗಿದ್ದರೂ ಸಹ, ಪದಾರ್ಥ ದಾಸ್ತಾನು ಮತ್ತು ಅದರ ಬೆಲೆ ಅಸಮರ್ಪಕ ಆಡಳಿತದಿಂದಾಗಿ ಬಹಳ ಹೆಚ್ಚಾಗಿದೆ.

11. ಕಾರ್ಖಾನೆಯ ಹಿರಿಯ ಅಧಿಕಾರಿಗಳ ಅಸಮರ್ಥತೆ ಅದರ ಪರಾಕಾಷ್ಠೆಯನ್ನು ತಲುಪಿದೆ. ಇದರ ನಿದರ್ಶನ ದಿನಾಂಕ. 23-9-1997 ರಂದು ಕಾರ್ಖಾನೆಯು ಶೇರುದಾರರ ವಾರ್ಷಿಕ ಸಭೆಯನ್ನು ನಡೆಸಿದ ರೀತಿ ಮತ್ತು ಅಲ್ಲಿ ಶೇರುದಾರರಿಗೆ ಆದ ಅವಮಾನ. ಅನಿವಾರ್ಯ ಪರಿಸ್ಥಿತಿಯಿಂದ ಆಡಳಿತ ವರ್ಗವು ಈ ಸಭೆಯನ್ನು ಮುಂದೂಡಬೇಕಾಯಿತು.

ಕರ್ನಾಟಕ ವಿ.ವಿ.ಗಳ ಮಸೂದೆ ವಿರೋಧಿಸಿ, ಎಸ್.ಎಫ್.ಐ.ನ ಬೃಹತ್ ರ್ಯಾಲಿ

ದಮನಕಾರಿ ಕರ್ನಾಟಕ ವಿ.ವಿ.ಗಳ ಮಸೂದೆ- 97 ನ್ನು ವಿರೋಧಿಸಿ ಪರ್ಯಾಯ ವ್ಯವಸ್ಥೆಯಿಲ್ಲ ಪದವಿ- ಪಿ.ಯು.ಸಿ.ಗಳನ್ನು ಬೇರ್ಪಡಿಸುವ ನಿರ್ಧಾರದ ವಿರುದ್ಧ ಮತ್ತು ಪಿ.ಯು.ಸಿ. ವೇಳಾಪಟ್ಟಿ ಬದಲಾವಣೆ ಐ.ಟಿ.ಐ, ಜೆ,ಒ.ಸಿ. ಸೇರಿದಂತೆ ಅನೇಕ ಶಿಕ್ಷಣಪರ ಬೇಡಿಕೆಗಳಿಗಾಗಿ ಒತ್ತಾಯಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ಕರ್ನಾಟಕ ರಾಜ್ಯ ಸಮಿತಿಯ ನೇತೃತ್ವದಲ್ಲಿ ವಿದ್ಯಾರ್ಥಿಗಳ ಪ್ರತಿಭಟನಾ ರ್ಯಾಲಿ - ವಿಧಾನ ಸೌಧ ಚಲೋ ಬೆಂಗಳೂರಿನಲ್ಲಿ ನಡೆಯಿತು. ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದ ಸಾವಿರಾರು ವಿದ್ಯಾರ್ಥಿಗಳು ನಗರದ ಚಿಕ್ಕಲಾಲ್ ಭಾಗ್ ನಿಂದ ಮೆರವಣಿಗೆ ಹೊರಟು ಕೆ.ಆರ್.ವೃತ್ತದಲ್ಲಿ ಬಹಿರಂಗ ಸಭೆ ನಡೆಯಿತು.

ಬಹಿರಂಗ ಸಭೆಯಲ್ಲಿ ಅನೇಕ ಶಿಕ್ಷಣ ತಜ್ಞರು, ವಿದ್ಯಾರ್ಥಿ ಮುಖಂಡರು ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದರು.

ಎಸ್.ಎಫ್.ಐ. ನ ರಾಜ್ಯ ಕಾರ್ಯದರ್ಶಿ ಕೆ.ಪ್ರಕಾಶ ರವರು ಮಾತನಾಡಿ ಯಾವುದೇ ಸ್ಪಷ್ಟ ಧೋರಣೆಗಳಿಲ್ಲದ ರಾಜ್ಯ ಸರ್ಕಾರ ಸರ್ವಾಧಿಕಾರಿ ಮಾದರಿಯಲ್ಲಿ ವಿ.ವಿ.ಗಳ ಮಸೂದೆ-97 ನ್ನು ತರಲು ಹೊರಟಿರುವುದನ್ನು ಖಂಡಿಸಿದರು.

ಮುಖ್ಯ ಭಾಷಣಕಾರರಾದ ಎಸ್.ಎಫ್.ಐ. ನ ಅಖಿಲ ಭಾರತ ಅಧ್ಯಕ್ಷರಾದ ಕೆ.ಎನ್. ಬಾಲಗೋಪಾಲನ್ ರವರು ಕೇರಳದಲ್ಲಿದ್ದ ಹಿಂದಿನ ಕಾಂಗ್ರೆಸ್ ಸರ್ಕಾರ ವಿದ್ಯಾರ್ಥಿಗಳ ಹಕ್ಕನ್ನು ಮೊಟಕುಗೊಳಿಸಲು ಹೋಗಿ ಅಧಿಕಾರ ಕಳೆದುಕೊಳ್ಳುವಂತಾಯಿತು, ವಿ.ವಿ. ಮಸೂದೆಯನ್ನು ಜಾರಿಗೆ ತಂದರೆ ಕರ್ನಾಟಕ ಸರ್ಕಾರಕ್ಕೂ ವಿದ್ಯಾರ್ಥಿ ಸಮುದಾಯ ಅದೇ ಪಾಠ ಕಲಿಸಲಿದೆ ಎಂದು ಅವರು ಕರ್ನಾಟಕದ ವಿದ್ಯಾರ್ಥಿ ಸಮುದಾಯದ ಒಗ್ಗಟ್ಟಿನ ಹೋರಾಟವನ್ನು ಅಭಿನಂದಿಸಿದರು.

ಶಿಕ್ಷಣ ತಜ್ಞ ಮತ್ತು ಕಲಾವಿದರಾದ ಜಿ.ಕೆ. ಗೋವಿಂದರಾವ್ ಅವರು ಪ್ರತಿಭಾವಂತ ಸರ್ಕಾರವೊಂದು ಇಂಥಹ ವಿ.ವಿ.ಗಳ ಮಸೂದೆಯನ್ನು ತರಲು ಸಾಧ್ಯವಿಲ್ಲ, ಹಾಗೆಯೇ ಪ್ರಜ್ಞಾವಂತ ಜನತೆ ಇದನ್ನು ಒಪ್ಪಿಕೊಳ್ಳುವುದೂ ಇಲ್ಲ ಎಂದು ತಿಳಿಸಿ ಶಿಕ್ಷಣ ಪರ ಬೇಡಿಕೆಗಳಿಗೆ ತಮ್ಮ ಬೆಂಬಲ ವ್ಯಕ್ತಪಡಿಸಿದರು. ವಿದ್ಯಾರ್ಥಿ ಶಿಕ್ಷಕರ ಹಕ್ಕುಗಳನ್ನು ಕಿತ್ತುಕೊಳ್ಳಲು ಹೊರಟಿರುವ ಸರ್ಕಾರ ಶೈಕ್ಷಣಿಕ ಗುಣಮಟ್ಟ ಸುಧಾರಣೆಗೆ ಏನು ಮಾಡಿದೆ? ಎಂದು ತೀಕ್ಷ್ಣವಾಗಿ ಪ್ರಶ್ನಿಸಿದರು.

ಅಧ್ಯಕ್ಷೀಯ ಭಾಷಣ ಮಾಡಿದ ಎಸ್.ಎಫ್.ಐನ ರಾಜ್ಯಾಧ್ಯಕ್ಷ ಕೆ.ಎನ್. ಉಮೇಶ್ ಅವರು ಜೆ.ಓ.ಸಿ. ಶಿಕ್ಷಣಕ್ಕೆ ಸಂಬಂಧಿಸಿದಂತೆ ಸರ್ಕಾರದ ಗೊಂದಲಕಾರಿ ನೀತಿಗಳಿಂದಾಗಿ ಸಾವಿರಾರು ಜೆ.ಓ.ಸಿ ಶಿಕ್ಷಣದ ವಿದ್ಯಾರ್ಥಿಗಳ ಭವಿಷ್ಯ ಅತಂತ್ರ ಸ್ಥಿತಿಯಲ್ಲಿದೆ ಎಂದರು. ಹಾಸ್ಟೆಲ್ ಗಳಲ್ಲಿ ಸಮರ್ಪಕ ಊಟ-ವಸತಿಯ ವ್ಯವಸ್ಥೆಯಿಲ್ಲದೆ ವಿದ್ಯಾರ್ಥಿಗಳ ಪಾಡು ಹೇಳತೀರದು. ಸರ್ಕಾರ ಕೂಡಲೇ ಸಮಸ್ಯೆ ಪರಿಹರಿಸಬೇಕೆಂದು ಆಗ್ರಹಿಸಿದರು.

ಮೇಲ್ಕಂಡ ಬೇಡಿಕೆಗಳಲ್ಲದೇ ಖಾಲಿ ಶಿಕ್ಷಕ ಹುದ್ದೆಗಳನ್ನು ಭರ್ತಿ ಮಾಡತಕ್ಕದ್ದು, ಪಠ್ಯ ಪುಸ್ತಕ- ನೋಟ್ ಪುಸ್ತಕಗಳ ದರ ಇಳಿಕೆ, ಡೊನೇಶನ್ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಬೇಕು, ಖಾಸಗಿ ವಿ.ವಿ. ಮಸೂದೆ ವಾಪಸ್ಸಾಗಬೇಕೆಂದು ಒತ್ತಾಯಿಸುವ ಮನವಿ ಪತ್ರವನ್ನು ಬೆಂಗಳೂರು ವಿ.ವಿ. ಸೆನೆಟ್ ಸದಸ್ಯೆ ಮತ್ತು ಎಸ್.ಎಫ್.ಐ. ರಾಜ್ಯ ಉಪಾಧ್ಯಕ್ಷೆ ಕೆ.ಎಸ್. ಲಕ್ಷ್ಮೀ ಓದಿದರು. ಮನವಿ ಪತ್ರವನ್ನು ಎಸ್.ಎಫ್.ಐ ನಿಯೋಗ ಸಚಿವರುಗಳು ಮತ್ತು ಅಧಿಕಾರಿಗಳಿಗೆ ಸಲ್ಲಿಸಿತು.

ವಿ.ವಿ. ಮಸೂದೆ ವಿರೋಧಿಸಿ ತರಗತಿ ಬಹಿಷ್ಕಾರ

ಮೈಸೂರು:ಕರ್ನಾಟಕ ವಿ.ವಿ. ಮಸೂದೆ-1997 ರ ಶಿಕ್ಷಣ ವಿರೋಧಿ- ಪ್ರಜಾಪ್ರಭುತ್ವ ವಿರೋಧಿ -ದಮನಕಾರಿ ಅಂಶಗಳನ್ನು ವಿರೋಧಿಸಿ ಹಾಗೂ ಇತರೇ 15 ಬೇಡಿಕೆಗಳ ನ್ನಿಟ್ಟು, ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ತಾಲ್ಲೂಕು ಸಮಿತಿಯ ಕರೆಯ ಮೇರೆಗೆ, ಪ್ರತಿಭಟನಾ ಮನವಿ ಪತ್ರ ಸಲ್ಲಿಸಿದರು.

ಸಭೆಯನ್ನುದ್ದೇಶಿಸಿ ಜನಪ್ರಿಯ ತಾ.ಪಂ. ಸದಸ್ಯರಾದ ಸಿ.ಮಾರುತಿ ರವರು ವಿದ್ಯಾರ್ಥಿಗಳ ಸಮಸ್ಯೆಗಳ ಬಗ್ಗೆ ಅಧಿಕಾರಿಗಳಿಗೆ ಮನವರಿಕೆ ಮಾಡುತ್ತಾ, ಸರ್ಕಾರದ ವಿದ್ಯಾರ್ಥಿ ವಿರೋಧಿ ಮನೋಭಾವನೆಯನ್ನು ಟೀಕಿಸಿದರು.

ಸಭೆಯಲ್ಲಿ ಎಸ್.ಎಫ್.ಐ. ಜಿಲ್ಲಾ ಸಂಚಾಲಕರಾದ ಆಫ್ತಾಬ್ ಪಾಷಾ, ಯುವ ಮುಖಂಡರಾದ ಬಿ.ಎಂ. ಶಿವಣ್ಣ, ಅಕ್ಬರ್ ಪಾಷಾ, ಉಮ್ರಾನ್, ಫಾರೂಕ್ ಹಾಗೂ ತಾ. ಎಸ್.ಎಫ್.ಐ. ಉಪಾಧ್ಯಾಕ್ಷರಾದ ಬಿ.ಪುಟ್ಟಸ್ವಾಮಿ, ಕಾಲೇಜು ಅಧ್ಯಕ್ಷರಾದ ಶಿವರಾಜ್ ಕಾರ್ಯದರ್ಶಿ ರಾಜೇಂದ್ರ ಕುಮಾರ್, ನ. ಮೂರ್ತಿ, ನಂದಕುಮಾರ್, ಸುಬ್ರಹ್ಮಣಿ, ರಾಜು. ಎನ್. ಎಚ್.ಎಂ. ಪ್ರಕಾಶ್, ಮುಜಾಹಿದ್, ಹಾಗೂ ಅನೇಕ ಹಾಸ್ಟೆಲ್ ವಿದ್ಯಾರ್ಥಿಗಳು ಹಾಗೂ ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಕಾ|| ಜಾನ್ ವಿನ್ಸೆಂಟ್ ಅಕಾಲ ನಿಧನ

ಸಿ.ಪಿ.ಐ.(ಎಂ) ನ ಬೆಂಗಳೂರು ಜಿಲ್ಲಾ ಸಮಿತಿ ಸದಸ್ಯ ಹಾಗೂ ಸಿ ಐ ಟಿ ಯು ನಾಯಕರಾದ ಕಾಂ|| ಜಾನ್ ವಿನ್ಸೆಂಟ್ ರವರು ಸ್ಕೂಟರ್ ಅಪಘಾತದಲ್ಲಿ ಸೆಪ್ಟೆಂಬರ್ 21 ರಂದು ನಿಧನರಾದರು. ಅವರಿಗೆ 47 ವರ್ಷ ವಯಸ್ಸಾಗಿತ್ತು. ಎರಡು ದಶಕಗಳ ಹಿಂದೆ ಜಾನ್ ವಿನ್ಸೆಂಟ್ ರವರು ಧೀಮಂತ ಹೋರಾಟಗಾರನಾಗಿ ಕಾರ್ಮಿಕ ಸಂಘಟನೆಗೆ ಪಾದಾರ್ಪಣೆ ಮಾಡಿದವರು. ಬೆಂಗಳೂರಿನ ಮೆಟಲ್ ಲ್ಯಾಂಪ್ ಕ್ಯಾಪ್ಸ್ ಕಾರ್ಖಾನೆಯಲ್ಲಿ ಸಾಮಾನ್ಯ ಕಾರ್ಮಿಕನಾಗಿ ಕೆಲಸಕ್ಕೆ ಸೇರಿದ ವಿನ್ಸೆಂಟ್ ಈ ಕಾರ್ಖಾನೆಯಲ್ಲಿ ಕಾಂ. ಸೂರಿ ಹಾಗೂ ಕಾಂ. ವಿ.ಜೆ.ಕೆ. ನಾಯರ್ ನೇತೃತ್ವದಲ್ಲಿ ಕಾರ್ಮಿಕರನ್ನು ಸಂಘಟಿಸಿ ಕಾರ್ಮಿಕರನ್ನು ಹೋರಾಟದ ದಾರಿಯಲ್ಲಿ ನಡೆಸಿದರು. 1978 ರಲ್ಲಿ ನಡೆದ ಈ ಹೋರಾಟ ಸಿ.ಐ.ಟಿ.ಯು ಆರಂಭವಾದ ನಂತರ ಬೆಂಗಳೂರಿನ ಪ್ರಥಮ ಹಾಗೂ ಪರಿಣಾಮಕಾರಿಯಾದ ಹೋರಾಟವಾಗಿ ಬೆಳೆಯಿತು. ಈ ಹೋರಾಟದಲ್ಲಿ ಕಾ. ಜಾನ್ ವಿನ್ಸೆಂಟ್‌ರವರು ಕೆಲಸ ಕಳೆದುಕೊಂಡು ಆನಂತರ ಪಕ್ಷದ ಪೂರ್ಣ ಕಾಲ ಕಾರ್ಯಕರ್ತನಾಗಿ ಪಕ್ಷದ ಹಾಗೂ ಕಾರ್ಮಿಕ ಸಂಘಟನೆಯ ಬೆಳವಣಿಗೆಗೆ ತಮ್ಮ ಜೀವನವನ್ನು ಮುಡಿಪಾಗಿ ಇಟ್ಟರು. ತಮ್ಮ ಹೋರಾಟದ ಅನುಭವ ಹಾಗೂ ರಾಜಕೀಯ ತಿಳುವಳಿಕೆಯ ಆಧಾರದಲ್ಲಿ ಮುಂದೆ ಕೆ.ಆರ್.ಪುರಂ ಹಾಗೂ ವೈಟ್ ಫೀಲ್ಡ್ ಪ್ರದೇಶದಲ್ಲಿ ಸಿ ಐ ಟಿ ಯು ವನ್ನು ಪ್ರಬಲವಾಗಿ ಬೆಳೆಸಿದರು. ಮುಖ್ಯವಾಗಿ ಅಸಂಘಟಿತ ಇಂಜಿನಿಯರಿಂಗ್ ಕಾರ್ಮಿಕರನ್ನು ದೊಡ್ಡರೀತಿಯಲ್ಲಿ ಸಂಘಟಿಸಿದರು. ಕಾಂ. ವಿನ್ಸೆಂಟ್ ರವರ ಸಂಘಟನಾ ಚತುರತೆಯಿಂದ ಸಿ ಐ ಟಿ ಯು ಆ ಪ್ರದೇಶದಲ್ಲಿ ಇಂದು ಪ್ರಬಲವಾಗಿ ಬೆಳೆದಿದೆ. 1983 ರಲ್ಲಿ ನಡೆದ ವಿಧಾನ ಸಭಾ ಚುನಾವಣೆಯಲ್ಲಿ ಈ ಪ್ರದೇಶದಿಂದ (ವರ್ತೂರು ಕ್ಷೇತ್ರ) ಕಾಂ. ಸೂರಿಯವರು ಶಾಸಕರಾಗಿ ಆರಿಸಿ ಬಂದರು. ಈ ಪ್ರದೇಶದಲ್ಲಿ ಕಾರ್ಮಿಕರಲ್ಲಿ ವರ್ಗ ರಾಜಕೀಯ ಪ್ರಜ್ಞೆ ಬೆಳೆಸಿ ಪಕ್ಷವನ್ನು ಬಲಪಡಿಸುವಲ್ಲಿ ಕಾಂ. ವಿನ್ಸೆಂಟ್ ರವರ ಕೊಡುಗೆ ಬಹಳ. ಕೆ.ಆರ್. ಪುರಂ, ವೈಟ್ ಫೀಲ್ಡ್ ಪ್ರದೇಶದಲ್ಲಿ ವಿವಿಧ ರಂಗಗಳ ಕಾರ್ಮಿಕರನ್ನು ಸಂಘಟಿಸುವಲ್ಲಿ ಅವರ ಹೋರಾಟ ಬೆಳೆಸುವಲ್ಲಿ ಸಿಐಟಿಯು ಸಮನ್ವಯ ಸಮಿತಿ ರಚಿಸಿ ಅದರ ಸಂಚಾಲಕರಾಗಿ ದುಡಿದವರು. 15 ವರ್ಷ ಕಾಲ ಸಿ.ಪಿ.ಐ (ಎಂ) ನ ಜಿಲ್ಲಾ ಸಮಿತಿ ಸದಸ್ಯರಾಗಿದ್ದರು.

ಸಾಮಾನ್ಯ ಕಾರ್ಮಿಕನಾಗಿದ್ದು ಹೋರಾಟದಲ್ಲಿ ಕೆಲಸ ಕಳೆದುಕೊಂಡು ಟ್ರೇಡ್ ಯೂನಿಯನ್ ನಾಯಕನಾಗಿ, ಪಕ್ಷದ ಪ್ರಮುಖ ಕಾರ್ಯಕರ್ತನಾಗಿ ಬೆಳೆದ ಕಾಂ. ವಿನ್ಸೆಂಟ್ ರವರ ಅಕಾಲ ಮರಣ ಕಾರ್ಮಿಕ ಸಂಘಟನೆಗೆ ಹಾಗೂ ಪಕ್ಷಕ್ಕೆ ತುಂಬಲಾರದ ನಷ್ಟವಾಗಿದೆ. ಕಾಂ. ವಿನ್ಸೆಂಟ್ ರವರು ತಮ್ಮ ಪತ್ನಿ ಜೂಲಿಯಾನ ಮತ್ತು ಮಕ್ಕಳಾದ ವಿಕ್ರಮ ಹಾಗೂ ವಿನೀತ್ ರವರನ್ನು ಅಗಲಿರುತ್ತಾರೆ.

ಸೆಪ್ಟೆಂಬರ್ 22 ರಂದು ನಡೆದ ಕಾಂ. ವಿನ್ಸೆಂಟ್ ರವರ ಅಂತ್ಯಕ್ರಿಯೆಯಲ್ಲಿ ಸಾವಿರಾರು ಕಾರ್ಮಿಕರು ಭಾಗವಹಿಸಿ ಅಗಲಿದ ತಮ್ಮ ನಾಯಕನಿಗೆ ಗೌರವ ಸಲ್ಲಿಸಿದರು. ನಂತರ ನಡೆದ ಸಂತಾಪ ಸೂಚಕ ಸಭೆಯಲ್ಲಿ, ಸೂರ್ಯನಾರಾಯಣರಾವ್, ವಿ.ಜೆ.ಕೆ. ನಾಯರ್, ಆರ್ . ಶ್ರೀನಿವಾಸ್, ಗೋಪಾಲಗೌಡ ಹಾಗೂ ವೆಂಕಟೇಶ ಗೌಡ ಮಾತನಾಡಿದರು.

ಕಾಂ. ವಿನ್ಸೆಂಟ್ ರವರ ನಿಧನಕ್ಕೆ ಪಕ್ಷದ ಬೆಂಗಳೂರು ಜಿಲ್ಲಾ ಸಮಿತಿ ತೀವ್ರ ಸಂತಾಪ ವ್ಯಕ್ತಪಡಿಸಿದೆ.

ರಾಯಚೂರು ಜಿಲ್ಲೆ ಬರ ಪೀಡಿತ ಜಿಲ್ಲೆಯೆಂದು ಘೋಷಿಸುವಂತೆ ರೈತ ಸಂಘದ ಒತ್ತಾಯ

ರಾಯಚೂರು ಜಿಲ್ಲೆಯು ರಾಜ್ಯದ ಹಿಂದುಳಿದ ಜಿಲ್ಲೆಗಳಲ್ಲಿ ಒಂದಾಗಿದ್ದು, ಜಿಲ್ಲೆಯ ಮಳೆ ಆಧಾರಿತ ತಾಲ್ಲೂಕುಗಳಾದ ರಾಯಚೂರು, ದೇವದುರ್ಗ, ಲಿಂಗಸೂರು, ಕುಷ್ಟಗಿ, ಯಲಬುರ್ಗ ಮತ್ತು ಕೊಪ್ಪಳಗಳಲ್ಲಿ ಮಳೆ ಸರಿಯಾಗಿ ಬಾರದೆ ಶೇ 30 ರಷ್ಟು ಮಾತ್ರ ಬಿತ್ತನೆ ಆಗಿದ್ದು, ಬೆಳೆದ ಪೈರುಗಳು ಬಾಡಿ ಹೋಗಿವೆ.

ಇನ್ನು ಜಿಲ್ಲೆಯ ನೀರಾವರಿ ತಾಲ್ಲೂಕುಗಳಾದ ಸಿಂಧನೂರು, ಮಾನ್ವಿ ಮತ್ತು ಗಂಗಾವತಿಗಳಲ್ಲಿ ಜೂನ್ ಕೊನೆಯಲ್ಲಿ ಬಿಡುತ್ತಿದ್ದ ನೀರನ್ನು ಜುಲೈಯಲ್ಲಿ ಬಿಡಲಾಗಿದೆ. 3600 ಕ್ಯೂಸೆಕ್ಸ್‌ಗೆ ಬದಲಾಗಿ 2400 ಕ್ಯೂಸೆಕ್ಸ್ ಮಾತ್ರ ಬಿಡುತ್ತಿದ್ದ ಬಿತ್ತನೆಗಾಗಿ ನೀರು ಇನ್ನೂ ಹಲವಾರು ಹೊಲಗದ್ದೆಗಳಿಗೆ ಮುಟ್ಟಿಲ್ಲವಾದ್ದರಿಂದ ಇಲ್ಲೂ ನೀರು, ಕೂಲಿ ಇತ್ಯಾದಿ ಸಮಸ್ಯೆಗಳು ಜನರನ್ನು ಕಾಡುತ್ತಿವೆ.

ಈ ಹಿನ್ನಲೆಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘವು ಇಡೀ ಜಿಲ್ಲೆಯನ್ನು ಬರ ಪೀಡಿತ ಪ್ರದೇಶವೆಂದು ಘೋಷಿಸಿ ಪರಿಹಾರ ಕ್ರಮಗಳನ್ನು ಕೈಗೊಳ್ಳುವಂತೆ ಸರ್ಕಾರದ ಮುಂದೆ ಬೇಡಿಕೆಗಳನ್ನು ಇಟ್ಟಿದೆ.

ಬೇಡಿಕೆಗಳು

ಬೆಳೆ ನಷ್ಟ ಪರಿಹಾರ ನೀಡಬೇಕು, ರೈತ ಕೂಲಿಕಾರರಿಗೆ ಕಾಮಗಾರಿಗಳನ್ನು ಆರಂಭಿಸಬೇಕು, ದನಕರುಗಳಿಗೆ ಮೇವು ಒದಗಿಸಬೇಕು, ಕುಡಿಯುವ ನೀರಿನ ಸೌಲಭ್ಯ, ಬ್ಯಾಂಕಿನ ಸಾಲ ವಸೂಲಿ ನಿಲ್ಲಿಸುವಂತೆ, ಕೆರೆಗಳ ಹೂಳು ತೆಗೆಯುವಂತೆ ಹಾಗೂ ಪ್ರತಿ ಪಡಿತರ ಚೀಟಿಗೆ 20 ಕೆ.ಜಿ. ಆಹಾರ ಧಾನ್ಯಗಳನ್ನು ಹೆಚ್ಚಿಸಬೇಕೆಂದು ರೈತ ಸಂಘ ಒತ್ತಾಯಿಸಿದೆ.

ಬಿಜಾಪುರದಲ್ಲಿ ಮುಖ್ಯಮಂತ್ರಿಗಳ ಮುಂದೆ ಮತಪ್ರದರ್ಶನ

ಜಿಲ್ಲೆಗಳಲ್ಲಿ ಸರ್ಕಾರಿ ಕಾಮಗಾರಿ, ಕೆಲಸಗಳೆಲ್ಲಾ ಯಾವ ರೀತಿ ನಡೆದಿದೆಂದು ತಿಳಿದು ಕೊಳ್ಳುವ ನೆಪದಲ್ಲಿ 15 ಮಂತ್ರಿಗಳ ಜೊತೆಯಲ್ಲಿ ಬಿಜಾಪುರಕ್ಕೆ ಬಂದು ಜನತಾದಳ ಕಾರ್ಯಕರ್ತರ ಸಭೆಯಲ್ಲಿ ಪಾಲ್ಗೊಂಡು, ಅಡಿಗಲ್ಲು ಸಮಾರಂಭಗಳಲ್ಲಿ ಕಾಲ ಕಳೆದ ಮುಖ್ಯಮಂತ್ರಿ ಜೆ.ಎಚ್. ಪಟೇಲ ರ ಮುಂದೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ, ರೈತ ಸಂಘ, ಜನವಾದಿ ಮಹಿಳಾ ಸಂಘಟನೆ, ಸಿ.ಐ.ಟಿ.ಯು ನ ನೂರಾರು ಕಾರ್ಯಕರ್ತರು ನೂರಕ್ಕೂ ಮೇಲ್ಪಟ್ಟು ಮಹಿಳೆಯರು ಘೋಷಣೆ ಕೂಗುತ್ತ ಮತ ಪ್ರದರ್ಶನ ನಡೆಸಿದರು. ಮುಖ್ಯಮಂತ್ರಿಯವರನ್ನೊಳಗೊಂಡು ಮಂತ್ರಿ ಮಹಾಶಯರನ್ನೆಲ್ಲಾ ಹೊಸ ಐ.ಬಿ.ಯೊಳಗೆ ಹೋಗದಂತೆ ತಡೆದು ಮನವಿಯನ್ನರ್ಪಿಸಿದರು. ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎನ್.ಕೆ ಉಪಾಧ್ಯಾಯರು ಆಲಮಟ್ಟಿ ಯೋಜನೆ ಮುಳುವಾಡ ಯೇತ ನೀರಾವರಿ, ಮುಚ್ಚಿದ ಕಾರ್ಖಾನೆಗಳ ಮರು ಪ್ರಾರಂಭ, ಸಣ್ಣ ಕೈಗಾರಿಕೆಗಳಿಗೆ ಕಚ್ಚಾ ನೂಲು, ಮಾರ್ಕೆಟ್ ವ್ಯವಸ್ಥೆ, ಸೋಲಾಪುರ, ಗದಗ ರೈಲ್ವೆ ಗೇಜ್ ಪರಿವರ್ತನೆಗಳ ಬೇಡಿಕೆ ಮಂಡಿಸಿದರು. ರೈತ ಸಂಘ ಅಧ್ಯಕ್ಷರ ಭೀಮಸಿ ಕಲಾದಗಿ ಯವರು, ಬರಗಾಲ ಕಾಮಗಾರಿ, ಅನಧಿಕೃತ ವಾಗಿ ಸರಕಾರೀ ಖಾಸಗಿ ಭಾಗಗಳಲ್ಲಿ ವಾಸವಾಗಿದ್ದವರ ಜಾಗಗಳನ್ನು ಸಕ್ರಮಗೊಳಿಸುವುದು ಮುಂತಾದ ಬೇಡಿಕೆಗಳನ್ನೂ, ನಗರ ಸಿಪಿಐ(ಎಂ) ಪರವಾಗಿ ನದಾಫ ಅವರು ಕುಡಿಯುವ ನೀರು ಮೊದಲಾದ ಬೇಡಿಕೆಗಳ ಮನವಿ ಅರ್ಪಿಸಿ ಮಾತನಾಡಿದರು. ಮುಖ್ಯಮಂತ್ರಿ ಜೆ.ಹೆಚ್. ಪಟೇಲ್ ಮತ್ತು ಕೃಷಿ ಮಂತ್ರಿ ಬೈರೇಗೌಡರು ಮನವಿ ಸ್ವೀಕರಿಸಿ ಪರಿಹಾರ ಒದಗಿಸುವ ಆಶ್ವಾಸನೆ ನೀಡಿದರು. ಮುಖ್ಯಮಂತ್ರಿಗಳಿಗಾಗಿ ಕಾದು ನಿಂತಿರುವ ಮಹಿಳೆಯರು, ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯ ಅಣ್ಣಾರಾಯ ಇಳಗೇರ ಅವರ ಮೇಲೆ ಪೋಲೀಸರು ಕೈ ಮಾಡಿದ್ದರ ವಿರುದ್ಧ ಎನ್.ಕೆ. ಉಪಾಧ್ಯಾಯರು ಮುಖ್ಯಮಂತ್ರಿ ಯವರ ಮುಂದೆ ತಕರಾರು ಮಾಡಿ ಪೋಲೀಸ್ ಅಧಿಕಾರಿಗಳು ಮುಖ್ಯಮಂತ್ರಿಯವರ ರಕ್ಷಣೆಯ ನೆವದಲ್ಲಿ ಕಾರ್ಯಕರ್ತರ ಮೇಲೆ ಕೈ ಮಾಡುವುದನ್ನು ನಿಲ್ಲಿಸುವಂತೆ ಮಾಡಬೇಕೆಂದು ಕೇಳಿಕೊಂಡರು.

ಸ್ವಾತಂತ್ರ್ಯ ಸ್ವರ್ಣ ಜಯಂತಿ ಆಚರಣೆ



ಬೆಂಗಳೂರು: ಸ್ವಾತಂತ್ರ್ಯದ ಸುವರ್ಣ ಮಹೋತ್ಸವವನ್ನು ಡಿ.ವೈ.ಎಫ್.ಐ. ವಿಲ್ಸನ್ ಗಾರ್ಡನ್ ಘಟಕ ಹಲವು ಗಣ್ಯರನ್ನೊಳಗೊಂಡ ಆಚರಣಾ ಸಮಿತಿ ರಚಿಸಿ ಆಚರಿಸಿತು. ಈ ಸಮಾರಂಭವನ್ನು ಸ್ವಾತಂತ್ರ್ಯ ಹೋರಾಟಗಾರರು ಮತ್ತು ಖ್ಯಾತ ಜನಪದ ಸಾಹಿತಿಗಳಾದ ಡಾ:: ಎಸ್. ಕೆ. ಕರೀಂ ಖಾನ್ ಉದ್ಘಾಟಿಸಿ ಮಾತನಾಡಿದರು ಅವರು ಈ ದೇಶದ ಸ್ವಾತಂತ್ರ್ಯ ರಕ್ಷಿಸಿಕೊಳ್ಳಬೇಕಾಗಿದೆ. ಗಾಂಧೀಜಿಯವರು ಚರಕದಿಂದ ನೂಲು ತೆಗೆದು ಜನತೆಗೆ ಬಟ್ಟೆ ಕೊಡಲು ಕರೆ ನೀಡಿದರು. ಅದೇ ಸಮಯದ 6 ಗಜ ಬಟ್ಟೆ ಒಬ್ಬ ಮನುಷ್ಯನಿಗೆ ಸಾಲದೆಂದು ಅರಿವು ಬಂದು ತುಂಡು ಬಟ್ಟೆ ತೊಡಲು ನುಡಿದರು. ನುಡಿದಂತೆ ನಡೆದರು. ಆದರೆ ದೇಶವಿಂದು ಕೋತಿಗಳಂತಿರುವ ರಾಜಕೀಯ ಮುಖಂಡರ ಕೈಯಲ್ಲಿ ಸಿಲುಕಿದೆ, ಇವರು ಈ ದೇಶವನ್ನೇ ಹಾಳು ಮಾಡಬಹುದು ಜನರು ಇಂತಹ ಪರಿಸ್ಥಿತಿಯನ್ನು ಎದುರಿಸಲು ಸಿದ್ಧರಾಗಬೇಕೆಂದು ಕರೆ ನೀಡಿದರು.

ಈ ಸಭೆಯ ಅಧ್ಯಕ್ಷತೆಯನ್ನು ಬೆಂಗಳೂರು ವಕೀಲರ ಸಂಘದ ಅಧ್ಯಕ್ಷರಾದ ಕೆ.ಎನ್. ಸುಬ್ಬಾರೆಡ್ಡಿಯವರು ವಹಿಸಿದರು. ಎಸ್.ಎಸ್.ಜೈನ್ ಸಂಘದ ಕಾರ್ಯದರ್ಶಿ ದೇವಿ ಚಂದ್ ಜೈನ್ 300 ಮಕ್ಕಳಿಗೆ ಹೊದೆಯಲು ಕಂಬಳಿಯನ್ನು ಹಾಗೂ ಸಿಹಿ ನೀಡಿದರು. ಮುಖ್ಯ ಅತಿಥಿಗಳಾಗಿ ಡಿ.ವೈ.ಎಫ್.ಐ. ರಾಜ್ಯ ಕಾರ್ಯದರ್ಶಿ ಎಸ್.ವೈ. ಗುರುಶಾಂತ್, ಹೆಚ್. ಎನ್. ನಾಗಮೋಹನ್ ದಾಸ್ ಮಾತನಾಡಿದರು. ಚಲನ ಚಿತ್ರ ನಟರಾದ ಗಿರಿಜಾ- ಲೋಕೇಶ್ ವಿಶೇಷ ಆಹ್ವಾನಿತರಾಗಿ ಮಾತನಾಡಿದರು. ಮತ್ತು ಹೆಚ್ಚು ಅಂಕ ಗಳಿಸಿದ 7 ಮತ್ತು 10 ನೇ ತರಗತಿ ಮಕ್ಕಳಿಗೆ ಬಹುಮಾನ ನೀಡಿದರು.

ಮಧ್ಯಾಹ್ನ 4 ಗಂಟೆಗೆ ಹೊಂಬೇಗೌಡ ಆಟದ ಮೈದಾನದಿಂದ ಆಕರ್ಷಕ ರ್ಯಾಲಿಯನ್ನು ಆರಂಭಿಸಿ ವಿಲ್ಸನ್ ಗಾರ್ಡನ್ ಮುಖ್ಯ ಬೀದಿಗಳ ಮೂಲಕ ಸಮಾರಂಭದ ಸ್ಥಳಕ್ಕೆ ಬರಲಾಯಿತು. ಈ ರ್ಯಾಲಿಯಲ್ಲಿ ಸ್ಕೌಟ್ ಧರಿಸಿದ್ದ ನೂರಾರು ಮಕ್ಕಳು ಪಾಲ್ಗೊಂಡಿದ್ದರು.

ಹಿರಿಯ ಸ್ವಾತಂತ್ರ್ಯ ಯೋಧರಾದ ಡಾ. ಕರೀಂ ಖಾನ್ ರವರಿಗೆ ಶಾಲು ಹೊದಿಸಿ ಸನ್ಮಾನಿಸಿ ಗೌರವಿಸಲಾಯಿತು. 'ಉತ್ತಮ ಶಿಕ್ಷಕಿ' ಪ್ರಶಸ್ತಿ ಗಳಿಸಿದ ಆಶಾ ಮಾನು ರವರಿಗೆ ಸನ್ಮಾನಿಸಲಾಯಿತು. ಸ್ವಾಗತವನ್ನು ಡಿ.ವೈ.ಎಫ್.ಐ ನ ಎನ್. ಲಕ್ಷ್ಮಣ ಕುಮಾರ್ ಮಾಡಿದರು. ಶಿವಶಂಕರಪ್ಪ (ವಕೀಲರು) ವಂದಿಸಿದರು.

ಸಿ.ಐ.ಟಿ.ಯು.ಗೆ ಜಯ

ಮಂಡ್ಯ: ಜಿಲ್ಲೆಯ ಭಾರತೀನಗರದ ಶ್ರೀ ಚಾಮುಂಡೇಶ್ವರಿ ಸಕ್ಕರೆ ಕಾರ್ಖಾನೆಯ ಕಾರ್ಮಿಕ ಸಂಘ ಮತ್ತು ಸಿಬ್ಬಂದಿಗಳ ಸಂಘಕ್ಕೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಸಿ.ಐ.ಟಿ.ಯು.ವಿನ ಎಲ್ಲಾ ಅಭ್ಯರ್ಥಿಗಳು ಆಯ್ಕೆಗೊಂಡಿದ್ದಾರೆ.

ಅಧ್ಯಕ್ಷರು- ಎಸ್. ಶಂಕರಯ್ಯ.
ಉಪಾಧ್ಯಕ್ಷರು-ಆರ್. ಗೋಪಾಲನ್.
ಪ್ರಧಾನ ಕಾರ್ಯದರ್ಶಿ-ಬಿ.ದೇವಣ್ಣ,
ಕಾರ್ಯದರ್ಶಿ-ಸಿ.ಪಿ. ದೊರೇಗೌಡ
ಸಂಘಟನಾ ಕಾರ್ಯದರ್ಶಿ- ಎಲ್. ಮಂಜುನಾಥ, ಖಜಾಂಚಿ-ದೊಡ್ಡೇಗೌಡ ಅಲ್ಲದೆ ಹನ್ನೆರಡು ಸದಸ್ಯರನ್ನೊಳಗೊಂಡ ಕಾರ್ಯಕಾರಿ ಸಮಿತಿ ಆಯ್ಕೆಗೊಂಡಿದೆ.

ಸೀಮೆಎಣ್ಣೆ ವಿತರಣೆಯಲ್ಲಿನ ಅಕ್ರಮ: ಪ್ರತಿಭಟನೆ

ದೊಡ್ಡ ಬಳ್ಳಾಪುರ ತಹಸೀಲ್ದಾರ್ ಕಛೇರಿಯ ಮುಂದೆ ನೆರೆದಿದ್ದ ನೂರಾರು ಯುವಕರು ಮತ್ತು ಮಹಿಳೆಯರು ಸೀಮೇಎಣ್ಣೆ ವಿತರಣೆಯಲ್ಲಿನ ಅಕ್ರಮ ಮತ್ತು ಪ್ರತಿಭಟನಾ ಪ್ರದರ್ಶನ ನಡೆಸಿದರು. ನೆರೆದಿದ್ದವರನ್ನು ಉದ್ದೇಶಿಸಿ ಮಾತನಾಡಿದ ಡಿ. ವೈ. ಎಫ್.ಐ. ನ ಹೇಮಂತ್ ರಾಜ್ ಪಡಿತರ ವ್ಯವಸ್ಥೆಯನ್ನು ದುರ್ಬಲಗೊಳಿಸುವ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಜನ ವಿರೋಧಿ ನೀತಿಯನ್ನು ಖಂಡಿಸಿದರು. ಸಿ.ಪಿ.ಐ.(ಎಂ) ನ ತಾಲ್ಲೂಕ್ ಮುಖಂಡರಾದ ರೇಣುಕಾ ರಾಧ್ಯ ರವರು ಮಾತನಾಡುತ್ತಾ ಪೆಟ್ರೋಲ್ -ಡೀಸೆಲ್ ಬೆಲೆಗಳ ಏರಿಕೆಯಿಂದ ಎಲ್ಲಾ ಅಗತ್ಯ ವಸ್ತುಗಳ ಬೆಲೆಗಳು ಏರುವುದೆಂದು ತಿಳಿಸಿ ತೈಲ ಬೆಲೆಗಳ ಹೆಚ್ಚಳವನ್ನು ಕೂಡಲೇ ಹಿಂತೆಗೆದುಕೊಳ್ಳಲು ಸರ್ಕಾರವನ್ನು ಒತ್ತಾಯಿಸಿದರು. ಪ್ರದರ್ಶನಕಾರರಿಂದ ಮನವಿ ಪತ್ರ ಸ್ವೀಕರಿಸಿದ ತಹಶೀಲ್ದಾರರು ಸೀಮೆಎಣ್ಣೆ ವಿತರಣೆಯಲ್ಲಿನ ಅವ್ಯವಸ್ಥೆ ಅಕ್ರಮಗಳನ್ನು ಸರಿಪಡಿಸುವುದಾಗಿ ಮತ್ತು ಬೇಡಿಕೆಗಳ ಕುರಿತು ಸಲ್ಲಿಸಲಾಗಿರುವ ಮನವಿ ಪತ್ರವನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡುವ ಆಶ್ವಾಸನೆ ನೀಡಿದರು. ಪ್ರತಿಭಟನೆಯ ನೇತೃತ್ವವನ್ನು ತಾಲ್ಲೂಕ್ ಸಮಿತಿಯ ಅಧ್ಯಕ್ಷರಾದ ಸಂಜೀವಪ್ಪ ಮತ್ತು ಕಾರ್ಯದರ್ಶಿ ವೆಂಕಟರೆಡ್ಡಿ ವಹಿಸಿದ್ದರು.

ರಾಯಚೂರು: ಜಿಲ್ಲೆಯ ಜಾಲಹಳ್ಳಿಯ ಸಿ.ಪಿ.ಐ(ಎಂ). ಶಾಖೆಯ ನೇತೃತ್ವದಲ್ಲಿ ಪೆಟ್ರೋಲ್-ಡೀಸೆಲ್ ಬೆಲೆ ಏರಿಕೆ ವಿರೋಧಿಸಿ ಪ್ರತಿಭಟನೆ ನಡೆಸಿದರು. ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದ ಕಾರ್ಯಕರ್ತರು ನಾಡ ಕಛೇರಿಗೆ ಮನವಿ ಪತ್ರ ಸಲ್ಲಿಸಿದರು. ಪ್ರತಿಭಟನೆಯಲ್ಲಿ ಶ್ಯಾಮಸುಂದರ ಮಹೇಂದ್ರಕರ. ತಿಪ್ಪಯ್ಯನಾಯಕ. ಸಿ.ಎಸ್. ನಾಡಗೌಡ, ಮಲ್ಲಯ್ಯ ಜಾಲಹಳ್ಳಿ ಮುಂತಾದವರು ಪಾಲ್ಗೊಂಡಿದ್ದರು.

ಸಾಮೂಹಿಕ ಸಂಘಟನೆಗಳ ವೇದಿಕೆ ಸಭೆ

ಇತ್ತೀಚಿಗೆ ಹುಬ್ಬಳ್ಳಿಯಲ್ಲಿ ಎಲ್.ಐ.ಸಿ., ಟೆಲಿಕಾಂ ಬ್ಯಾಂಕ್, ಸಿಐಟಿಯು, ಎಸ್.ಎಫ್.ಐ. ಮುಂತಾದ ಸಂಘಟನೆಗಳ ಮುಖಂಡರ ಸಭೆ ಎಂ.ಕೆ.ದೇಶಪಾಂಡೆಯವರ ಅಧ್ಯಕ್ಷತೆಯಲ್ಲಿ ನಡೆದು, ಜಿಲ್ಲಾ ಸಮಾವೇಶ, ಹೋರಾಟ ಕಾರ್ಯಕ್ರಮಗಳನ್ನು ರೂಪಿಸಲು, ತಯಾರಿ ನಡೆಸಲು ನಿರ್ಧರಿಸಲಾಯಿತು.



ಭಾರತೀಯ ವಿಮೋಚನಾ ಸಮರ

ಸುಮಾರು ಎರಡು ಶತಮಾನಗಳ (1757-1947)

ವಸಾಹತುಶಾಹಿ ವಿರೋಧಿ ಸಮರದಲ್ಲಿ ಭಾರತ ಒಂದು ಆಧುನಿಕ ರಾಷ್ಟ್ರವಾಗಿ ಬೆಸೆದುಕೊಂಡ, ಭಾರತೀಯ ಜನಗಳ ಅಪಾರ ತ್ಯಾಗ-ಬಲಿದಾನಗಳ ಒಂದು ಪಕ್ಷಿನೋಟ.

ಬ್ರಿಟಿಷ್ ಆಳ್ವಿಕೆಯ ವಿರುದ್ಧ ಭಾರತೀಯ ಜನಗಳಲ್ಲಿ ಹೆಚ್ಚುತ್ತಿದ್ದ ದ್ವೇಷ, ಕ್ರೋಧ ದೇಶದಲ್ಲಿ ಅಲ್ಲಲ್ಲಿ ಬೇರೆ ಬೇರೆ ರೂಪದಲ್ಲಿ ಕಂಡುಬಂದಿತ್ತು. 1857 ರಲ್ಲಿ ಅದು ಬೃಹತ್ ರೂಪದಲ್ಲಿ ಭುಗಿಲೆದ್ದು ಬ್ರಿಟಿಶ್ ಆಳ್ವಿಕೆಯ ಅಡಿಗಲ್ಲನ್ನೇ ಬಲವಾಗಿ ನಡುಗಿಸಿತು. ಅಧಿಕಾರ ಕಳಕೊಂಡ ಆಳರಸರು, ಆಸ್ತಿ ಕಳಕೊಂಡ ಜಮೀನುದಾರರು, ಭಾರತದಲ್ಲಿ ಬ್ರಿಟಿಶ್ ಪಡೆಗಳಲ್ಲಿದ್ದ ಭಾರತೀಯ ಸೈನಿಕರು, ರೈತರು, ಕೈಸುಬುದಾರರು ವಿಶಾಲ ಸಮೂಹಗಳು ಒಟ್ಟಾಗಿ ಬ್ರಿಟಿಶ್ ಆಳ್ವಿಕೆಯನ್ನು ಕಿತ್ತೆಸೆಯಲು ಮುಂದಾದರು. ಬ್ರಿಟಿಶ್ ಸೇನಾಪಡೆಗಳಲ್ಲಿನ ಭಾರತೀಯ ಸೈನಿಕರ ಬಂದೂಕುಗಳಲ್ಲಿ ಬಳಕೆಗೆ ದನದ ನೆಣ ಹಚ್ಚಿದ ಕಾಡತೂಸುಗಳನ್ನು ಕೊಟ್ಟದ್ದು ಈ ಕ್ರೋಧ ಸಿಡಿದೇಳಲು ಒಂದು ನೆವವಾಯಿತು. ಅದು ಭಾರತೀಯರ ಧಾರ್ಮಿಕ ನಂಬಿಕೆಗಳ ಬಗ್ಗೆ ಬ್ರಿಟಿಶ್ ಆಳರಸರ ನಿರ್ಲಕ್ಷ್ಯದ ದ್ಯೋತಕವೂ ಆಗಿತ್ತು



ಮಾರ್ಚ್ 29, 1857 ಬ್ಯಾರಕ್‌ಪುರದ 34ನೇ ಪದಾತಿದಳದ ಯುವ ಸಿಪಾಯಿ ಅಂದರೆ ಸೈನಿಕ **ಮಂಗಲ್ ಪಾಂಡೆ** ಬಂಡಾಯದ ಕಹಳೆ ಊದಿದ. ಬ್ರಿಟಿಶ್ ಸೇನಾಧಿಕಾರಿಗಳು ಅವನ ಮೇಲೆ ಮುಗಿಬಿದ್ದು ಬಂಧಿಸಲು ಪ್ರಯತ್ನಿಸುವಾಗ ಗಾಯಗೊಂಡರು. ಮಂಗಲ್ ಪಾಂಡೆಗೂ ಗಂಭೀರ ಗಾಯಗಳಾದವು. ಏಪ್ರಿಲ್ 6, 1857 ರಂದು ಮಿಲಿಟರಿ ನ್ಯಾಯಾಲಯದ ಎದುರು ಮಂಗಲ್ ಪಾಂಡೆಯ ವಿಚಾರಣೆಯಾಗಿ ಗಲ್ಲುಶಿಕ್ಷೆ ವಿಧಿಸಲಾಯಿತು. ಏಪ್ರಿಲ್ 8 ರಂದು ಆತನನ್ನು ಗಲ್ಲಿಗೇರಿಸಲಾಯಿತು. ಅದಾದ ಎರಡು ತಿಂಗಳಲ್ಲೇ 1857 ರ ಮಹಾನ್ ಬಂಡಾಯ ಭುಗಿಲೆದ್ದಿತು.

ಬ್ರಿಟಿಶರು ಒಂದಾದ ಮೇಲೊಂದರಂತೆ ಸಿಪಾಯಿಗಳನ್ನು ನಿಶ್ಶಸ್ತ್ರೀಕರಣಗೊಳಿಸಿದರೂ ಬಂಡಾಯದ ಕರೆ ಉತ್ತರ ಭಾರತದ ಹಲವು ಪಟ್ಟಣಗಳಿಗೆ ಕಾಳ್ಗಿಚ್ಚಿನಂತೆ ಹರಡಿತು.

ಮೇ 9 ರಂದು ಮೇರಠ್‌ನ ಸಿಪಾಯಿಗಳು ತಮ್ಮ ಬ್ರಿಟಿಶ್ ಅಧಿಕಾರಿಗಳನ್ನು ಕೊಂದು




ದಿಲ್ಲಿಯತ್ತ ಸಾಗಿ ಅದನ್ನು ವಶಪಡಿಸಿಕೊಂಡರು. ಕೆಂಪುಕೋಟೆಯಲ್ಲಿನ ಭಾರತೀಯ ಸಿಪಾಯಿಗಳು ಅವರೊಡನೆ ಸೇರಿಕೊಂಡು ಬಹದ್ದೂರ್ ಶಾ ಜಾಫರ್‌ನನ್ನು ಭಾರತದ ಸಾಮ್ರಾಟ ಎಂದು ಘೋಷಿಸಲಾಯಿತು. ಹೆದರಿದ ಬ್ರಿಟಿಶರು ಲಾಹೋರ್, ಪೇಶಾವರ್‌ಗಳಲ್ಲಿ ಸಿಪಾಯಿಗಳನ್ನು ನಿಶ್ಶಸ್ತ್ರೀಕರಿಸಿದರು. ಆದರೆ ಆಗಲೇ ಆಗ್ರಾ, ಬರೇಲಿ ಮೊರಾದಾಬಾದ್ ಇತ್ಯಾದಿ ವಿಭಿನ್ನ ಕಡೆಗಳಲ್ಲಿ ಸಿಪಾಯಿಗಳು ದಂಗೆಯೆದ್ದರು. ಗ್ವಾಲಿಯರ್‌ನ ಸಿಂಧ್ಯಾ ಬ್ರಿಟಿಶರಿಗೆ ನಿಷ್ಠನಾಗಿದ್ದರೂ ಆತನ ಸೈನಿಕರೂ ಬಂಡೆದ್ದರು. ಹಲವು ತಿಂಗಳ ಕಾಲ ಉತ್ತರ ಹಾಗೂ ಮಧ್ಯ ಭಾರತದ ಹಲವೆಡೆ ಬ್ರಿಟಿಶ್ ಆಳ್ವಿಕೆಯೆಂಬುದೇ ಇರಲಿಲ್ಲ. ದಿಲ್ಲಿಯಲ್ಲದೆ ಕಾನಪುರ, ಲಕ್ನೌ, ಬರೇಲಿ, ಬುಂದೇಲ್‌ಖಂಡದಲ್ಲಿ ಭೀಷಣ ಕಾಳಗಗಳು ನಡೆದವು.



ಆದರೆ ಕ್ರಮೇಣ ಬ್ರಿಟಿಶರ ಕೈ ಮೇಲಾಯಿತು. ಸೆಪ್ಟೆಂಬರ್ 28, 1857 ದಿಲ್ಲಿ ಮತ್ತೆ ಬ್ರಿಟಿಶರ ವಶವಾಯಿತು. ಮರುದಿನವೇ ಬಹದೂರ್ ಶಾ ಜಫರ್‌ನನ್ನು ಬ್ರಿಟಿಶರು ಬಂಧಿಸಿದರು. ಆತನ ಮಕ್ಕಳನ್ನು ಗುಂಡಿಕ್ಕಿ ಕೊಂದರು. ಜನವರಿ 27, 1858 ರಂದು ಮಿಲಿಟರಿ ವಿಚಾರಣೆ ನಡೆಸಿ ಬಾದಶಾಹನನ್ನು ರಂಗೂನಿಗೆ ಗಡೀಪಾರು ಮಾಡಲಾಯಿತು. ಆದರೂ ದಂಗೆಯನ್ನು ಪೂರ್ಣವಾಗಿ ದಮನ ಮಾಡುವುದು ಬ್ರಿಟಿಶರಿಂದಾಗಲಿಲ್ಲ. ಮತ್ತೂ ಒಂದು ವರ್ಷಕಾಲ ಹೋರಾಟ ಮುಂದುವರೆಯಿತು.



ನಾನಾ ಸಾಹೇಬ್ ಈ ಬಂಡಾಯದ ಪ್ರಮುಖ ಮುಖಂಡರಲ್ಲೊಬ್ಬ. ಬ್ರಿಟಿಶ್ ಸರಕಾರ ಇವರ ತಲೆಯ ಮೇಲೆ ಒಂದು ಲಕ್ಷ ರೂಗಳ ಇನಾಮು ಇಟ್ಟಿತ್ತು. ದಂಗೆ ವಿಫಲವಾದ ನಂತರ ನಾನಾ ಸಾಹೇಬ್ ನೇಪಾಳಕ್ಕೆ ಹೋಗಿ ಆಶ್ರಯ ಪಡೆದ. ಅಲ್ಲೇ ತೀರಿಕೊಂಡ.




ಬಂಡಾಯದ ಒಂದು ಪ್ರಮುಖ ಕೇಂದ್ರ **ಝಾನ್ಸಿಯ ವೀರರಾಣಿ ಲಕ್ಷ್ಮಿಬಾಯಿಯ** ಹೆಸರಂತೂ ಗೊತ್ತಿಲ್ಲದವರೇ ಇಲ್ಲ. ಬ್ರಿಟಿಶರ ವಿರುದ್ಧ ಹೋರಾಡುತ್ತಾ ಗ್ವಾಲಿಯರ್‌ನಲ್ಲಿ ಜೂನ್ 19, 1858 ರಂದು ವೀರಮರಣವನ್ನಪ್ಪಿದಳು.



ಬ್ರಿಟಿಷರ ಬಂಧನದಲ್ಲಿ ತಾಂತ್ಯಾಟೋಪೆ

ತಾಂತ್ಯಾಟೋಪೆ ಈ ಬಂಡಾಯದ ಸೇನಾಧಿಪತಿಗಳಲ್ಲಿ ಅತ್ಯುನ್ನತ ಸ್ಥಾನ ಪಡೆದಾತ. 1857 ರ ಆರಂಭದಲ್ಲಿ ಆತನನ್ನು ಬ್ರಿಟಿಶರು ಕೊನೆಗೂ ಪತ್ತೆಹಚ್ಚಿ ಬಂಧಿಸಿ ಗಲ್ಲಿಗೇರಿಸಿದರು.

ಮೌಲ್ವೀ ಅಹಮದುಲ್ಲಾ ಇನ್ನೊಬ್ಬ ಧೀರ ಮುಖಂಡ ಸೇನಾಧಿಪತಿ. ಒಬ್ಬ ರಾಜ ಆತನನ್ನು ಕೊಂದು ಬ್ರಿಟಿಶ್ ಮ್ಯಾಜಿಸ್ಟ್ರೇಟ್‌ನಿಂದ 50 ಸಾವಿರ ರೂ. ಇನಾಮು ಪಡೆದ ಹೊಲಸು ಕೆಲಸಮಾಡಿದ್ದ.



ಬಿಹಾರದ ಜಗದೀಶಪುರ ಬಂಡಾಯಗಾರ ಜಾಗೀರ್‌ದಾರ **ಕುಂವರ್ ಸಿಂಗ್** ಬ್ರಿಟಿಶ್ ಸೇನೆಯೊಂದಿಗೆ ಸೆಣಸಾಟದಲ್ಲಿ ಗಂಭೀರವಾಗಿ ಗಾಯಗೊಂಡು ಮರಣವನ್ನಪ್ಪಿದ. ನಂತರ ಸಿಂಗಭೂವ್, ಛೋಟಾನಾಗಪುರಗಳಲ್ಲಿ ದಂಗೆಯೆದ್ದ ಮುಖಂಡರು ಹಾಗೂ ಸಿಪಾಯಿಗಳನ್ನು ಗಲ್ಲಿಗೇರಿಸಲಾಯಿತು.

ಹರಿಯಾಣದ ಜಾಗೀರದಾರ ರಾವ್ ತುಲಾರಾಂ ಸಮರಕ್ಕೆ ಹಣ ಹಾಗೂ ಶಸ್ತ್ರ ಪಡೆಯಲು ಗುಪ್ತವಾಗಿ ಮೂರು ಸಂಗಾತಿಗಳೊಡನೆ ರಶ್ಯಾ, ಇರಾನ್, ಅಫಘಾನಿಸ್ತಾನಕ್ಕೆ ಹೊರಟ ಮುಖಂಡ. ಆದರೆ 1862 ಸೆಪ್ಟೆಂಬರ್ 8 ರಂದು ಕಾಬೂಲಿನಲ್ಲಿ ಆರೋಗ್ಯ ಕೆಟ್ಟು ಕೊನೆಯುಸಿರೆಳೆದ. ಈಗಲೂ ಅಲ್ಲಿ ಆತನ ಸ್ಮಾರಕವಿದೆ.

(ಮುಂದುವರಿಯುವುದು)

... ಸ್ವಾತಂತ್ರ್ಯ ಹೋರಾಟದಲ್ಲಿ ಕಮ್ಯುನಿಸ್ಟರು ಅಥವಾ ನಂತರ ಕಮ್ಯುನಿಸ್ಟರಾದವರು ... ಸ್ವಾತಂತ್ರ್ಯ ಹೋರಾಟದಲ್ಲಿ ಕಮ್ಯುನಿಸ್ಟರು ಅಥವಾ ನಂತರ ಕಮ್ಯುನಿಸ್ಟರಾದವರು ... ವಹಿಸಿದರು ಎಂಬುದನ್ನು ಕೆಲವು ಪ್ರಮುಖ ಕಮ್ಯುನಿಸ್ಟ್ ಸ್ವಾತಂತ್ರ್ಯ ಹೋರಾಟಗಾರರ ಅನುಭವದ ನೆರಳಿನಲ್ಲಿ ಬಿಂಬಿಸುವ ಈ ಅಂಕಣದಲ್ಲಿ ಈಗಾಗಲೇ ನೀವು ಹರ್ಕಿಶನ್ ಸಿಂಗ್ ಸುರ್ಜೀತ್ ಹಾಗೂ ಲಕ್ಷ್ಮಿ ಸೆಹಗಲ್ ಅವರ ನೆನಪುಗಳನ್ನು ಓದಿರುವಿರಿ. ಈ ವಾರ ಓದಿ ಗಣೇಶ್ ಘೋಷ್‌ರವರ ನೆನಪು.

"ಒಂದು ಬಾಂಬಿಗಿಂತ ಒಬ್ಬ ಕಾರ್ಮಿಕ ಹೆಚ್ಚು ಶಕ್ತಿಶಾಲಿ"

ಎಂದು ಕಂಡುಕೊಂಡ ಕ್ರಾಂತಿಕಾರಿ ಗಣೇಶ್ ಘೋಷ್

1921 ರಲ್ಲಿ ಭಾರತರಾಷ್ಟ್ರೀಯ ಕಾಂಗ್ರೆಸ್‌ನ ನಾಗಪುರ ಅಧಿವೇಶನ ಅಹಿಂಸಾತ್ಮಕ ಅಸಹಕಾರ ಆಂದೋಲನದ ಕರೆ ನೀಡಿತ್ತು. ಆದರೆ ಬಂಗಾಳದ ಯುವಜನ ಅಹಿಂಸೆಯನ್ನು ಒಪ್ಪುವಂತಿಲ್ಲ ಎಂದು ದೇಶಬಂಧು ಚಿತ್ತರಂಜನದಾಸ್‌ರವರು ಗಾಂಧೀಜಿಗೆ ಹೇಳಿದರಂತೆ. ಗಾಂಧೀಜಿ ದಾಸ್‌ರವರ ಜೊತೆಗೆ ಕಲ್ಕತ್ತೆಗೆ ಬಂದು ಆಗ ಬ್ರಿಟಿಶರ ವಿರುದ್ಧ ಭಯೋತ್ಪಾದನೆ ನಡೆಸುತ್ತಿದ್ದ 'ಅನುಶೀಲನ್' ಮತ್ತು 'ಜುಗಾಂತರ್' ಗುಂಪುಗಳ ಯುವ ಮುಖಂಡರನ್ನು ಕಂಡು ಮಾತನಾಡಿ "'ಒಂದು ವರ್ಷ ನಿಮ್ಮ ಚಳುವಳಿಯನ್ನು ನಿಲ್ಲಿಸಿ ಅಸಹಕಾರ ಆಂದೋಲನದಲ್ಲಿ ಪಾಲ್ಗೊಳ್ಳಿ" ಎಂದು ಮನವಿ ಮಾಡಿಕೊಂಡರಂತೆ. ಕಾಂಗ್ರೆಸ್ ಪಕ್ಷ ಸೇರಿ ಎಂದೂ ಅವರನ್ನು ಕೇಳಿಕೊಂಡರಂತೆ. ಆ ಯುವ ಮುಖಂಡರಲ್ಲಿ 21 ವರ್ಷದ ಗಣೇಶ್ ಘೋಷ್ ಒಬ್ಬರು.

ಗಾಂಧೀಜಿಯ ವಿನಂತಿಯಂತೆ ಗಣೇಶ್ ಘೋಷ್ ಹಾಗೂ ಅವರ ಮಿತ್ರ ಅನಂತ್ ಸಿಂಗ್ ನೇತೃತ್ವದಲ್ಲಿ ಚಿತ್ತಗಾಂವ್‌ನಲ್ಲೆಲ್ಲಾ ಅಹಿಂಸಾತ್ಮಕ ಆಂದೋಲನ ಹರಡಿತು. ಶಾಲೆ-ಕಾಲೇಜು ಗಳಲ್ಲಿ, ಬರ್ಮಾ-ತೈಲ ಕಂಪೆನಿಯಲ್ಲಿ, ಕಾರ್ಖಾನೆಗಳಲ್ಲಿ, ಬಂದರಿನಲ್ಲಿ ಲಂಗರು ಹಾಕಿದ ಹಡಗುಗಳಲ್ಲಿ ಮುಷ್ಕರಗಳು ನಡೆದವು.

ಗಾಂಧೀಜಿ ಅಸಹಕಾರ ಆಂದೋಲನವನ್ನು ಹಿಂತೆಗೆದುಕೊಂಡರು. ಗಣೇಶ್ ಘೋಷ್ ಇಂಜಿನಿಯರಿಂಗ್ ಕಾಲೇಜ್ ಸೇರಿದರು. ಆದರೆ ಆತ ಇಂಜಿನಿಯರಿಂಗ್‌ಗಿಂತ ಬಾಂಬ್ ತಯಾರಿಸಲು ರಾಸಾಯನಿಕಗಳನ್ನು ಸಂಗ್ರಹಿಸುವುದರಲ್ಲೇ ಹೆಚ್ಚು ಆಸಕ್ತಿ ತೋರುತ್ತಿದ್ದ. ಇದರ ಸುಳಿವು ಸಿಕ್ಕ ಪೋಲೀಸರು ಆತನನ್ನು ಬಂಧಿಸಿದರು. ನೇರ ಪುರಾವೆಯಿಲ್ಲದ ಕಾರಣ ಬಿಡುಗಡೆಯಾಯಿತು.

1924 ರಲ್ಲಿ ಕ್ರಾಂತಿಕಾರಿ ಭಯೋತ್ಪಾದಕ ಗುಂಪುಗಳ ಚಟುಟಿಕೆಗಳು ಮತ್ತೆ ಪ್ರಾರಂಭವಾದಾಗ ಗಣೇಶ್ ಘೋಷ್ ಮತ್ತೆ ಬಂಧಿಸಲ್ಪಟ್ಟು 1928 ರಲ್ಲಷ್ಟೇ ಬಿಡುಗಡೆ ಪಡೆದರು. ಮಿಡ್ಲ್‌ಸ್ಕೂಲಿನಲ್ಲಿ ಓದುತ್ತಿರುವಾಗಲೇ ಗಣೇಶ್ ಘೋಷ್ 'ಮಾಸ್ತರ್ ದಾ' ಎಂದು ಹೆಸರಾದ ಕ್ರಾಂತಿಕಾರಿ ಸೂರ್ಯಸೇನ್‌ರನ್ನು ಭೇಟಿಯಾಗಿದ್ದರು. ಬ್ರಿಟಿಶರನ್ನು ಹೊಡೆದೋಡಿಸಲು ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸುವ ಹುಡುಕಾಟದಲ್ಲಿ 1928 ರಲ್ಲಿ ಜೈಲಿನಿಂದ ಬಿಡುಗಡೆಯಾಗಿ ಬಂದ ಮೇಲೆ ಕಮ್ಯುನಿಸ್ಟ್ ಮುಖಂಡ ಮುಝಫರ್ ಅಹ್ಮದ್‌ರನ್ನು ಭೇಟಿಯಾದರು. ಇವರು ಸೋವಿಯತ್ ಒಕ್ಕೂಟಕ್ಕೆ ಪತ್ರ ಬರೆದರೆ ಅಲ್ಲಿಂದ ಶಸ್ತ್ರಾಸ್ತ್ರಗಳು ಬರುತ್ತವೆ ಎಂಬ ನಂಬಿಕೆಯಿಂದ ಅವರನ್ನು ಭೇಟಿಯಾಗಿದ್ದರಂತೆ. ಮಾಸ್ಟರ್‌ದಾರನ್ನಾಗಲೀ, ಮುಝಫರ್‌ರನ್ನಾಗಲೀ ಮೊದಲ ಸಲ ಭೇಟಿಯಾದಾಗ ಇವರು ಪ್ರಭಾವಿತರಾಗಲಿಲ್ಲವಂತೆ. ಆದರೆ ನಂತರ ಇವರ ಕ್ರಾಂತಿಕಾರಿ ಜೀವನ ಇವರಿಬ್ಬರ ಪ್ರಭಾವದಿಂದಲೇ ರೂಪುಗೊಂಡಿತು. "ಒಬ್ಬ ಕಾರ್ಮಿಕ ಒಂದು ಬಾಂಬಿಗಿಂತ ಹೆಚ್ಚು ಶಕ್ತಿಶಾಲಿ ಎಂಬುದನ್ನು ನಾನು ಮೊದಲ ಬಾರಿ ಕೇಳಿದ್ದು ಮುಝಫರ್ ಸಾಹೇಬ್‌ರ ಬಾಯಿಂದಲೇ" ಎನ್ನುತ್ತಿದ್ದರು ಆಮೇಲೆ ಗಣೇಶ್ ಘೋಷ್.

ಮುಝಫರ್‌ರವರ ಮನೆಯಲ್ಲಿ ಸದಾ ಹಲವಾರು ಮಂದಿ ವಿವಿಧ ಚರ್ಚೆಗಳಲ್ಲಿ, ಹರಟೆಗಳಲ್ಲಿ ತೊಡಗಿರುತ್ತಿದ್ದರು. ಅವರು ಭಾರತದ ಕಾರ್ಮಿಕ ಆಂದೋಲನದ ಬಗ್ಗೆ ಸದಾ ನಿರಾಸೆ ವ್ಯಕ್ತಪಡಿಸುತ್ತಿದ್ದರಂತೆ. ಬೇರೆ ದೇಶಗಳ ಬಗ್ಗೆ ತಿಳಿದುಕೊಳ್ಳುತ್ತಿಲ್ಲ ಎಂದು ದೂಷಿಸುತ್ತಿದ್ದರಂತೆ. "ಈ ಮುಖಂಡರಿಗೆ ಭಾರತ ಮಾತ್ರ ನಿಷ್ಪ್ರಯೋಜಕವೇ" ಎಂಬ ಪ್ರಶ್ನೆ ಗಣೇಶ್ ಘೋಷ್‌ರಲ್ಲಿ ಎದ್ದಿತು. ಆದರೆ ತನಗೆ ಆಗ ಮಾರ್ಕ್ಸ್‌ವಾದದ ಬಗ್ಗೆ ಏನೂ ತಿಳಿದಿರಲಿಲ್ಲ ಎಂದು ನಂತರ ಅವರು ಹೇಳುತ್ತಿದ್ದರು.

1928 ರಲ್ಲಿ ಕಾಂಗ್ರೆಸ್‌ನ ಕಲ್ಕತ್ತಾ ಅಧಿವೇಶನಕ್ಕೆ ಪ್ರತಿನಿಧಿಯಾಗಿ ಆಯ್ಕೆಯಾದ ಘೋಷ್ ಮೂರು ವರ್ಷ ಬಂಗಾಲ ಪ್ರಾಂತ ಕಾಂಗ್ರೆಸ್ ಸಮಿತಿಯ ಸದಸ್ಯರೂ ಆದರು. ಆದರೆ ಈ ನಡುವೆ ಜೈಲಿನಲ್ಲಿ ಓದಿದ ಐರಿಷ್ ಸ್ವಾತಂತ್ರ್ಯ ಹೋರಾಟಗಾರರನ್ನು ಕುರಿತ ಪುಸ್ತಕ ಆ ರೀತಿ ತಾನೂ ಏನನ್ನಾದರೂ ಮಾಡಬೇಕು ಎಂಬ ಕಾತುರವನ್ನು ಅವರಲ್ಲಿ ಹುಟ್ಟಿಸಿತು.

ಇಂತಹ ಕಾರ್ಯಾಚರಣೆಗೆ ಅವಕಾಶ ಕೊನೆಗೂ 1929-30 ರಲ್ಲಿ ಅವರಿಗೆ ಸಿಕ್ಕಿತು. ಅದುವೇ ಚಿತ್ತಗಾಂಗ್ ಶಸ್ತ್ರಾಗಾರದ ಮೇಲಿನ ಧಾಳಿ. ಮಾಸ್ಟರ್ ದಾ ನೇತೃತ್ವದಲ್ಲಿ ಗಣೇಶ್ ಘೋಷ್, ಅನಂತ್ ಸಿಂಗ್, ಅಂಬಿಕಾ ಚಕ್ರವರ್ತಿ, ಅನುರೂಪ್ ಸೇನ್, ನಾಗೆನ್ ಸೇನ್ ಹಾಗೂ ನಿರ್ಮಲ್ ಸೇನ್ ಒಂದು ಗುಪ್ತ ಸಂಘಟನೆ ಕಟ್ಟಿದರು. ಚಿತ್ತಗಾಂವ್ ರಿಪಬ್ಲಿಕ್ ಆರ್ಮಿ ಸ್ಥಾಪಿಸಿದರು. 1930-ರ ಏಪ್ರಿಲ್ 18 ರಂದು ಇದ್ದಕ್ಕಿದ್ದಂತೆ ಚಿತ್ತಗಾಂಗ್‌ನಲ್ಲಿದ್ದ ಬ್ರಿಟಿಶರ ಶಸ್ತ್ರಾಗಾರದ ಮೇಲೆ ಧಾಳಿ ನಡೆಸಿ ಅದನ್ನು ವಶಪಡಿಸಿಕೊಂಡರು. ಅಷ್ಟೇ ಅಲ್ಲ ಟೆಲಿಫೋನ್ ಕೇಂದ್ರಗಳನ್ನು, ಟೆಲಿಗ್ರಾಫ್ ಕಟ್ಟಡವನ್ನು ಇತರೆ ಎಲ್ಲಾ ಪ್ರಮುಖ ಕೇಂದ್ರಗಳನ್ನು ವಶಪಡಿಸಿಕೊಂಡರು. ಒಂದು ಸರಕಾರವನ್ನೇ ರಚಿಸಿದರು. ಬ್ರಿಟಿಶ್ ಆಡಳಿತ ಕಕ್ಕಾಬಿಕ್ಕಿಯಾಯಿತು. ಆದರೆ ಸ್ವಲ್ಪ ಸಮಯದಲ್ಲೇ ಪರಿಸ್ಥಿತಿ ಬದಲಾಯಿತು. ಬ್ರಿಟಿಶರ ಕೈ ಮೇಲಾಯಿತು. ಕ್ರಾಂತಿಕಾರಿಗಳು ಜಲಾಲಾಬಾದ್ ಗುಡ್ಡಗಾಡು ಪ್ರದೇಶಕ್ಕೆ ಸರಿದರು. ಗಣೇಶ್ ಘೋಷ್ ಮತ್ತು ಅನಂತ್ ಸೇನ್ ಆಗ ಫ್ರೆಂಚರ ಅಧೀನದಲ್ಲಿದ್ದ ಚಂದ್ರನಗರ್‌ಗೆ ಪಲಾಯನ ಮಾಡಿದರು. ಆದರೆ ಬ್ರಿಟಿಶ್ ಪೋಲೀಸರು ಅದನ್ನು ಪತ್ತೆ ಹಚ್ಚಿ ಧಾಳಿ ಮಾಡಿದರು. ಸ್ವಲ್ಪ ಕಾಳಗದ ನಂತರ ಗಣೇಶ್ ಘೋಷ್‌ರನ್ನು ಬಂಧಿಸಲಾಯಿತು. ಗಣೇಶ್ ಘೋಷ್ ನ್ಯಾಯಾಲಯದಲ್ಲಿ ಸ್ವತಃ ವಾದಿಸಿದರು. ಶಿಕ್ಷೆ ವಿಧಿಸಿ 1932 ರಲ್ಲಿ ಅವರನ್ನು ಅಂಡಮಾನ್‌ಗೆ ಕಳಿಸಲಾಯಿತು. ಅಲ್ಲಿ ಚಿತ್ರಹಿಂಸೆಯನ್ನು ಎದುರಿಸಬೇಕಾಯಿತು. ಅಲ್ಲಿನ ಬಂಧಿಗಳೊಡನೆ ತಮಗೆ ರಾಜಕೀಯ ಕೈದಿಗಳ ಸ್ಥಾನಮಾನ ಕೊಡಬೇಕೆಂದು ಚಳುವಳಿ ನಡೆಸಿದರು.

ಜೈಲಿನಲ್ಲಿ ಗಣೇಶ್ ಘೋಷ್ ಸೇರಿದಂತೆ ಇತರರೂ ತಮ್ಮ ಅದುವರೆಗಿನ ಚಟುವಟಿಕೆಗಳ ವಿಮರ್ಶೆ ನಡೆಸಿದರು. ನಂತರ ಅಲ್ಲಿಗೆ ಖೈದಿಯಾಗಿ ಬಂದ ಡಾ|| ನಾರಾಯಣ್ ರಾಯ್‌ರಿಂದ ಮಾರ್ಕ್ಸ್‌ವಾದದ ಪರಿಚಯವಾಯಿತು. 'ವಸಾಹತುಗಳು ಸ್ವತಂತ್ರವಾಗುವವರೆಗೆ ಇಂಗ್ಲೆಂಡಿನ ಕಾರ್ಮಿಕರ ಮುಕ್ತಿ ಸಾಧ್ಯವಿಲ್ಲ" ಎಂಬ ಲೆನಿನ್ನರ ಮಾತು ಅವರ ಮುಂದೆ ಹೊಸ ದಿಗಂತವನ್ನೇ ತೆರೆದಿಟ್ಟಿತು. ಮಾರ್ಕ್ಸ್‌ವಾದದ ಬಗೆಗಿದ್ದ ಹಳೆಯ ಪೂರ್ವಾಗ್ರಹ ಮಾಯವಾಯಿತು. ಮಾರ್ಕ್ಸ್‌ವಾದಿಗಳು ಇಡೀ ವಿಶ್ವದ ಕಾರ್ಮಿಕರ ವಿಮೋಚನೆಗಾಗಿ ಹೋರಾಡುವವರು, ಅದಕ್ಕೂ ಭಾರತದ ಸ್ವಾತಂತ್ರ್ಯದ ಈ ಹೋರಾಟಕ್ಕೂ ನಿಕಟ ಸಂಬಂಧವಿದೆ ಎಂಬುದನ್ನು ಅವರು ಅರಿತುಕೊಂಡರು.

1937 ರಲ್ಲಿ ಅಂಡಮಾನ್ ಜೈಲಿನಲ್ಲಿದ್ದ ರಾಜಕೀಯ ಬಂಧಿಗಳನ್ನು ಭಾರತಕ್ಕೆ ರವಾನಿಸಬೇಕು ಎಂಬ ಚಳುವಳಿ ಆರಂಭವಾಯಿತು. ಆಗಿನ ಬಂಗಾಳದ ಗವರ್ನರ್ ಇದಕ್ಕೆ ಒಪ್ಪಲಿಲ್ಲ. ಅಂಡಮಾನ್ ಜೈಲು ನೋಡಲು ಬಂದಿದ್ದ ಆತ ಜೈಲಿನಲ್ಲಿದ್ದ ಫ್ರೆಂಚ್‌ಕ್ರಾಂತಿ, ಐರ್ಲೆಂಡ್ ಕ್ರಾಂತಿ ಕುರಿತಾದ ಪುಸ್ತಕಗಳನ್ನು ಹಿಂತೆಗೆದುಕೊಂಡು ಒಂದು ಪೆಟ್ಟಿಗೆ ತುಂಬಾ ಮಾರ್ಕ್ಸ್‌ವಾದಿ ಸಾಹಿತ್ಯವನ್ನು ಕೊಟ್ಟು ಹೋದ. ಇವನ್ನು ಓದಿದರೆ ಬಂಧಿಗಳಲ್ಲಿದ್ದ ಕ್ರಾಂತಿಕಾರಿ ಉತ್ಸಾಹ ಕಮ್ಮಿಯಾಗುತ್ತದೆಂಬುದು ಅವನ ನಂಬಿಕೆಯಾಗಿತ್ತು. ಅವನ ಮೂಢ ನಿರೀಕ್ಷೆ ಈಡೇರಲಿಲ್ಲ. ಬದಲು ಅಲ್ಲಿದ್ದ ರಾಜಕೀಯ ಬಂಧಿಗಳಿಗೆ ಮಾರ್ಕ್ಸ್‌ವಾದದ ಮೂಲಭೂತ ತತ್ವಗಳನ್ನು ಅರಿತುಕೊಳ್ಳಲು ಅವಕಾಶವಾಯಿತು.

ದೇಶವ್ಯಾಪಿ ಚಳುವಳಿಯ ಪರಿಣಾಮವಾಗಿ ಅಂಡಮಾನ್‌ನಲ್ಲಿದ್ದ ರಾಜಕೀಯ ಬಂಧಿಗಳನ್ನು ಕೊನೆಗೂ ಭಾರತಕ್ಕೆ ತರಲಾಯಿತು. ಅಲೀಪುರ್ ಮತ್ತು ಢಾಕಾ ಜೈಲುಗಳಲ್ಲಿ ಶಿಕ್ಷೆ ಅನುಭವಿಸಿದ ಮೇಲೆ 1946 ರಲ್ಲಿ ಗಣೇಶ್ ಘೋಷ್ ಮತ್ತು ಅವರ ಸಂಗಡಿಗರನ್ನು ಬಿಡುಗಡೆ ಮಾಡಲಾಯಿತು. ಗಣೇಶ್ ಘೋಷ್ ಕಮ್ಯುನಿಸ್ಟ್ ಪಕ್ಷ ಸೇರಿದರು.



ಚಿತ್ತಗಾಂಗ್‌ನ ಭಾಗಿದಾರಿಗಳು - ಎಡದಿಂದ ಬಲಕ್ಕೆ ಅನಂತ್ ಸಿಂಗ್, ಅಂಬಿಕಾ ಚಕ್ರವರ್ತಿ ಮತ್ತು ಗಣೇಶ್ ಘೋಷ್.

"ಚಿತ್ತಗಾಂಗ್ ಶಸ್ತ್ರಾಗಾರವನ್ನು ವಶಪಡಿಸಿಕೊಂಡ ಮಾತ್ರಕ್ಕೆ ದೇಶ ವಿದೇಶಿ ಆಳ್ವಿಕೆಯಿಂದ ನಾವು ಮುಕ್ತರಾಗಲಾರೆವು ಎಂಬುದು ನಮಗೆ ಚೆನ್ನಾಗಿ ತಿಳಿದಿತ್ತು. ಸಣ್ಣ ಪ್ರದೇಶದಲ್ಲಾದರೂ ಇಂತಹ ಕಾರ್ಯಾಚರಣೆ ಯಶಸ್ವಿಯಾದರೆ ದೇಶದಲ್ಲೆಲ್ಲಾ ಅದು ಪ್ರಭಾವ ಬೀರಬಲ್ಲದು. ಕೆಲವು ದಿನಗಳ ಮಟ್ಟಿಗಾದರೂ ಒಂದು ಸ್ವತಂತ್ರ ಸರಕಾರ ರಚಿಸಲು ಸಾಧ್ಯವಾದರೆ ಬ್ರಿಟಿಶ್ ಸಾಮ್ರಾಜ್ಯ ಶಾಹಿಯ ವಿರುದ್ಧ ಹೋರಾಡಲು ಜನರಿಗೆ ಸ್ಫೂರ್ತಿ ಸಿಗುತ್ತದೆ. ದೇಶದ ಇತರ ಭಾಗಗಳಲ್ಲೂ ಇಂತಹ ಪ್ರಯತ್ನಗಳಾಗುತ್ತವೆ. ಇದರಿಂದ ಬ್ರಿಟಿಶರು ಭಯಭೀತರಾಗುತ್ತಾರೆ. ಇದು ಚಿತ್ತಗಾಂಗ್‌ನಲ್ಲಿ ವಿಶಿಷ್ಟ ರೀತಿಯಲ್ಲಿ ಬಂಡೆದ್ದ ಯುವಜನರ ವಿಚಾರವಾಗಿತ್ತು" ಎಂದರು ಗಣೇಶ್ ಘೋಷ್.

ಕಮ್ಯುನಿಸ್ಟ್ ಪಕ್ಷ ಸೇರಿದ ನಂತರ, ಸ್ವಾತಂತ್ರ್ಯದ ನಂತರ ಮತ್ತೆ ಅವರನ್ನು ಜೈಲಿಗೆ ಕಳಿಸಲಾಯಿತು. 1948 ರಲ್ಲಿ ಕಮ್ಯುನಿಸ್ಟ್ ಪಕ್ಷವನ್ನು ತೆಲಂಗಾಣ ಸಮರದ ಹಿನ್ನೆಲೆಯಲ್ಲಿ ನಿಷೇಧಿಸಿದಾಗ ಅವರು ತಲೆಮರೆಸಿಕೊಂಡರು. ಆದರೂ ಕೊನೆಗೂ ಬಂಧಿತರಾದರು. 1952 ರಲ್ಲಿ ಬಿಡುಗಡೆಯಾದರು. ಅದೇ ವರ್ಷ ಬೆಲ್ಗಾಚಿಯ ಅಸೆಂಬ್ಲಿ ಕ್ಷೇತ್ರದಿಂದ ಕಮ್ಯುನಿಸ್ಟ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆದ್ದರು. ನಂತರ 1957, 1962 ರಲ್ಲೂ ಗೆದ್ದರು. 1962 ರಲ್ಲಿ ಭಾರತ-ಚೀಣಾ ಗಡಿ ತಿಕ್ಕಾಟದ ಹಿನ್ನೆಲೆಯಲ್ಲಿ ಮತ್ತೊಮ್ಮೆ ಅವರು ಸೆರೆವಾಸ ಅನುಭವಿಸಬೇಕಾಯಿತು.

ಸ್ವಾತಂತ್ರ್ಯದ ನಂತರವೂ ಅವರು ವಿಧಾನಸಭೆಯಲ್ಲಾಗಲಿ ಹೊರಗಾಗಲೀ ಸದಾ ಚಳುವಳಿಗಳ ಮುಂಚೂಣಿಯಲ್ಲಿರುತ್ತಿದ್ದರು. ಪಕ್ಷದ ವಿಭಜನೆಯ ನಂತರ ಅವರು ಸಿಪಿಐ(ಎಂ) ಸೇರಿ ಪರಿಷ್ಕರಣವಾದೀ ಹಾಗೂ ಸಂಕುಚಿತ ಪಂಥವಾದದ ವಿರುದ್ಧ ಹೋರಾಟದಲ್ಲೂ ಪ್ರಮುಖ ಪಾತ್ರವಹಿಸಿದರು. ದಕ್ಷಿಣ ಕಲ್ಕತ್ತಾ ಕ್ಷೇತ್ರದಿಂದ ಅವರು ಲೋಕಸಭೆಗೂ ಆರಿಸಲ್ಪಟ್ಟರು. 1988ರ ವರೆಗೆ ಅವರು ಸಿಪಿಐ(ಎಂ) ಪಶ್ಚಿಮ ಬಂಗಾಳ ರಾಜ್ಯ ಸಮಿತಿಯ ಸದಸ್ಯರಾಗಿದ್ದರು. ಅವಿವಾಹಿತರಾಗುಳಿದ ಗಣೇಶ್ ಘೋಷ್ ಸರಳ ಜೀವಿ, ನಮ್ರ ಸ್ವಭಾವದವರು. ಡಿಸೆಂಬರ್ 22, 1992 ರಂದು ಅವರು ನಿಧನರಾದರು. ಸ್ವಾತಂತ್ರ್ಯ ಹೋರಾಟದ ಸ್ಫೂರ್ತಿಯನ್ನು ಕೊನೆತನಕವೂ ಜ್ವಲಂತವಾಗಿರಿಸಿಕೊಂಡ ಹೋರಾಟಗಾರರು ಅವರು.

ಮಿನಿ ಬಜೆಟ್‌ನ ಹೊಡೆತ

ಕೇಂದ್ರ ಹಣಕಾಸಿನ ಮಂತ್ರಿ ಪಿ.ಚಿದಂಬರಂ ಅವರು 1997-98ನೇ ಸಾಲಿಗೆ ಕನಸಿನ ಬಜೆಟ್ಟನ್ನು ಮಂಡಿಸಿದರೆಂದು ಬೂರ್ಝ್ವ ಮಾಧ್ಯಮಗಳು ಹೊಗಳಿದ್ದೇ ಹೊಗಳಿದ್ದು. ಬಂಡವಾಳಿಗರಿಗೆ ಸಖತ್ ರಿಯಾಯಿತಿ ಬಡವರಿಗೆ ಹೊಟ್ಟೆಯ ಮೇಲೆ ಹೊಡೆತ ನೀಡಿದ ಈ ಬಜೆಟ್ ಈಗಾಗಲೇ ಆರ್ಥಿಕದ ಮೇಲೆ ತನ್ನ ದುಷ್ಪರಿಣಾಮಗಳನ್ನು ತೋರತೊಡಗಿದ್ದು ಅದನ್ನು ಸರಿಪಡಿಸಲು ಈಗ ಹಠಾತ್ತನೆ ಮಿನಿ ಬಜೆಟ್ಟನ್ನು ಹೇರಲಾಗಿದೆ.

ಸಂಯುಕ್ತರಂಗದ ಚಾಲನಾ ಸಮಿತಿಯನ್ನು ಕಡೆಗಣಿಸಿ ಬಂದ ಈ ಕ್ರಮಗಳು ಆರ್ಥಿಕಕ್ಕೆ ಇಂತಹ ಬಂಡವಾಳಿಗ-ಪರ ಬಡವರ ವಿರೋಧಿ ಕ್ರಮಗಳು ಆಗಾಗ್ಗ ಬೇಕಾಗುತ್ತವೆ ಎಂಬುದನ್ನು ಎತ್ತಿ ತೋರಿಸುತ್ತವೆ.

ಹಣಕಾಸು ಕೊರತೆ ಇನ್ನೂ ಬೆಳೆಯುವುದನ್ನು ತಡೆಗಟ್ಟುವ ಸಲುವಾಗಿ ಈ ಕ್ರಮಗಳನ್ನು ತರಬೇಕಾಯಿತ್ತೆಂದು ಸರ್ಕಾರ ಹೇಳಿಕೊಂಡಿದೆ. ಕನಸಿನ ಬಜೆಟ್ ನಿಜಕ್ಕೂ ಜನಪರವಾಗಿದ್ದರೆ ಉತ್ತಮ ಆರೋಗ್ಯಕರ-ಆರ್ಥಿಕ ದೃಷ್ಟಿಯನ್ನು ಬೆಳಸಿದ್ದರೆ ಇಂತಹ ಕ್ರಮಗಳ ಅವಶ್ಯಕತೆ ಏಕೆ ಬರಬೇಕಾಗಿತ್ತು?

ಈ ಕ್ರಮಗಳಿಂದ 6880 ಕೋಟಿ ರೂಪಾಯಿಗಳನ್ನು ಸಂಗ್ರಹಿಸುವ ಯೋಜನೆ ಹಾಕಿರುವ ಸರ್ಕಾರ

1) ಯೋಜನಾ ವೆಚ್ಚದಲ್ಲಿ ಶೇ 5 ರ ಕಡಿತ ಮಾಡಲಿದೆ. ಇದರಿಂದ 1800 ಕೋಟಿ ರೂಪಾಯಿಗಳನ್ನು ಉಳಿಸಲಿದೆ.

2) ಯೋಜನೇತರ ವೆಚ್ಚದಲ್ಲಿ ಶೇಕಡ 5 ರಷ್ಟು ಕಡಿತ ಮಾಡಿ 1400 ಕೋಟಿ ರೂಪಾಯಿಗಳನ್ನು ಉಳಿಸಲಿದೆ.

3) ಈಗ ಯೋಜಿಸಿರುವುದಕ್ಕಿಂತ ಹೆಚ್ಚು ಶೇರುಗಳ ಮಾರಾಟದಿಂದ(ಸಾರ್ವಜನಿಕ ವಲಯದ ಖಾಸಗೀಕರಣ) 2200 ಕೋಟಿ ರೂ ಗಳ ಆದಾಯ ಪಡೆಯಲಿದೆ.

4) ಹೆಚ್ಚಿನ ವಿಶೇಷ ಆಮದು ಸುಂಕಗಳ ಮೂಲಕ 1000 ಕೋಟಿ ರೂಪಾಯಿಗಳು ಬರಲಿವೆ.

5) ಈಗ ಸುಂಕ ರಹಿತವಾಗಿರುವ ಕೆಲವು ವಸ್ತುಗಳ ಮೇಲೆ ಸುಂಕ ಹೇರಿ 300 ಕೋಟಿ ರೂಪಾಯಿಗಳ ವಸೂಲಿಯಾದರೆ

6)ವಿದೇಶೀ ಪ್ರವಾಸದ ಮೇಲಿನ ಹೆಚ್ಚಿನ ತೆರಿಗೆಯಿಂದಾಗಿ 180 ಕೋಟಿ ರೂಪಾಯಿಗಳನ್ನು ಸರ್ಕಾರ ಸಂಗ್ರಹಿಸಲಿದೆ.

ಈ ಮೂಲಗಳನ್ನು ನೋಡಿದರೆ ಸಾರ್ವಜನಿಕ ವಲಯದ ಖಾಸಗೀಕರಣ ನಿರುದ್ಯೋಗ ಹೆಚ್ಚಿಸಿ ಸಾರ್ವಜನಿಕ ಆಸ್ತಿಯನ್ನು ಅಗ್ಗದ ಬೆಲೆಗೆ ಮಾರಿ ಜನತೆಗೆ ಹಾನಿಯುಂಟುಮಾಡಿದರೆ ವೆಚ್ಚ ಕಡಿತ ಜನಸಾಮಾನ್ಯರಿಗಾಗಿ ನೀಡುವ ಸಹಾಯ ಧನದಲ್ಲಿ ಕಡಿತ ಮಾಡಲಿದ್ದು ಅದರಿಂದ ಜನಸಾಮಾನ್ಯರ ಮೇಲಿನ ಹೊರೆ ಹೆಚ್ಚಲಿದೆ.

ಈಗೆ 1997-98 ರ ಬಜೆಟ್ಟಿನಲ್ಲಿ ಶ್ರೀಮಂತರಿಗೆ ನೀಡಿದ ಹಲವು ರಿಯಾಯ್ತಿಗಳಿಂದಾಗಿ ಈ ಹಣಕಾಸು ಕೊರತೆ ಹೆಚ್ಚಾಗಿದ್ದರೂ ಈಗ ಅವರ ಮೇಲೆ ಹೊರೆ ಹೇರುವ ಬದಲು ಜನ ಸಾಮಾನ್ಯರ ಮೇಲೆ ಸರ್ಕಾರ ಇದನ್ನು ಹೇರುತ್ತಿದೆ. ಹೇಗಿದೆ ಮಿನಿ ಬಜೆಟ್‌ನ ಹೊಡೆತ?

ಖಾಸಗೀಕರಣದ ಹರಕೆ

ಸಂಯುಕ್ತರಂಗ ಸರ್ಕಾರ ಖಾಸಗೀಕರಣದ ಹರಕೆ ಹೊತ್ತಿರುವಂತೆ ಕಾಣುತ್ತಿದೆ. ಸಮಾನ ಕನಿಷ್ಠ ಕಾರ್ಯಕ್ರಮದಲ್ಲಿ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ರಕ್ಷಿಸುವ ಮಾತನ್ನಾಡಿದ್ದ ಈ ಸರ್ಕಾರ ಈಗ ಮತ್ತೆ ಹಿಂದಿನ ಕಾಂಗ್ರೆಸ್ ಸರ್ಕಾರದಂತೆ ಹಣಕಾಸು ಕೊರತೆ ನೀಗಲು ಖಾಸಗೀಕರಣದ ಮೊರೆ ಹೋಗುತ್ತಿದೆ. ಅದೂ ಸಂಯುಕ್ತ ರಂಗದ ಚಾಲನಾ ಸಮಿತಿಯನ್ನು ಕೇಳದೆ.

ಕೇಂದ್ರ ಮಂತ್ರಿಮಂಡಲ ಹಲವು ಆರೋಗ್ಯಕರ ಸಾರ್ವಜನಿಕ ವಲಯದ ಘಟಕಗಳ ಖಾಸಗೀಕರಣಕ್ಕೆ ತನ್ನ ಒಪ್ಪಿಗೆ ನೀಡಿದೆ. ಈ ಖಾಸಗೀಕರಣಕ್ಕಾಗಿ ತಾಂತ್ರಿಕ, ಹಣಕಾಸು ಮತ್ತು ವ್ಯವಸ್ಥಾಪನ ಸಲಹಗಾರರನ್ನು ನೇಮಿಸುವ ನಿರ್ಧಾರವನ್ನು ಅದು ಕೈಗೊಂಡಿದೆ. ಖಾಸಗೀಕರಣದ ಈ ಹರಕೆ ಕುರಿಗಳಾಗಲಿರುವ ಘಟಕಗಳೆಂದರೆ ಭಾರತ ಅಲೂಮಿನಿಯಂ ಕಂಪನಿ(ಬಾಲ್ಕೊ) ಕುದುರೆ ಮುಖ ಕಬ್ಬಿಣ ಅದಿರು ಕಂಪನಿ ನಿಯಮಿತ, ಮಾಡರ್ನ್ ಫುಡ್ಸ್, ಐಟಿಡಿಸಿ ಮತ್ತು ಬೊಂಗೈಗಾವ್ ರಿಫೈನರಿ.

ಇದಲ್ಲದೆ ಐಟಿಐ, ಹಿಂದೂಸ್ತಾನ ಟೆಲಿಪ್ರಿಂಟರ್ ಲಿಮಿಟೆಡ್ ಗಳ ಖಾಸಗೀಕರಣದ ಬಗ್ಗೆಯೂ ವಿಚಾರ ಮಾಡುವ ನಿರ್ಧಾರವನ್ನು ಕೇಂದ್ರ ಮಂತ್ರಿ ಮಂಡಲ ತೆಗೆದುಕೊಂಡಿದೆ.

ಹೀಗೆ ಸಾರ್ವಜನಿಕ ವಲಯನ್ನು ಅಗ್ಗದ ಬೆಲೆಗೆ ಖಾಸಗಿಯವರಿಗೆ ಮಾರಿ ಅಲ್ಲಿನ ನೌಕರರು ಉದ್ಯೋಗ ಕಳೆದುಕೊಳ್ಳುವಂತೆ ಮಾಡಿ ದೇಶದ ಸ್ವಾವಲಂಬನೆಗೂ ಧಕ್ಕೆ ತರುವಂತಹ ಕ್ರಮ ಸರ್ಕಾರದ್ದು.

ಬಸ್ ದರಗಳ ಹೊರೆ

ಕೇಂದ್ರ ಸರ್ಕಾರ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಸಿದ ಹಿನ್ನೆಲೆಯಲ್ಲಿ ಕೆ.ಎಸ್.ಆರ್.ಟಿ.ಸಿ ಮತ್ತು ಬಿ.ಎಂ.ಟಿ.ಎಸ್ ಯ ಪ್ರಯಾಣ ದರಗಳನ್ನು ಹೆಚ್ಚಿಸಲಾಗಿದೆ. ದಿನಾಂಕ 21.9.97 ರಿಂದ ಜಾರಿಗೆ ಬಂದಿರುವ ಈ ದರಗಳು ಪ್ರಯಾಣಿಕರ ಮೇಲೆ ಶೇ 8 ರಷ್ಟು ಹೆಚ್ಚಿನ ಹೊರೆ ಹೇರಿದೆ.

ಬಸ್ ಪ್ರಯಾಣ ದರಗಳನ್ನು ಹಿಂದೆ ಹೆಚ್ಚಿಸಿ ಬಹಳ ದಿನಗಳೇನು ಆಗಿಲ್ಲ. ಮತ್ತೆ ಈ ಹೆಚ್ಚಳ.

ಕೇಂದ್ರ ಸರ್ಕಾರ ಜನ ಸಾಮಾನ್ಯರ ಮೇಲೆ ಹೇರಿದ ಹೊರೆಯ ಜೊತೆಗೆ ರಾಜ್ಯ ಸರ್ಕಾರವು ಹೇರುವುದು ಈಗ ಸಾಮಾನ್ಯವಾಗಿ ಹೋಗಿದೆ. ಬಸ್ಸುಗಳಲ್ಲಿ ಪ್ರಯಾಣ ಮಾಡುವ ಜನ ಸಾಮಾನ್ಯ ಹೆಚ್ಚೆಚ್ಚು ಹೊರೆ ಹೊರುತ್ತಲೇ ಹೋಗಬೇಕಾಗಿದೆ.

ಈಗಿನ ಈ ಲಕ್ಷಣಗಳನ್ನು ಕಂಡರೆ ಇನ್ನೂ ಈ ಬೆಲೆ ಏರಿಕೆಗಳು ಆಗಾಗ ಆಗುತ್ತಲೇ ಇರುವಂತೆ ಕಾಣುತ್ತದೆ.

ಪ್ರತಿಭಟನೆಯೊಂದೆ ಜನ ಸಾಮಾನ್ಯರಿಗೆ ಇರುವ ದಾರಿ. ಒಗ್ಗಟ್ಟಿನಿಂದ ಪ್ರತಿಭಟಿಸಿ ಸರ್ಕಾರವನ್ನು ಎಚ್ಚರಗೊಳಿಸುವ ದಾರಿಯನ್ನೇ ಆತ ಹಿಡಯಬೇಕು ಅಲ್ಲವೇ?

ರಾಜ್ಯ ಒಪ್ಪಿಸಿ ಕವಡೆ ಗೆಲ್ಲುವುದು

ಇದು ಭಾರತದ ಅರಿಶಿಣದ ಕತೆ. ಭಾರತದ ಅರಿಶಿಣದ ಔಷಧಿಯ ಗುಣಗಳಿಗೆ ಅಮೇರಿಕದ ಎರಡು ಕಂಪನಿಗಳು ಪೇಟೆಂಟ್ ಪಡೆದಿದ್ದವು. ಭಾರತ ಸರ್ಕಾರ ಗ್ಯಾಟ್‌ಗೆ ಸಹಿ ಮಾಡಿದ್ದರಿಂದ ಈ ಪೇಟೆಂಟ್‌ಗೆ ನ್ಯಾಯ ಬದ್ಧತೆ . ಈ ಪೇಟೆಂಟ್‌ನ್ನು ಅಮೇರಿಕದ ಕಂಪನಿಗಳು ಪಡೆದಿದ್ದರಿಂದ ಅರಿಶಿಣವನ್ನು ಔಷಧಿಯಾಗಿ ಬಳಸುವುದಿದ್ದರೆ ಈ ಕಂಪನಿಗಳ ಅನುಮತಿಯನ್ನು ಪಡೆಯಬೇಕಾಗುತ್ತಿತ್ತು.

ಈಗ ಕೇಂದ್ರ ವಿಜ್ಞಾನ ಮತ್ತು ಔದ್ಯಮಿಕ ಸಂಶೋಧನಾ ಸಂಸ್ಥೆ (ಸಿಎಸ್ಐಆರ್) ಭಾರತದಲ್ಲಿ ಅರಿಶಿಣವನ್ನು ಅನಾದಿಕಾಲದಿಂದ ಔಷಧಿಗಳಲ್ಲಿ ಬಳಸಿರುವುದರಿಂದ ಈ ಪೇಟೆಂಟ್ ಅಸಿಂಧು ಎಂದು ವಾದಿಸಿ ಗೆದ್ದಿದೆ. ಅಮೇರಿಕದ ಪೇಟೆಂಟ್ ಕಛೇರಿ ನೀಡಿದ ಪೇಟೆಂಟ್ ನ್ನು ಹಿಂತೆಗೆದುಕೊಳ್ಳುವಂತಾಗಿದೆ.

ಭಾರತೀಯರು ಅರಿಶಿಣ ಬಳಸಲು ಅಮೇರಿಕದ ಕಂಪನಿಗಳ ಅನುಮತಿ ಪಡೆಯುವ ಪ್ರಮೇಯ ತಪ್ಪಿದೆ.

ಇದು ಖಂಡಿತವಾಗಿಯೂ ಮಹತ್ವದ ವಿಷಯ. ಆದರೆ ಗ್ಯಾಟ್‌ಗೆ ಸಹಿ ಹಾಕಬೇಕಾದರೆ ದೇಶದ ಸಾಂಪ್ರದಾಯಿಕ ಸಂಪತ್ತುಗಳಿಗೆ ಪೇಟೆಂಟ್ ನೀಡುವ ಸಾಧ್ಯತೆಯನ್ನು ತೆಗೆದುಹಾಕುವಂತೆ ಮಾಡಿದ್ದರೆ ಇಂತಹ ಪರಿಸ್ಥಿತಿಯೇ ಬರುತ್ತಿರಲಿಲ್ಲ.

ಈಗ ಇಡೀ ರಾಜ್ಯವನ್ನೇ ಒಪ್ಪಿಸಿ ಕವಡೆ ಗೆದ್ದಂತಾಗಿದೆಯಲ್ಲವೇ? ಇನ್ನೂ ಎಂತೆಂತಹ ಸಮಸ್ಯೆಗಳು ಮುಂದೆ ಬರುತ್ತವೊ ಗೊತ್ತಿಲ್ಲ. ಉದಾಹರಣೆಗೆ ಈಗಾಗಲೇ ಬೇವಿನ ಮರದ ಕೆಲವು ಗುಣಗಳನ್ನು ಪೇಟೆಂಟ್ ಮಾಡಿರುವುದು ಹಾಗೆಯೇ ಇದೆ.

ವಾರದ ಆರ್ಥಿಕ ಟಿಪ್ಪಣಿಗಳು

ಜಿ.ಎಸ್.ಮಣಿ

ಹಬ್ಬದ ಸಕ್ಕರೆಗೆ ಕಹಿ ಸೇರಿಸಿದ್ದು

ಸರ್ಕಾರ ರೇಷನ್-ಸಕ್ಕರೆ ಬೆಲೆಯನ್ನು ಏರಿಸಿದೆ. ಹಬ್ಬದ ಈ ಹಂಗಾಮಿನಲ್ಲೇ ಬೆಲೆ ಏರಿಸಿ ಹಬ್ಬದ ಸಕ್ಕರೆಗೆ ಕಹಿ ಸೇರಿಸಿದೆ. ಸರ್ಕಾರ ಈ ಏರಿಕೆಗೆ ಸರ್ಕಾರ ನೀಡಿರುವ ಮತ್ತೆ ಅದೇ ಹಣಕಾಸು ಕೊರತೆ ನೀಗಿಸುವುದು. ಬೆಲೆ ಏರಿಸದೆ ಇದ್ದಲ್ಲಿ ಸಕ್ಕರೆಗೆ ಹೆಚ್ಚಿನ ಸಹಾಯ ಧನ ನೀಡಬೇಕಾಗುತ್ತಿತ್ತು. ಇದು ಮತ್ತೆ ಹಣಕಾಸು ಕೊರತೆ ಹೆಚ್ಚಿಸುತ್ತಿತ್ತು.

ಸಕ್ಕರೆ ಎಲ್ಲರೂ ಬಳಸುವ ಆಹಾರ ವಸ್ತು. ಆದ್ದರಿಂದಲೇ ಇದರ ಬೆಲೆ ಏರಿಕೆ ಎಲ್ಲರಿಗೂ ತಟ್ಟುವುದು. ಶ್ರೀಮಂತರಿಗೆ ಅವರ ಆದಾಯದ ತೀರಾ ಸಣ್ಣ ಪ್ರಮಾಣವನ್ನು ಈ ಸಕ್ಕರೆಗಾಗಿ(ಒಟ್ಟಾರೆ ಆಹಾರ ಪದಾರ್ಥಗಳಿಗಾಗಿ) ಬಳಸಬೇಕಾಗಿ ಬರುವುದರಿಂದ ಅದು ಅಂತಹ ಪರಿಣಾಮಕಾರಿಯಾಗುವುದಿಲ್ಲ. ಆದರೆ ಕಡಿಮೆ ಆದಾಯವಿರುವ ಜನ ಸಾಮಾನ್ಯರಿಗೆ ಆಹಾರದ ಬೆಲೆಗಳು ಏರಿದರೆ ಅದು ಅಪಾರ ದುಷ್ಪರಿಣಾಮ ಬೀರುತ್ತದೆ. ಅದ್ದರಿಂದಲೇ ಜನಪರವಾದ ಸರ್ಕಾರ ಆಹಾರ ಬೆಲೆಗಳನ್ನು ಏರಿಸಬಾರದು. ಆದರೆ ಕೇಂದ್ರದ ಸಂಯುಕ್ತರಂಗ ಸರ್ಕಾರ ಜನಪರವಾದದ್ದಲ್ಲ ಎಂಬುದು ಸ್ಪಷ್ಟ. ಹಿಂದಿನ ಕಾಂಗ್ರೆಸ್ ಸರ್ಕಾರದ ಆರ್ಥಿಕ ನೀತಿಗಳನ್ನೇ ಅನುಸರಿಸುತ್ತಾ ಬಂದಿರುವ ಈ ಸರ್ಕಾರ ಮತ್ತೆ ಈಗ ತನ್ನ ವರ್ಗ ಗುಣವನ್ನು ಹೊರಗೆಡವಿದೆ. ಅಲ್ಲವೆ?

ಜಾಗತೀಕರಣ ಬಡತನ ತಗ್ಗಿಸುತ್ತದೆಯೇ ಅಥವಾ ಹೆಚ್ಚಿಸುತ್ತದೆಯೆ? ಮೆಕ್ಸಿಕೋ ಮತು ಫಿಲಿಪ್ಪೈನ್ಸ್ ಉದಾಹರಣೆ ನೋಡಬೇಕೇ ಅಥವಾ ಚೀನಾ, ಕೊರಿಯಾ ಉದಾಹರಣೆ ನೋಡಬೇಕೆ? ಈ ಬಗ್ಗೆ ಒಂದು ವಿಶ್ಲೇಷಣೆ ನಡೆಸಿರುವ ಪ್ರಖ್ಯಾತ ಅರ್ಥಶಾಸ್ತ್ರಜ್ಞ ಡಾ॥ ಸಿ.ಟಿ.ಕುರಿಯನ್‌ರವರ ಲೇಖನದ ಸಂಗ್ರಹಾನುವಾದ

ಜಾಗತೀಕರಣ ಮತ್ತು ಬಡತನ

ಜಾಗತೀಕರಣ ಮತ್ತು ಅದರ ಮೇಲೋಗರಗಳಾದ ಉದಾರೀಕರಣ ಮಾರುಕಟ್ಟೆಕರಣಗಳು ಜಗತ್ತಿನ ಎಲ್ಲ ಸಮಸ್ಯೆಗಳಿಗೂ ಮದ್ದುಗಳಾಗಿಬಿಟ್ಟಿವೆ. ಅದರಲ್ಲೂ ಜಾಗತಿಕವಾಗಿ ಸಾಮೂಹಿಕ ಬಡತನವನ್ನು ಹೊಡೆದೊಡಿಸಲು ಇದು ಬ್ರಹ್ಮಾಸ್ತ್ರವಾಗಿದೆಯಂತೆ. ಭಾರತ 1991 ರಲ್ಲಿ ಜಾಗತೀಕರಣವನ್ನು ಜಾರಿಗೆ ತಂದ ಎರಡು ವರ್ಷಗಳ ನಂತರ ಇಲ್ಲಿಯ ಸರ್ಕಾರ ಹೇಳಿದ್ದು-"ಆರ್ಥಿಕ ಸುಧಾರಣೆಗಳ ಮೂಲಭೂತ ಉದ್ದೇಶವೆಂದರೆ ಜನತೆಯ ಬದುಕಿನ ಗುಣಮಟ್ಟವನ್ನು ತೀವ್ರವಾಗಿ ಮತ್ತು ಸತತವಾಗಿ ಸುಧಾರಿಸುವುದು. ಈ ಉದ್ದೇಶಕ್ಕೆ ತಿರುಳಾಗಿರುವುದು ಆದಾಯದಲ್ಲಿ ಹೆಚ್ಚಳ ಮತ್ತು ಉತ್ಪಾದಕ ಉದ್ಯೋಗ. ದೇಶದ ಕೋಟಿಗಟ್ಟಲೆ ಜನ ಬಡತನದಲ್ಲಿ ಮುಳುಗಿ ಹೋಗಿದ್ದಾರೆ. ಈ ಬಡತನಕ್ಕೆ ಶಾಶ್ವತ ಉತ್ತರವೆಂದರೆ ಉದ್ಯೋಗ ಮತ್ತು ಆದಾಯಗಳಲ್ಲಿ ನಿರಂತರ ಬೆಳವಣಿಗೆ"

ಜಾಗತೀಕರಣ ನಿಜವಾಗಿಯೂ ಬಡತನವನ್ನು ಹೋಗಲಾಡಿಸಿದೆಯೇ?, ಈ ವಿಷಯದಲ್ಲಿ ಯಾವುದೇ ತೀರ್ಮಾನ ನೀಡುವುದಕ್ಕೆ ಇದು ಬಹಳ ಚಿಕ್ಕ ಅವಧಿ ಎನ್ನಲಾಗುತ್ತಿದೆ.

ಭಾರತದಲ್ಲೂ ಜಾಗತೀಕರಣದ ಆರ್ಥಿಕ ನೀತಿಗಳನ್ನು ಜಾರಿಗೆ ತಂದು ಬಹಳ ಕಾಲವಾಗಿಲ್ಲವಾದ್ದರಿಂದ ಬೇರೆ ದೇಶಗಳ ಅನುಭವವೇನೆಂದು ನೋಡೋಣ. ಎರಡೂ ತರಹದ ಉದಾಹರಣೆಗಳು ಜಗತ್ತಿನಲ್ಲಿ ಇವೆ. ಸಕಾರಾತ್ಮಕ ಉದಾಹರಣೆಗಳಾಗಿ ಚೀನಾ ಮತ್ತು ದಕ್ಷಿಣ ಕೊರಿಯಾಗಳನ್ನು ಸಾಮಾನ್ಯವಾಗಿ ಉದಾಹರಿಸಲಾಗುತ್ತದೆ.

ದಕ್ಷಿಣ ಕೊರಿಯಾ 1970 ರಲ್ಲಿ ಜಾಗತೀಕರಣ ಪ್ರಾರಂಭಿಸಿದಾಗ ಅದರ ಶೇ 23 ರಷ್ಟು ಜನತೆ ದಿನಕ್ಕೆ ಒಂದು ಡಾಲರಿಗಿಂತ ಕಡಿಮೆ ಆದಾಯದ ಬಡವರಾಗಿದ್ದವರು. 1990 ರ ವೇಳೆಗೆ ಈ ಸಂಖ್ಯೆ ಶೇ 5 ಕ್ಕೆ ಇಳಿದಿತ್ತು.

ಚೀನಾದ ಉದಾಹರಣೆ ಇನ್ನೂ ಎದ್ದು ಕಾಣುವಂತಹದ್ದು. ಚೀನಾ1978 ರಲ್ಲಿ ತನ್ನ ಆರ್ಥಿಕವನ್ನು ತೆರೆದಾಗ ಅದರ ಶೇ 33 ರಷ್ಟು ಜನ ದಿನಕ್ಕೆ 1 ಡಾಲರಿಗೂ ಕಡಿಮೆ ಆದಾಯದವರಾಗಿದ್ದರು. 1994 ರ ವೇಳೆಗೆ ಈ ಸಂಖ್ಯೆ ಶೇ. 7ಕ್ಕೆ ಇಳಿಯಿತು.

ಇವೆರಡು ಉಜ್ವಲ ಉದಾಹರಣೆಗಳಾದರೆ ಜಗತಿನಾದ್ಯಂತ ಇಂತಹದೇ ಪರಿಣಾಮಗಳು ಕಂಡು ಬಂದಿವೆಯೆ ಎಂಬುದು ಪರೀಕ್ಷಿಸಿ ನೋಡಬೇಕಾದ ವಿಷಯ.

ಹೀಗೆ ಪರೀಕ್ಷಿಸಿ ನೋಡಿದರೆ ಜಗತ್ತಿನ ಇತರೆಡೆ ಜಾಗತೀಕರಣ ಬಡತನವನ್ನು ಹೆಚ್ಚಿಸಿರುವುದು ಕಂಡು ಬರುತ್ತದೆ. ಸೋವಿಯತ್ ವಿಘಟನೆಯ ಹಿಂದು ಮುಂದು ಪೂರ್ವ ಯೂರೋಪಿನ ದೇಶಗಳು ಮತ್ತು ಸೋವಿಯತ್ ದೇಶದ ವಿಘಟನೆಯಿಂದಾಗಿ ಹೊರಹೊಮ್ಮಿದ ದೇಶಗಳಲ್ಲಿ ಜಾಗತೀಕರಣ ಬಡತನವನ್ನು ಹುಟ್ಟಿಹಾಕಿದೆ. ಔದ್ಯಮಿಕವಾಗಿ ಬೆಳವಣಿಗೆಗೆ ಹೊಂದಿದ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲೂ 1980 ರ ನಂತರ 'ನವ ಬಡವರು' ಮೂಡಿ ಬರುತ್ತಿದ್ದಾರೆ. ಇದು ಈ ದೇಶಗಳಲ್ಲಿ ತಮಗೆ ಖಾಸಗೀಕರಣ ಮತ್ತು ಬೇರೆಯವರಿಗೆ ಜಾಗತೀಕರಣವನ್ನೂ ಶಿಫಾರಸ್ಸು ಮಾಡತೊಡಗಿದ ನಂತರ ಉಂಟಾದ ಬೆಳವಣಿಗೆ.

ದೊಡ್ಡ ಹಡಗು ಮತ್ತು ನಾಡದೋಣಿ

ವಿಶ್ವದ ಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮದ (ಯುಎನ್ ಡಿ ಪಿ) 1997 ರ ಮಾನವ ಅಭಿವೃದ್ಧಿ ವರದಿ ಈ ಜಾಗತೀಕರಣ ಮತ್ತು ಬಡತನಗಳ ನಡುವಿನ ನಿಕಟ ಸಂಬಂಧವನ್ನು ಸ್ಪಷ್ಟವಾಗಿ ಗುರುತಿಸಿದೆ. ಅದು ಅಲಂಕಾರಿಕ ಭಾಷೆಯಲ್ಲಿ ಹೀಗೆ ಹೇಳಿದೆ. "ಸಂಪತ್ತಿನ ಏರಲೆ ಎಲ್ಲ ದೋಣಿಗಳನ್ನೂ ಮೇಲಕ್ಕೆತ್ತುತ್ತದಂತೆ. ಆದರೆ ಇವುಗಳಲ್ಲಿ ಕೆಲವು ಮಾತ್ರ ಯಾನಕ್ಕೆ ಅನುಕೂಲವಾದಂತಹವು. ದೊಡ್ಡ ಹಡಗುಗಳು ಹೊಸ ಅವಕಾಶಗಳಿಗೆ ಸ್ಪಂದಿಸುತ್ತ ಮೇಲೇಳುತ್ತಿವೆ. ಆದರೆ ತೆಪ್ಪ ಮತ್ತು ನಾಡ ದೋಣಿಗಳು ನೀರಿನಲ್ಲಿ ಮುಳುಗುತ್ತಿವೆ" ಇದರರ್ಥ ವಿಷ್ಟೆ. ಜಾಗತೀಕರಣದಿಂದ ಶ್ರೀಮಂತರಿಗೆ ಹೆಚ್ಚು ಲಾಭವಾಗುತ್ತಿದೆ. ಬಡವರು ಇನ್ನೂ ಬಡವರಾಗುತ್ತಿದ್ದವರು ಮುಳುಗುತ್ತಿದ್ದಾರೆ.

ಈ ವರದಿಯ ಇನ್ನಿತರ ವಿವರಗಳಿಗಾಗಿ ಪಕ್ಕದ ಬಾಕ್ಸ್‌ನ್ನು ನೋಡಿ.

ಜಾಗತೀಕರಣ ಬಡತನ ತರುತ್ತದೆ ಎಂಬುದು ಈಗ ಸ್ಪಷ್ಟ. ಆದರೆ ಯಾಕೆ ಮತ್ತು ಹೇಗೆ ?

ಈ ಮಾನವ ಅಭಿವೃದ್ಧಿ ವರದಿ ಹೇಳುವುದು ಮುಕ್ತ ಜಾಗತಿಕ ಮಾರುಕಟ್ಟೆ ತತ್ವದ ಜಾರಿಯಲ್ಲಿ ಬೇಧಭಾವವಿದೆ. ಹಾಗಿಲ್ಲದೆ ಹೋಗಿದ್ದಲ್ಲಿ ಕುಶಲತೆ ಇಲ್ಲದ ಶ್ರಮಕ್ಕೂ (ಕಾರ್ಮಿಕರಿಗೂ) ದೇಶಗಳ ಸರಕು ಯಾ ಬಂಡವಾಳಕ್ಕೆ ಇರುವಷ್ಟೇ ಮುಕ್ತ ಮಾರುಕಟ್ಟೆ ಇರಬೇಕಿತ್ತು. ವಿದೇಶೀ ಹೂಡಿಕೆ ಮತ್ತು ಸೇವೆಗಳ ಬಗ್ಗೆ ಜಾಗತಿಕ ಚೌಕಾಶಿ ಬಹಳ ವೇಗದಲ್ಲಿ ಆಗುತ್ತಿದೆ. ಆದರೆ ಅಭಿವೃದ್ಧಿಶೀಲ ದೇಶಗಳ ಕೃಷಿ ಮತ್ತು ಜವಳಿಯಲ್ಲಿ ಮಧ್ಯ ಪ್ರವೇಶ ಅತಿಯಾಗಿಯೇ ಇದೆ. ಅಧಿಕಾರ (ತಾಕತ್ತು) ಇಲ್ಲದೆ ಇರುವುದರಿಂದ ಬಡದೇಶಗಳು ಮತ್ತು ಆ ದೇಶಗಳ ಜನತೆಯ ಆಸಕ್ತಿಗಳು ಹೊಡೆತ ಅನುಭವಿಸುತ್ತಿವೆ.

ಶ್ರೀಮಂತ ದೇಶಗಳ ತಾಕತ್ತೆಂದರೆ ಅವರ ಬಂಡವಾಳ ಶಕ್ತಿ. ಜಾಗತೀಕರಣವೆನ್ನುವುದು ನಿಜದಲ್ಲಿ ದೇಶ ದೇಶಗಳ ನಡುವಿನ ವ್ಯಾಪಾರ ಸಂಬಂಧಗಳ ನಿಕಟತೆಯಲ್ಲ. ಬದಲಿಗೆ ಶ್ರೀಮಂತರ ಬಂಡವಾಳದ ತೀವ್ರ ಚಲನೆಯಷ್ಟೇ, ಇದು ಬಹುರಾಷ್ಟ್ರೀಯ ಕಂಪನಿಗಳ ಮೂಲಕ ಆಗುತ್ತಿದೆ. ಈ ಬಹುರಾಷ್ಟ್ರೀಯ ಕಂಪನಿಗಳ ಒಂದೇ ಒಂದು ಉದ್ದೇಶ ಅವರ ಬಂಡವಾಳಕ್ಕೆ ಅತಿ ಹೆಚ್ಚು ಪ್ರತಿಫಲ (ಲಾಭ) ಪಡೆಯುವುದು ಬಡತನ ಹೋಗಲಾಡಿಸುವುದಾಗಲಿ, ದೇಶಗಳ ಒಟ್ಟುತ್ಪಾದನೆ ಹೆಚ್ಚಿಸುವುದಾಗಲಿ ಅವರ ಕಾಳಜಿಯೇ ಅಲ್ಲ.

ಈ ವರದಿ ಎರಡು ಉದಾಹರಣೆಗಳನ್ನು ನೀಡುತ್ತದೆ. ಒಂದನೇಯದು ಫಿಲಿಪ್ಪೀನ್ಸ್ ದೇಶ: ಅಕ್ಕಿ ಮತ್ತು ಮೆಕ್ಕೆ ಜೋಳ ಈ ಫಿಲಿಪೀನ್ಸ್‌ನ ಎರಡು ಅತಿ ಮುಖ್ಯ ಬೆಳೆಗಳು. ಅಮೆರಿಕಾದ ಸಹಾಯಧನ ಪಡೆದ ಸೋವಿ ಮೆಕ್ಕೆ ಜೋಳ ಫಿಲಿಪ್ಪೈನ್ಸ್‌ಗೆ ಬರದಂತೆ ಆ ದೇಶ ತೀವ್ರ ಆಮದು ಸುಂಕ ಹೇರಿತ್ತು. ಈಗ 1994ರ ಗ್ಯಾಟ್ ಒಪ್ಪಂದದ ಪ್ರಕಾರ ಈ ಸುಂಕವನ್ನು ತೀವ್ರವಾಗಿ ಇಳಿಸಬೇಕು. ಆಗ ಅಮೇರಿಕಾದ ಮೆಕ್ಕೆ ಜೋಳ ಫಿಲಿಪ್ಪೈನ್ಸ್‌ನೊಳಗೆ ಬರುತ್ತದೆ. ಅದೇ ಕಡಿಮೆ ಬೆಲೆಗೆ ದೊರೆಯುತ್ತದೆ. ಫಿಲಿಪ್ಪೈನ್ಸ್

ಪುಟ 6 ನೋಡಿ

ಮಾನವ ಅಭಿವೃದ್ಧಿ ವರದಿ ಹೀಗೆಂದಿದೆ

1. ಕಳೆದ ಒಂದು ದಶಕದಲ್ಲಿ ಜಾಗತಿಕ ವ್ಯಾಪಾರ ಮತ್ತು ಆಂತರಿಕ ಒಟ್ಟುತ್ಪಾದನೆಯ ಅನುಪಾತ ಹೆಚ್ಚುತ್ತಿದೆ. ಆದರೆ ಒಂದು ನೂರು ಕೋಟಿ ಜನಗಳು ವಾಸಿಸುವ 44 ಅಭಿವೃದ್ಧಿ ಶೀಲ ದೇಶಗಳಲ್ಲಿ ಈ ಅನುಪಾತ ಕುಸಿಯುತ್ತಿದೆ.

2. ಅತಿ ಕಡಿಮೆ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಜಗತ್ತಿನ ಒಟ್ಟು ಜನಸಂಖ್ಯೆಯ ಶೇ. 10 ರಷ್ಟು ಜನ ವಾಸಿಸುತ್ತಾರೆ. ಒಟ್ಟು ಜಾಗತಿಕ ವ್ಯಾಪಾರದಲ್ಲಿ ಈ ದೇಶಗಳ ಪಾಲು ಬರೀ ಶೇ.0.3 ಎರಡು ದಶಕಗಳ ಹಿಂದೆ ಇವುಗಳ ಪಾಲು ಈಗಿನ ಎರಡರಷ್ಟಿತ್ತು. (ಜಗತ್ತಿನ ಒಟ್ಟು ವ್ಯಾಪಾರದಲ್ಲಿನ ಪಾಲು.)

3. ವಿದೇಶೀ ನೇರ ಹೂಡಿಕೆ ಜಗತ್ತಿನ ಅರ್ಧಕ್ಕಿಂತಲೂ ಹೆಚ್ಚಿನ ದೇಶಗಳಿಗೆ ಹರಿಯುವುದೇ ಇಲ್ಲ. ಈ ವಿದೇಶೀ ನೇರ ಹೂಡಿಕೆಯ ಬಹು ಪಾಲು ಮೂರೇ ಮೂರು ಪ್ರದೇಶಗಳಾದ ಉತ್ತರ ಅಮೇರಿಕಾ,ಯುರೋಪ್ ಮತ್ತು ಜಪಾನಿಗೆ ಹರಿಯುತ್ತದೆ.

4. ಸರಕುಗಳ ನಿಜ ಬೆಲೆಗಳು 1990 ರಲ್ಲಿ 1980 ರ ದಶಕಕ್ಕಿಂತ ಶೇ.45ಕ್ಕಿಂತ ಕಡಿಮೆ ಇದ್ದವು. ಹಾಗೂ 1932 ರ ಹಿಂಜರಿತದ ಸಮಯಕ್ಕಿಂತ ಶೇ.10 ರಷ್ಟು ಕಡಿಮೆ ಇದ್ದವು.

5. ಕನಿಷ್ಠ ಅಭಿವೃದ್ಧಿ ಹೊಂದಿದ ದೇಶಗಳ ವ್ಯಾಪಾರ ಕಳೆದ 25 ವರ್ಷಗಳಲ್ಲಿ ಒಟ್ಟು ಶೇ.50 ರಷ್ಟು ಕುಸಿಯಿತು.

6. ಔದ್ಯಮಿಕ ದೇಶಗಳಲ್ಲಿನ ಕೃಷಿ ಸಹಾಯಧನ ಮತ್ತು ಜವಳಿ ರಫ್ತುಗಳಿಂದಾಗಿ ಅಭಿವೃದ್ಧಿಶೀಲ ದೇಶಗಳು ಲಕ್ಷಾಂತರ ಕೋಟಿಗಳಷ್ಟು ನಷ್ಟ ಅನುಭವಿಸುತ್ತಿವೆ.

7. ಜಗತ್ತಿನ ಶೇ. 20 ರಷ್ಟು ಅತಿ ಬಡಜನರ ಆದಾಯ 1960ರಲ್ಲಿ ಜಗತ್ತಿನ ಆದಾಯದ ಶೇ.2.3 ರಷ್ಟಿದ್ದದ್ದು 1990ರಲ್ಲಿ ಶೇ.1.4ರಷ್ಟಿದ್ದದ್ದು ಈಗ ಶೇ. 1.1 ಕ್ಕೆ ಇಳಿದಿದೆ.



ಬಿಜೆಪಿ ರಾಜ್ಯದಲ್ಲಿ ಹೇಯ ಅತ್ಯಾಚಾರಗಳು ದೌರ್ಜನ್ಯ ವಿರುದ್ಧ ಆಂದೋಲನಕ್ಕೆ ಸಿದ್ಧತೆ

ಭಾರತೀಯ ಜನತಾ ಪಕ್ಷದ ಆಡಳಿತ ವಿರುವ ರಾಜಸ್ಥಾನದಲ್ಲಿ ಮಹಿಳೆಯರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಗಳತ್ತ ದೇಶದ ಗಮನ ಸೆಳೆಯಲು ನಾನಾ ಮಹಿಳಾ ಸಂಘಟನೆಗಳು ಅಕ್ಟೋಬರ್ ಒಂದರಂದು ರಾಷ್ಟ್ರೀಯ 'ಪ್ರತಿಭಟನಾ ದಿನ'ವನ್ನು ಆಚರಿಸಲಿದೆ.

ಸೆಪ್ಟೆಂಬರ್ ತಿಂಗಳಲ್ಲಿ ಕೇವಲ 24 ಗಂಟೆಗಳ ಅವಧಿಯಲ್ಲಿ ರಾಜ್ಯದಲ್ಲಿ ಎರಡು ಹೇಯ ಅತ್ಯಾಚಾರಗಳು ನಡೆದಿದ್ದು, ಆರೋಪಿಗಳನ್ನು ರಕ್ಷಿಸಲು ಬಿಜೆಪಿ ಸರ್ಕಾರ ಕುತಂತ್ರಗಳನ್ನು ಅನುಸರಿಸುತ್ತಿರುವುದು ಜಗಜ್ಜಾಹೀರಾಗಿದೆ.

ರಾಜಸ್ಥಾನ ವಿಶ್ವವಿದ್ಯಾಲಯ ಕ್ಯಾಂಪಸ್‌ನ ಹುಡುಗರ ಹಾಸ್ಟೆಲ್‌ನಲ್ಲಿ ಹುಡುಗಿಯೊಬ್ಬಳ ಮೇಲೆ ನಡೆದ ಸಾಮೂಹಿಕ ಅತ್ಯಾಚಾರ(ವಿವರ 'ಐಕ್ಯರಂಗ' ಸೆಪ್ಟೆಂಬರ್ 18-24) ಮತ್ತು ರಾಜ್ಯದ ಜಲೋರನಲ್ಲಿ ಜೈನ ಮುನಿಯೊಬ್ಬ ತನ್ನ ಆಶ್ರಮದಲ್ಲಿ ಮಹಿಳೆಯೊಬ್ಬಳ ಮೇಲೆ ನಡೆಸಿದ ಅತ್ಯಾಚಾರ ಪ್ರಕರಣವನ್ನು ಮಹಿಳಾ ಸಂಘಟನೆಗಳು ಗಂಭೀರವಾಗಿ ಪರಿಗಣಿಸಿದ್ದು ಸ್ತ್ರೀಯರ ರಕ್ಷಣೆಗಾಗಿ ಜನಾಂದೋಲನವನ್ನೇ ನಡೆಸಲು ಮುಂದಾಗಿದೆ.

ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ(ಎಐಡಿಡಬ್ಲ್ಯುಯು) ಪ್ರಧಾನ ಕಾರ್ಯದರ್ಶಿ ಬೃಂದಾ ಕಾರಟ್ ಚಳುವಳಿಯ ನಿರ್ಧಾರವನ್ನು ಸೆಪ್ಟೆಂಬರ್ 24 ರಂದು ನವ ದೆಹಲಿಯಲ್ಲಿ ಸುದ್ದಿ ಗೋಷ್ಠಿಯೊಂದರಲ್ಲಿ ಪ್ರಕಟಿಸಿದರು.

ಎಲ್ಲಾ ರಾಜ್ಯ ಕೇಂದ್ರಗಳು ಪ್ರಮುಖ ಪಟ್ಟಣಗಳಲ್ಲಿ ಧರಣಿ, ಪ್ರತಿಭಟನಾ ಮೆರವಣಿಗೆಗಳು ಮತ್ತು ಸರಪಣಿ ಪತ್ರ ಬರಹದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದೆಂದು ಬೃಂದಾ ವಿವರಿಸಿದರು.

ಎರಡೂ ಪ್ರಕರಣಗಳಲ್ಲಿ ಕ್ರಮ ಕೈಗೊಳ್ಳುವಂತೆ ರಾಜ್ಯ ಸರ್ಕಾರದ ಮೇಲೆ ಒತ್ತಡ ಹೇರುವಂತೆ ಕೇಂದ್ರದ ಗೃಹ ಸಚಿವ ಇಂದ್ರಜೀತ್ ಗುಪ್ತಾರವರಿಗೆ ಮಹಿಳಾ ಸಂಘ ಸಂಸ್ಥೆಗಳು ಮನವಿ ಮಾಡಲಿವೆ. ಈ ವಿಚಾರವಾಗಿ ಅವುಗಳ ಕಾರ್ಯಕರ್ತರು ಗೃಹ ಮಂತ್ರಿಗಳನ್ನು ಭೇಟಿ ಮಾಡಲಿದ್ದಾರೆ.

ಸತ್ಯಶೋಧಕ ಸಮಿತಿ ವರದಿ

ಜಲೋರ್‌ನ ಭಿನ್ಮಲ್‌ಗೆ ಭೇಟಿ ಕೊಟ್ಟ ಎಐಡಿಡಬ್ಲ್ಯೂಎ ಸತ್ಯಶೋಧಕ ಸಮಿತಿಯ ವರದಿಯನ್ನು ಸುದ್ದಿ ಗೋಷ್ಠಿಯಲ್ಲಿ ಬಿಡುಗಡೆ ಮಾಡಲಾಯಿತು.

ಸೆಪ್ಟೆಂಬರ್ 4 ರಂದು ಜೈನ ಮುನಿ ತನ್ನ ಆಶ್ರಮದಲ್ಲಿ ಮಹಿಳೆಯೊಬ್ಬರ ಮೇಲೆ ಅತ್ಯಾಚಾರ ನಡೆಸಿದ್ದು ಸಾಬೀತಾಗಿದೆ ಎಂದು ವರದಿ ತಿಳಿಸಿದೆ. ಈ ಪ್ರಕರಣಕ್ಕೆ ಕೋಮು ಬಣ್ಣಕೊಡಲು ಹಾಗೂ ಅದನ್ನು ಮುಚ್ಚಿ ಹಾಕಲು ಶೆಖಾವತ್ ಸಿಂಗ್ ನೇತೃತ್ವದ ಬಿಜೆಪಿ ಸರ್ಕಾರ ಯತ್ನಿಸುತ್ತಿದೆ ಎಂದು ವರದಿ ಆಪಾದಿಸಿದೆ.

ಅತ್ಯಾಚಾರದ ಆರೋಪಿ ಮುನಿಯನ್ನು ವಿಚಾರಣೆಗಾಗಿ ವಶಕ್ಕೆ ತೆಗೆದುಕೊಂಡ ಜಿಲ್ಲಾ ಪೊಲೀಸ್ ಮುಖ್ಯಸ್ಥ (ಎಸ್.ಪಿ)ರನ್ನು ಜೈನ ಸಮುದಾಯದ ಒತ್ತಡಕ್ಕೆ ಮಣಿದು ಸರ್ಕಾರ ಅಮಾನತ್ತು ಮಾಡಿದೆ ಎಂದಿರುವ ಸತ್ಯಶೋಧಕ ತಂಡ ಎಸ್.ಪಿ.ಯನ್ನು ತಕ್ಷಣವೇ ಸೇವೆಗೆ ತೆಗೆದುಕೊಳ್ಳುವಂತೆ ಆಗ್ರಹಿಸಿದೆ.

ರಾಜ್ಯದ ಗೃಹ ಸಚಿವರು ರಾಜೀನಾಮೆ ಕೊಡಬೇಕು ಹಾಗೂ ಆರೋಪಿ ಜೈನ ಮುನಿಯ ಸಾವಿನ ಬಗ್ಗೆ ಕ್ರಮಬದ್ಧ ತನಿಖೆಯನ್ನು ನಡೆಸಬೇಕು ಎಂದೂ ತಂಡ ಒತ್ತಾಯಿಸಿದೆ.

ಸೆಪ್ಟೆಂಬರ್ 5 ರಂದು ಜೆ.ಸಿ. ಬೋಸ್ ಹಾಸ್ಟೆಲ್‌ನಲ್ಲಿ ಹುಡುಗಿ ಮೇಲೆ ನಡೆದ ಸಾಮೂಹಿಕ ಅತ್ಯಾಚಾರದ ಹೇಯ ಪ್ರಕರಣದ ಆರೋಪಿಗಳು ಯಾರೆಂಬುದನ್ನು ಅತ್ಯಾಚಾರಕ್ಕೊಳಗಾದ ಯುವತಿಯೇ ಹೇಳಿದ್ದಾರೆ. ಆದರೂ ದುಷ್ಕರ್ಮಿಗಳನ್ನು ಬಂಧಿಸಲು ಸರ್ಕಾರ ಕ್ರಮ ಕೈಗೊಂಡಿಲ್ಲ ಇದಕ್ಕೆ ಬದಲು, ಹೇಯ ಅತ್ಯಾಚಾರಕ್ಕೆ ಬಲಿಯಾದ ಹುಡುಗಿಯ ನಡತೆಗೆ ಕಳಂಕ ಹಚ್ಚಲು ವಿಧಾನ ಸಭೆಯಲ್ಲೇ ಪ್ರಯತ್ನಿಸಿದ್ದಾರೆಂದು ಬೃಂದಾ ಕಾರಟ್ ನೇತೃತ್ವದ ಸತ್ಯಶೋಧಕ ತಂಡ ಹೇಳಿದೆ. ಸುಮಿತ್ರಾ ಚೋಪ್ರಾ ಮತ್ತು ಕವಿತಾ ಶ್ರೀವಾತ್ಸವ ಅವರೂ ತಂಡದಲ್ಲಿದ್ದರು.

ಮಹಿಳೆಯೊಬ್ಬರ ಚಾರಿತ್ರ್ಯಕ್ಕೆ ಕಳಂಕ ಹಚ್ಚಲು ಸದನವನ್ನು ದುರ್ಬಳಕೆ ಮಾಡಲು ನಮ್ಮ ಚುನಾಯಿತ ಪ್ರತಿನಿಧಿಗಳಿಗೆ ಸಂಸದೀಯ ಹಕ್ಕು ಇದೆಯೇ ಎಂಬುದನ್ನು ನಾವು ತಿಳಿಯಬಯಸುತ್ತೇವೆ ಎಂದು ಬೃಂದಾ ಹೇಳಿದರು.

ಸತತ ಧರಣಿ

ಕಾಲೇಜು ಹುಡುಗಿಯ ಮೇಲಿನ ಸಾಮೂಹಿಕ ಅತ್ಯಾಚಾರದ ಆರೋಪಿಗಳನ್ನು ತಕ್ಷಣ ಬಂಧಿಸಬೇಕು ಹಾಗೂ ಭಿನ್ಮಲ್ ಪ್ರಕರಣದ ಸಂಬಂಧದಲ್ಲಿ ಸೂಕ್ತ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ರಾಜಸ್ಥಾನ ವಿಧಾನ ಸಭೆ ಸಮೀಪ ಹವಾಮಹಲ್ ಬಳಿ ಹಲವು ಸಂಘಟನೆಗಳ ಕಾರ್ಯಕರ್ತೆಯರು ಸೆಪ್ಟೆಂಬರ್ 14 ರಿಂದ ಅನಿರ್ದಿಷ್ಟಾವಧಿಯ ಧರಣಿ ನಡೆಸುತ್ತಿದ್ದಾರೆ. ಈ ವರದಿಯನ್ನು ಬರೆಯುವ ಹೊತ್ತಿಗೆ ಧರಣಿ 11 ದಿನಗಳನ್ನು ಪೂರ್ಣಗೊಳಿಸಿತ್ತು.

ಸುಸಂಘಟಿತ ಬ್ಲಾಕ್ ಮೇಲ್ ರ್‍ಯಾಕೆಟ್‌ಗಳ ಮೂಲಕ ಮಹಿಳೆಯರ ಲೈಂಗಿಕ ಶೋಷಣೆ ಮತ್ತು ಅನಂತರ ಆರೋಪಿಗಳನ್ನು ಪಾರು ಮಾಡಲು ಜಾತಿಗಳು ಲಾಭಿ ನಡೆಸುವುದು-ಇವು ಮಹಿಳೆಯರ ಮೇಲಿನ ಇತ್ತೀಚಿನ ದೌರ್ಜನ್ಯ ಪ್ರಕರಣಗಳಲ್ಲಿ ಕಂಡು ಬರುತ್ತಿರುವ ಪ್ರವೃತ್ತಿಗಳಾಗಿವೆ.

ಪಂಜಾಬಿನಲ್ಲಿ ಕೃಷಿ ಕಾರ್ಮಿಕರ ಆಂದೋಲನ

ಪಂಜಾಬ್ ರಾಜ್ಯಾದ್ಯಂತ ಜಿಲ್ಲಾ ಕೇಂದ್ರಗಳಲ್ಲಿ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ(ಎಐಎಡಬ್ಲ್ಯೂಯು)ಹಮ್ಮಿಕೊಂಡಿದ್ದ ಧರಣಿ, ರ್‍ಯಾಲಿ, ಮತಪ್ರದರ್ಶನ ಮೊದಲಾದ ಚಳುವಳಿಗಳು ಯಶಸ್ವಿಯಾಗಿ ನಡೆದವು. ಸೆಪ್ಟೆಂಬರ್ ಆರಂಭದಲ್ಲಿ ಭಾರೀ ಮಳೆ ಮತ್ತು ಪ್ರತಿಕೂಲ ಹವಮಾನದಿಂದಾಗಿ ಒಂದೆರಡು ಕಡೆಗಳಲ್ಲಿ ಚಳುವಳಿ ನಡೆಸಲು ಆಗಿರಲಿಲ್ಲ. ಆದರೆ ಸೆಪ್ಟೆಂಬರ್ 8 ರ ನಂತರ ಚಳುವಳಿಗೆ ಕಾವೇರಿತು.

ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಕೃಷಿ ಕೂಲಿಕಾರರು ನಿರೀಕ್ಷಿಸಿದ್ದಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ಮಹಿಳೆಯರೂ ಗಣನೀಯ ಸಂಖ್ಯೆಯಲ್ಲಿ ಚಳುವಳಿಯಲ್ಲಿ ಭಾಗವಹಿಸಿದ್ದರು.

ಸಂಗ್ರೂರು, ಅಮೃತಸರ, ಪಾಟಿಯಾಲ, ಗುರುದಾಸಪುರ, ನವನ್ ಷೆಹರ್,, ಫಿರೋಜ್ ಪುರ್ ಮತ್ತು ಇನ್ನು ಹಲವು ಸ್ಥಳಗಳಲ್ಲಿ ಸೆಪ್ಟೆಂಬರ್ 8 ರ ನಂತರ ಕಾರ್ಯಕ್ರಮಗಳು ನಡೆದವು. ಲಭ್ಯ ವರದಿಗಳ ಪ್ರಕಾರ ಗ್ರಾಮೀಣ ಬಡವರು ಅದರಲ್ಲೂ ವಿಶೇಷವಾಗಿ ಕೃಷಿಕಾರ್ಮಿಕರು ಮತ್ತು ಬಡ ರೈತರು ಭಾರಿ ಸಂಖ್ಯೆಯಲ್ಲಿ ಧರಣಿ ಹಾಗೂ ರ್‍ಯಾಲಿಗಳಲ್ಲಿ ಪಾಲ್ಗೊಂಡಿದ್ದರು.

ಎಐಎಡಬ್ಲ್ಯೂಯು ನ ರಾಜ್ಯ ಮುಖಂಡರು ಹಾಗೂ ಜಿಲ್ಲೆ ಮತ್ತು ಸ್ಥಳೀಯ ನಾಯಕರು ಧರಣಿ ಮತ್ತು ರ್‍ಯಾಲಿಗಳನ್ನುದ್ದೇಶಿಸಿ ಮಾತಾನಾಡಿದರು. ಇತರ ಸಾಮೂಹಿಕ ಸಂಘಟನೆಗಳ ನಾಯಕರು ಹಾಗೂ ಪ್ರಮುಖ ಕಾರ್ಯಕರ್ತರು ಪಾಲ್ಗೊಂಡು ಸೌಹಾರ್ದತೆ ವ್ಯಕ್ತಪಡಿಸಿದರು.

ಸಿಐಟಿಯು, ಡಿವೈಎಫ್‌ಐ, ಲಾಲ್ ಝಂಡಾ ಮಜ್ದೂರ್ ಯೂನಿಯನ್, ಕಿಸಾನ್ ಸಭಾ, ಎಸ್‌ಎಫ್‌ಐ, ದುಡಿಯುವ ಮಹಿಳೆಯರ ಸಂಘಟನೆ ಮತ್ತು ಜಾನ್ವರಿ ಮಹಿಳಾ ಸಂಘಟನೆ ಅವುಗಳಲ್ಲಿ ಪ್ರಮುಖವಾದವು. ಕೃಷಿ ಕಾರ್ಮಿಕರಿಗಾಗಿ ಸಮಗ್ರ ಕಾನೂನನ್ನು ರೂಪಿಸಬೇಕು ಹಾಗೂ ಕೃಷಿ ಕೂಲಿಗಾರರು ಮತ್ತು ಗ್ರಾಮೀಣ ಬಡವರ ಮೇಲಿನ ದೌರ್ಜನ್ಯಗಳನ್ನು ತಡೆಯಲು ಈ ಕಾನೂನನ್ನು ಅನುಷ್ಠಾನಗೊಳಿಸುವಂತೆ ಭಾಷಣಕಾರರು ಒತ್ತುಕೊಟ್ಟು ಆಗ್ರಹಪಡಿಸಿದರು.

ಮಹಾತ್ಮಗಾಂಧಿ ವಿ.ವಿ. ಸಂಘದಲ್ಲಿ ಎಸ್‌ಎಫ್‌ಐಗೆ ಗೆಲುವು

ಕೇರಳದ ಮಹಾತ್ಮಗಾಂಧಿ ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘಕ್ಕೆ ನಡೆದ ಚುನಾವಣೆಗಳಲ್ಲಿ ಎಸ್‌ಎಫ್‌ಐ ಪ್ರಚಂಡ ಜಯಗಳಿಸಿದೆ.

ವಿ.ವಿ. ವ್ಯಾಪ್ತಿಗೆ ಬರುವ ಮೂವತ್ತೆರಡು ಕಾಲೇಜುಗಳ ಸಂಘಗಳಿಗೆ ಸೆಪ್ಟೆಂಬರ್ 12 ರಂದು ಚುನಾವಣೆ ನಡೆದಿದ್ದು 22 ಕಾಲೇಜುಗಳಲ್ಲಿ ಎಸ್‌ಎಫ್‌ಐ ಜಯಶಾಲಿಯಾಗಿದೆ. ವಿಶ್ವವಿದ್ಯಾಲಯ ಸಂಘದ ಒಟ್ಟು 58 ಕೌನ್ಸಿಲರ್‌ಗಳ ಪೈಕಿ ಎಸ್‌ಎಫ್‌ಐ ಕೌನ್ಸಿಲರ್‌ಗಳ ಸಂಖ್ಯೆ 36.

ಕೊಳಂಚೇರಿಯ ಸ್ಟೆಂಟ್ ಪೀಟರ್ಸ್ ಕಾಲೇಜು, ಎರ್ನಾಕುಲಂನ ಭಾರತ ಮಾತಾ ಕಾಲೇಜು ಮತ್ತು ಮೂವತ್ತು ಪುಳದ ನಿರ್ಮಲ ಕಾಲೇಜ್ ವಿದ್ಯಾರ್ಥಿ ಸಂಘಗಳು ಮತ್ತೆ ಎಸ್‌ಎಫ್‌ಐ ತೆಕ್ಕೆಗೆ ಬಿದ್ದಿವೆ ಅಲ್ಲಿ, ಕೆ.ಎಸ್.ಯು ಅನ್ನು ಸೋಲಿಸಲಾಯ್ತು. ಇಡುಕ್ಕಿ ಜಿಲ್ಲೆಯಲ್ಲಿ ಏಳು ಕಾಲೇಜುಗಳಿದ್ದು 5 ರಲ್ಲಿ ಎಸ್‌ಎಫ್‌ಐ ನೇತೃತ್ವದ ವಿದ್ಯಾರ್ಥಿ ಸಂಘಗಳು ಅಸ್ತಿತ್ವಕ್ಕೆ ಬಂದಿವೆ.

ಅಕಾಲಿ-ಬಿಜೆಪಿ ಕೂಟಕ್ಕೆ ತರಾಟೆ

ಧರಣಿ ಮತ್ತು ರ್‍ಯಾಲಿಗಳು ಅಕಾಲಿದಳ-ಬಿಜೆಪಿ ಮೈತ್ರಿಕೂಟದ ಸರಕಾರವನ್ನು ತರಾಟೆಗೆ ತೆಗೆದುಕೊಂಡವು. ಸರಕಾರದ ಶ್ರೀಮಂತಪರ ಹಾಗೂ ಭೂಮಾಲಿಕಪರ ನೀತಿಗಳನ್ನು ಬಲವಾಗಿ ಖಂಡಿಸಲಾಯಿತು.

ಈ ಕೂಟ ಚುನಾವಣೆ ವೇಳೆ ಕೊಟ್ಟಿದ್ದ ಆಶ್ವಾಸನೆಗಳು ಮರುಳುಗೊಳಿಸುವ ಭರವಸೆಗಳು ಸಾಬೀತಾಗಿರುವುದನ್ನು ಭಾಷಣಕಾರರು ಎತ್ತಿತೋರಿಸಿದರು. ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಪರಿಸ್ಥಿತಿ ಹದಗೆಡುತ್ತಿರುವುದಕ್ಕೂ ಅವರು ಕಳವಳ ವ್ಯಕ್ತಪಡಿಸಿದರು. ವಿಶೇಷವಾಗಿ ಕೃಷಿ ಕಾರ್ಮಿಕರು, ಮಹಿಳೆಯರು, ಹುಡುಗಿಯರು ಮತ್ತು ದುಡಿಯುವ ಮಹಿಳೆಯರ ಮೇಲೆ ದೌರ್ಜನ್ಯ ಹೆಚ್ಚುತ್ತಿರುವುದಕ್ಕೆ ಕಳವಳ ವ್ಯಕ್ತಪಡಿಸಿದರು.

ವಿದ್ಯಾರ್ಥಿನಿ ಕಿರಣಜಿತ್ ಕೌರ್ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿ ಕೊಲ್ಲಲಾದ ಘಟನೆಗೆ ಇಡೀ ರಾಜ್ಯದಲ್ಲಿ ಆಕ್ರೋಶ ವ್ಯಕ್ತವಾಗಿದೆ. ಲೂಧಿಯಾನ ಜಿಲ್ಲೆಯ ಮೆಹಲ್ ಝೂಲ್‌ನಲ್ಲಿ ಭೂಮಾಲಿಕರ ವೃತ್ತಿಪರ ಗೂಂಡಾಗಳು ಈ ಕೃತ್ಯವೆಸಗಿದ್ದರು.

ಪಂಜಾಬ್ ಜವಳಿ ಗಿರಣಿ ನೌಕರರ ಯಶಸ್ವಿ ಮುಷ್ಕರ

ಪಂಜಾಬಿನಲ್ಲಿರುವ ಸಾರ್ವಜನಿಕ ಕ್ಷೇತ್ರದ ನಾಲ್ಕು ಜವಳಿ ಗಿರಣಿಗಳಲ್ಲಿ ಸೆಪ್ಟೆಂಬರ್ 15 ಮತ್ತು 16 ರಂದು ಮುಷ್ಕರ ಯಶಸ್ವಿಯಾಗಿ ನಡೆಯಿತು.

ಸಿಐಟಿಯು, ಎಐಟಿಯುಸಿ ಮತ್ತು ಇಂಟಕ್‌ಗಳ ಸಮನ್ವಯ ಸಮಿತಿ ಈ ಎರಡು ದಿನಗಳ ಮುಷ್ಕರಕ್ಕೆ ಕರೆ ಕೊಟ್ಟಿತ್ತು.

ಎರಡೂ ದಿನ ಈ ನಾಲ್ಕು ಗಿರಣಿಗಳ ಮುಂದೆ ನಡೆದ ಬೃಹತ್ ರ್‍ಯಾಲಿಗಳಲ್ಲಿ ಈ ಕಾರ್ಮಿಕರು ತಮ್ಮ ನ್ಯಾಯ ಸಮ್ಮತ ಬೇಡಿಕೆಗಳನ್ನು ಬೆಂಬಲಿಸಿ ಘೋಷಣೆಗಳನ್ನು ಕೂಗಿದರು.

60 ರೂಪಾಯಿಯನ್ನು ಕಾರ್ಮಿಕರಿಗೆ ಮರು ಪಾವತಿ (ರೀ ಎಂಬರ್ಸ್‌ಮೆಂಟ್) ಮಾಡಬೇಕು ಎಂಬುದು ಪ್ರಮುಖ ಬೇಡಿಕೆಗಳಲ್ಲಿ ಸೇರಿದೆ.

ಜಾಗತೀಕರಣ ಮತ್ತು ಭಾರತ

ಪುಟ 5 ರಿಂದ

ನ ರೈತರ ಪರಿಸ್ಥಿತಿ ಏನಾಗುತ್ತದೆ? ನೀವೇ ಊಹಿಸಿ.

ಮೆಕ್ಸಿಕೊ

ಎರಡನೆಯ ಉದಾಹರಣೆ ಮೆಕ್ಸಿಕೊ ದೇಶದ್ದು. ಇದು 1980 ರ ದಶಕದ ಜಾಗತೀಕರಣದ ಹರಿಕಾರ. ಮೆಕ್ಸಿಕೊ ವ್ಯಾಪಾರ ತಡೆಗಳನ್ನು ತೀವ್ರವಾಗಿ ಕಳಚಿಹಾಕಿತು - ಅದರಲ್ಲೂ ಮುಖ್ಯವಾಗಿ ಕೃಷಿ ಸರಕುಗಳ ಮೇಲೆ. ಸಾರ್ವಜನಿಕ ಆಸ್ತಿಗಳನ್ನು ಖಾಸಗೀಕರಿಸಿತು. ಮತ್ತು ಹಣಕಾಸು ಮಾರುಕಟ್ಟೆ ಅನಿಯಂತ್ರಿತಗೊಳಿಸಿತು. ಇದರಿಂದ ಏನಾಯಿತು?

ಜಗತ್ತಿನ ಅತಿ ಶ್ರೀಮಂತ ಶೇ. 20 ರಷ್ಟು ಜನರ ಆದಾಯ ಮತ್ತು ಅತಿ ಬಡ ಶೇ.20ರಷ್ಟು ಜನರ ಆದಾಯ ಅನುಪಾತ 1960ರಲ್ಲಿ 30:1 ಇದ್ದದ್ದು 1994 ರಲ್ಲಿ 78:1 ಕ್ಕೆ ಏರಿತ್ತು.

ಭಾರತದಲ್ಲಿ ಬಡತನ

ವರ್ಷ	ಬಡತನ ರೇಖೆಗಿಂತ ಕೆಳಗಿರುವ ಶೇ. ಜನತೆ
1989-90	34.0
1990-91	35.5
1991	41.0
1992	41.2
1993-94	36.5

ಮಾನವ ಅಭಿವೃದ್ಧಿ ವರದಿಯೇ ಹೇಳಿದಂತೆ ಉದಾರೀಕರಣ ಮತ್ತು ಅನಿಯಂತ್ರೀಕರಣ ವ್ಯತಿರಿಕ್ತ ಅವಕಾಶ ಮತ್ತು ಬೆದರಿಕೆಗಳನ್ನು ಹುಟ್ಟಿಹಾಕಿತು. ಬಂಡವಾಳದ ಮಾಲೀಕರಿಗೆ ಖಾಸಗೀಕರಣ ಮತ್ತು 1992ರ ಸುಧಾರಣೆ (ಸಣ್ಣ ಹಿಡುವಳಿಗಳನ್ನು ಖರೀದಿಸಲು ಅವಕಾಶ ನೀಡುವ ಸುಧಾರಣೆ) ಹೆಚ್ಚಿನ ಸಂಪತ್ತಿನ ಶೇಖರಣೆಗೆ ಅವಕಾಶ ನೀಡಿತ್ತು. ಶತ ಕೋಟ್ಯಾಧಿಪತಿಗಳ ಸಂಖ್ಯೆ 10 ರಿಂದ 15 ಕ್ಕೇರಿತು. ಅಮೇರಿಕಾದ ಉದ್ದಿಮೆಗಳಿಗೆ ಅನುಕೂಲವಾಗುವ ಉದ್ದಿಮೆಗಳು ಲಾಭ ಹೊಂದಿದವು. ಆದರೆ ಅದೇ ಸಮಯದಲ್ಲಿ ಅತೀ ಬಡತನದಲ್ಲಿ ಬದುಕುವ ಜನರ ಪ್ರಮಾಣ 1984 ರಲ್ಲಿ ಶೇ. 19 ರಷ್ಟಿದ್ದದ್ದು 1989 ರಲ್ಲಿ ಶೇ. 29 ಕ್ಕೆ ಏರಿತ್ತು. ಹಾಗೇಯೇ ಗ್ರಾಮೀಣ ಅತಿ ಬಡವರ ಸಂಖ್ಯೆ (ಶೇ. 80 ರಷ್ಟು ಅತಿ ಬಡವರು ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವುದು) 67 ಲಕ್ಷದಿಂದ 88 ಲಕ್ಷಕ್ಕೆ ಏರಿತು.

ಚೀನಾ ದ.ಕೊರಿಯಾ

ಚೀನಾ ಮತ್ತು ಕೊರಿಯಾಗಳೇಕೆ ಇದರಿಂದ ಲಾಭ ಹೊಂದಿದವು ಎಂಬ ಪ್ರಶ್ನೆ ಕಾಡುತ್ತದೆ. ಇದನ್ನು ಹೇಗೆ ವಿವರಿಸುವುದು?

ಈ ಎರಡೂ ದೇಶಗಳಲ್ಲಿ ಜಾಗತೀಕರಣ ಬರುವ ಮೊದಲೇ ಆಮೂಲಾಗ್ರವಾದ ಭೂ ಸುಧಾರಣೆಗಳು ಆಗಿದ್ದವು. ಈ ಎರಡೂ ದೇಶಗಳ ಭೂ ಸುಧಾರಣೆಗಳು ಒಂದೇ ರೀತಿಯವಾಗಿರಲಿಲ್ಲ. ಆದರೆ ಎರಡೂ ದೇಶಗಳಲ್ಲಿ ಭೂ ಸುಧಾರಣೆಗಳಿಂದಾಗಿ ಗ್ರಾಮೀಣ ಜನ ಸಮೂಹಕ್ಕೆ ಉತ್ಪಾದನೆಗೆ ಭೂಮಿ ದೊರೆಯಿತು. ಇದರಿಂದ ಬಡತನ ನಿರ್ಮೂಲನವಾಯಿತು.

ದ.ಕೊರಿಯ ಮತ್ತು ಚೀನಾ ಎರಡೂ ಜನ ಸಮೂಹಗಳಿಗೆ ಶಿಕ್ಷಣವನ್ನು ನೀಡಿದವು. ಸಾಕ್ಷರತೆ ಹೆಚ್ಚಿದ್ದರಿಂದ ಆರ್ಥಿಕ ಬೆಳವಣಿಗೆ ಸಾಧ್ಯವಾಯಿತು.

ಇನ್ನೊಂದು ಮುಖ್ಯ ಅಂಶವೆಂದರೆ ಈ ಎರಡೂ ದೇಶಗಳು 'ಜಾಗತೀಕರಣದ ಹೊರತು ಬೇರೆ ದಾರಿಯಿಲ್ಲ" ಎಂಬ ತೀರ್ಮಾನದಿಂದ ಜಾಗತೀಕರಣ ಮಾಡಲಿಲ್ಲ. ಜಾಗತೀಕರಣದ ಬಗ್ಗೆ ಬಹುವಾಗಿ ವಿಚಾರ ಮಾಡಿ ಅದರಿಂದ ಯಾವ ರೀತಿಯ ಲಾಭಗಳು ಬರುತ್ತವೆ ಎಂದು ವಿಶ್ಲೇಷಿಸಿ ತಮ್ಮ ಪೂರ್ಣ ಹತೋಟಿಯಲ್ಲಿಯೇ ಜಾಗತೀಕರಣ ಮಾಡಿದವು.

ದ.ಕೊರಿಯ "ಎಲ್ಲವನ್ನೂ ಮಾರುಕಟ್ಟೆಗೆ ಬಿಡಿ" ಎಂಬ ತತ್ವಕ್ಕೆ ಉದಾಹರಣೆ ಎಂಬ ನಂಬಿಕೆಯಿದೆ. ಇದು ಸುಳ್ಳು. ಅಮೆರಿಕಕ್ಕೆ ಜಪಾನಿನ ವ್ಯಾಪಾರದ ಅವಶ್ಯಕತೆಯಿತ್ತು. ದ.ಕೊರಿಯಾ ತನ್ನ ಮಾರುಕಟ್ಟೆಯನ್ನು ಪೂರ್ತಿ ಅಮೆರಿಕಕ್ಕೆ ಒಪ್ಪಿಸಲಿಲ್ಲ. ಬದಲಿಗೆ ತನಗೆ ಯಾವುದು ಲಾಭದಾಯಕ ಎಂಬುದನ್ನು ವಿಶ್ಲೇಷಿಸಿ ನಿರ್ಧಾರ ಕೈಗೊಂಡಿತು.

ಡಿ.ವೈ.ಎಫ್.ಐ. ಸಮಾವೇಶ

ಮಂಗಳೂರು: ಕಾವೂರು ವಲಯ ಡಿ.ವೈಎಫ್.ಐ ಕಾರ್ಯಕರ್ತರ ಸಮಾವೇಶವು ಇತ್ತೀಚೆಗೆ ನಡೆಯಿತು. ಕೆ.ಟಿ. ಭಂಡಾರಿ ಉದ್ಘಾಟಿಸಿದರು. ಸಮಾವೇಶದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಬಿ.ಎಂ. ಮಾಧವ ರವರು ಮಾತನ್ನಾಡಿ ಸ್ವಾತಂತ್ರ್ಯ ಗಳಿಸಿದ 50 ವರ್ಷಗಳು ಕಳೆದರು ಇನ್ನು ನಾವು ಹಲವಾರು ಜ್ವಲಂತ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ ಇಂತಹವುಗಳ ವಿರುದ್ಧ ಹೋರಾಟ ಬೇರಾವ ಜವಾಬ್ದಾರಿಯುವ ಜನತೆಯ ಮೇಲಿದೆ ಎಂದರು.

ಅತಿಥಿಗಳಾಗಿ ಮಾತನ್ನಾಡಿದ ಡಿ.ವೈ ಎಫ್.ಐ. ನ ಕೃಷ್ಣಪ್ಪ ಕೊಂಡಾಡಿ ಕಲೆ, ಕ್ರೀಡೆ, ಸಾಹಿತ್ಯ ಮುಂತಾದ ಕ್ಷೇತ್ರಗಳಲ್ಲಿ ಆಸಕ್ತಿ ಇರುವ ಯುವಕರಿಗೆ ಡಿ.ವೈಎಫ್.ಐ ಸೂಕ್ತ ವೇದಿಕೆಯಾಗಿದೆ ಎಂದರು.

ಕೆ. ಯಾಧವಶೆಟ್ಟು ಅಧ್ಯಕ್ಷತೆ ವಹಿಸಿದ್ದ ಸವಾವೇಶಗಳಲ್ಲಿ ರಾಮದಾಶ್. ಕೆ. ಎಸ್.ಎಫ್.ಐ ನ ಸುನೀಲ್ ಕುಮಾರ್ ಒಜಾರ್ ಭಾಗವಹಿಸಿದ್ದರು.

ಜೆ.ಓ.ಸಿ. ವಿದ್ಯಾರ್ಥಿಗಳ ಪ್ರತಿಭಟನೆ

ಬಿಜಾಪುರ: ಎಸ್.ಎಫ್.ಐ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಜೆ.ಓ.ಸಿ. ವಿದ್ಯಾರ್ಥಿಗಳ ವಿವಿಧ ಬೇಡಿಕೆಗಳಾದ ಫಿಯುಸಿಗೆ ಇರುವ ಎಲ್ಲಾ ಅಗತ್ಯ ಸೌಲಭ್ಯಗಳು ಇನ್ನಿತರ ಹಲವಾರು ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ನೂರಾರು ಜೆ.ಓ.ಸಿ. ವಿದ್ಯಾರ್ಥಿಗಳು ಶಾಲಾ ಕಾಲೇಜುಗಳನ್ನು ಬಹಿಷ್ಕರಿಸಿ ಎಸ್.ಎಫ್.ಐ. ನೇತೃತ್ವದಲ್ಲಿ ಮೆರವಣಿಗೆ ನಡೆಸಿದರು. ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ನಡೆದ ಸಭೆಯಲ್ಲಿ ರೈತ ಸಂಘದ ಅಧ್ಯಕ್ಷ ಭೀಮಸಿ ಕಲಾದಗಿ ಮಾತನಾಡಿದರು. ಜನವಾದಿ ಮಹಿಳಾ ಸಂಘಟನೆಯ ಸುರೇಖಾ ರಜಪೂತ ಹಾಗೂ ಡಿವೈಎಫ್‌ಐ ನ ಎನ್.ಎಲ್.ನಧಾಪ ಮಾತನಾಡಿದರು.

ಗದಗ: ಆಗಸ್ಟ್ 29 ರಂದು ಜೆ.ಓ.ಡಿ.ಸಿ. ಯ ನೂರಾರು ವಿದ್ಯಾರ್ಥಿ ವಿದ್ಯಾರ್ಥಿನೀಯರು, ಶಿಕ್ಷಕರು, ತರಗತಿ ಬಹಿಷ್ಕರಿಸಿ ತಮ್ಮ ಬೇಡಿಕೆಗಳ ಪರಿಹಾರಕ್ಕಾಗಿ ಒತ್ತಾಯಿಸಿ ಮುನ್ಸಿಪಲ್ ಕಾಲೇಜ್‌ನಿಂದ ಪ್ರತಿಭಟನಾ ಮೆರವಣಿಗೆ ಮುಖಾಂತರ ಜಿಲ್ಲಾಧಿಕಾರಿಗಳ ಕಛೇರಿಗೆ ತೆರಳಿ ಮತ ಪ್ರದರ್ಶನ ನಡೆಸಿ ನಂತರ ಮನವಿಯನ್ನು ಅರ್ಪಿಸಿದರು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಎಸ್.ಎಫ್.ಐ ರಾಜ್ಯ ಸಹಕಾರ್ಯದರ್ಶಿ ಮಹೇಶ್ ಪತ್ತಾರ್ , ಜೆ.ಓ.ಸಿ. ವಿದ್ಯಾರ್ಥಿಗಳ ಉಪಸಮಿತಿ ಸಂಚಾಲಕ ಸುರೇಶ್ ವಾರದ, ಡಿ.ಬಿ.ಹಗೆದಾಳ, ಎಚ್.ಎಸ್.ಸೋಂಪುರ್, ದೀಪಕ್ ಕಾಯಿಚೂರ್ ಮಾತನಾಡಿದರು. ಗುದಗನೂರ, ಲಕ್ಷ್ಮಿ ರೂಪಾಜೋಷಿ, ಬಿ.ಎಸ್.ಬೆಂಡಿಗೇರಿ, ಮೀರಾನಾಯಕ್, ಕವಿತಾ ಕಂಗೋಳಿ ಮುಂತಾದವರು ಪ್ರತಿಭಟನೆಯ ನೇತೃತವವನ್ನು ವಹಿಸಿದ್ದರು.



ಚೀನಾ ಕಮ್ಯುನಿಸ್ಟ್ ಪಕ್ಷದ ಇನ್ನೊಂದು ಮಹತ್ವಪೂರ್ಣ ಮಹಾಧಿವೇಶನ

ಲೋಕಸಂಚಾರ

ಶರತ್ ಚಂದ್ರ

ಸೆಪ್ಟೆಂಬರ್ 12ರಿಂದ 19ರವರೆಗೆ ಚೀನಾ ಕಮ್ಯುನಿಸ್ಟ ಪಕ್ಷದ 15ನೇ ಮಹಾಧಿವೇಶನ ಬೀಜಿಂಗ್‌ನಲ್ಲಿ ನಡೆಯಿತು. ಸಮಾಜವಾದಿ ಚೀಣಾದ ಮುನ್ನಡೆಗೆ ಹೊಸ ಹುರುಪು ತುಂಬಿದ ಡೆಂಗ್ ಕ್ಸಿಯಾವೊ ಪಿಂಗ್‌ರವರ ನಿಧನದ ನಂತರದ ಮೊದಲ ಮಹಾಧಿವೇಶನ ಇದಾಗಿತ್ತು ಹಾಗೂ ಸಮಾಜವಾದಿ ಚೀನಾವನ್ನು ಹೊಸ ಶತಮಾನಕ್ಕೆ ಒಯ್ಯುವ ಕರ್ತವ್ಯ ಹೊತ್ತ ಹೊಸ ಮುಖಂಡತ್ವವನ್ನು ಆರಿಸಬೇಕಾದ ಮಹಾಧಿವೇಶನ ಆಗಿತ್ತು.

ಪ್ರಧಾನ ಕಾರ್ಯದರ್ಶಿ ಜಿಯಾಂಗ್ ಜೆಮಿನ್‌ರವರು ಬೀಜಿಂಗ್‌ನ ಮಹಾಜನತಾ ಸಭಾಂಗಣದಲ್ಲಿ ಆರಂಭವಾದ ಮಹಾಧಿವೇಶನದಲ್ಲಿ 30,000 ಪದಗಳ ರಾಜಕೀಯ ವರದಿಯನ್ನು ಮಂಡಿಸಿದರು. "ಚೀನೀ ಗುಣಲಕ್ಷಣಗಳುಳ್ಳ ಸಮಾಜವಾದವನ್ನು ಕಟ್ಟುವ ಗುರಿಸಾಧನೆಯಲ್ಲಿ 21ನೇ ಶತಮಾನದತ್ತ ಸರ್ವತೋಮುಖ ಮುನ್ನಡೆಗಾಗಿ ಡೆಂಗ್ ಕ್ಸಿಯಾವೊ ಪಿಂಗ್ ಸಿದ್ಧಾಂತದ ಪತಾಕೆಯನ್ನು ಎತ್ತಿ ಹಿಡಿಯಿರಿ" ಎಂಬುದು ಈ ವರದಿಯ ಶಿರೋನಾಮ. ಈ ವರದಿಯಲ್ಲಿ ಹತ್ತು ಭಾಗಗಳಿದ್ದವು.

1. ಶತಮಾನದ ಅಂತ್ಯದಲ್ಲಿ ಒಂದು ಹಿನ್ನೋಟ ಹಾಗೂ ಮುನ್ನೋಟ
2. ಕಳೆದ ಐದು ವರ್ಷಗಳ ಕೆಲಸ
3. ಡೆಂಗ್ ಕ್ಸಿಯಾವೊ ಪಿಂಗ್ ಸಿದ್ಧಾಂತದ ಐತಿಹಾಸಿಕ ಸ್ಥಾನಮಾನ ಮತ್ತು ಮಾರ್ಗದರ್ಶಕ ಮಹತ್ವ
4. ಸಮಾಜವಾದದ ಪ್ರಾಥಮಿಕ ಹಂತದ ಮೂಲಭೂತ ದಾರಿ ಮತ್ತು ಕಾರ್ಯಕ್ರಮ
5. ಆರ್ಥಿಕ ಪುನರ್ರಚನೆ ಮತ್ತು ಆರ್ಥಿಕ ಬೆಳವಣಿಗೆಯ ಕಾರ್ಯತಂತ್ರ
6. ರಾಜಕೀಯ ರಚನೆಯ ಸುಧಾರಣೆ ಹಾಗೂ ಪ್ರಜಾಪ್ರಭುತ್ವ ಮತ್ತು ಕಾನೂನು ವ್ಯವಸ್ಥೆಯನ್ನು ಬಲಗೊಳಿಸುವುದು.
7. ಚೀನೀ ಗುಣಲಕ್ಷಣಗಳುಳ್ಳ ಸಮಾಜವಾದೀ ಸಂಸ್ಕೃತಿಯನ್ನು ಬೆಳೆಸುವುದು
8. ತಾಯ್ನಾಡಿನ ಶಾಂತಿಯುತ ಪುನರೇಕೀಕರಣಕ್ಕೆ ಪ್ರೋತ್ಸಾಹ
9. ಅಂತರ್ರಾಷ್ಟ್ರೀಯ ಸನ್ನಿವೇಶ ಮತ್ತು ನಮ್ಮ ವಿದೇಶಾಂಗ ನೀತಿ ಹಾಗೂ
10. ಹೊಸ ಶತಮಾನವನ್ನು ಎದುರಿಸಬೇಕಾದ ಚೀನಾ ಕಮ್ಯುನಿಸ್ಟ್ ಪಕ್ಷ.

ಮಹಾಧಿವೇಶನಕ್ಕಾಗಿ ಸಜ್ಜುಗೊಳಿಸಿದ್ದ ಮಹಾ ಜನತಾ ಸಭಾಂಗಣದಲ್ಲಿ ದೊಡ್ಡ ಚೀನೀ ಅಕ್ಷರಗಳಲ್ಲಿ "ಚೀನಾ ಕಮ್ಯುನಿಸ್ಟ್ ಪಕ್ಷದ ಹದಿನೈದನೇ ಮಹಾಧಿವೇಶನ" ಎಂದು ಬ್ಯಾನರು, ಅದೇ ರೀತಿ ಮೇಲೆ ಹೇಳಿದ ಮಂದಿಯ ಶಿರೋನಾಮೆಯಿದ್ದ ಬ್ಯಾನರನ್ನು ಎದ್ದು ಕಾಣುವಂತೆ ಪ್ರದರ್ಶಿಸಲಾಯಿತು.

ಲಿ ಪೆಂಗ್ ರವರ ಅಧ್ಯಕ್ಷತೆಯಲ್ಲಿ ಆರಂಭವಾದ ಮಹಾಧಿವೇಶನ ಮೊದಲಿಗೆ ಕಾರ್ಮಿಕ ವರ್ಗದ ಕ್ರಾಂತಿಕಾರಿಗಳಾದ ಮಾವೊ ಝು ಡೇಂಗ್, ಝೌ ಎನ್‌ಲೈ, ಲಿಯು ಶಾವೋಕಿ, ಝು ಡೆ, ಡೆಂಗ್ ಕ್ಸಿಯಾವೊಪಿಂಗ್, ಚೆನ್ ಯುಗ್ ಹಾಗೂ ಪೆಂಗ್ ಝೆನ್ ರವರಿಗೆ ಮೌನ ಶ್ರದ್ಧಾಂಜಲಿ ಅರ್ಪಿಸಿತು.

ಈ ಮಹಾಧಿವೇಶನದ ಪ್ರತಿನಿಧಿಗಳ ಸಂಖ್ಯೆ 2048 ಹಾಗೂ 60 ಪ್ರತಿನಿಧಿಗಳನ್ನು ವಿಶೇಷವಾಗಿ ಆಹ್ವಾನಿಸಲಾಗಿತ್ತು. ಧೀರ್ಘ ಕರತಾಡನಗಳ ನಡುವೆ ಪ್ರಧಾನಕಾರ್ಯದರ್ಶಿ ಜಿಯಾಂಗ್ ಜೆಮಿನ್ ವರದಿ ಮಾಡಿದರು.

ಸಮಾಜವಾದದ ಪ್ರಾಥಮಿಕ ಹಂತದ ಪರಿಕಲ್ಪನೆಯನ್ನು ವಿಶದ ಪಡಿಸುತ್ತಾ ಜಿಯಾಂಗ್ ರವರು ಪ್ರಾಥಮಿಕ ಹಂತ ಎಂದರೆ ಅಭಿವೃದ್ಧಿ ಹೊಂದದಿರುವ ಹಂತ. ಚೀನಾದ ಉತ್ಪಾದನಾ ಶಕ್ತಿಗಳ ಬೆಳವಣಿಗೆಯ ಹಂತಕ್ಕನುಗುಣವಾಗಿ ಕೈಗಾರೀಕರಣ, ಸಾಮಾಜಕೀಕರಣ, ಮಾರುಕಟ್ಟೆ ಹಾಗೂ ಆರ್ಥಿಕದ ಆಧುನೀಕರಣ ಮಾಡಬೇಕಾಗಿದೆ ಎಂದರು. ಈ ಪ್ರಾಥಮಿಕ ಹಂತ ಸಾಕಷ್ಟು ದೀರ್ಘವಾದ ಅವಧಿ ಎಂದು.ಅವರು ನೆನಪಿಸಿದರು.

ಒಡೆತನದ ಪ್ರಶ್ನೆಯ ಬಗ್ಗೆ ಸ್ಪಷ್ಟೀಕರಿಸುತ್ತಾ ಮಹಾಧಿವೇಶನದ ವರದಿ ಹೀಗೆ ಹೇಳಿದೆ- "ಮೊದಲನೇಯದಾಗಿ, ಒಂದು ಸಮಾಜವಾದಿ ದೇಶವಾದ್ದರಿಂದ ಚೀನಾ ಸಾರ್ವಜನಿಕ ಒಡೆತನವನ್ನು ತನ್ನ ಸಮಾಜವಾದಿ ಆರ್ಥಿಕ ವ್ಯವಸ್ಥೆಯ ಅಡಿಗಲ್ಲಾಗಿ ಇಟ್ಟುಕೊಳ್ಳಬೇಕು; ಎರಡನೇಯದಾಗಿ, ಪ್ರಾಥಮಿಕ ಹಂತದ ಸಮಾಜವಾದದಲ್ಲಿ ಇರುವುದರಿಂದಾಗಿ ಚೀನಾ ಒಡೆತನದ ವಿವಿಧ ಸ್ವರೂಪಗಳನ್ನು ಬೆಳೆಸಬೇಕು. ಆದರೆ ಸಾರ್ವಜನಿಕ ಒಡೆತನ ಪ್ರಬಲ ಸ್ಥಾನ ಹೊಂದಿರಬೇಕು; ಮೂರನೇಯದಾಗಿ, ಯಾವುದೇ ಒಡೆತನದ ಸ್ವರೂಪ" ಮೂರು ಅನುಕೂಲ"ಗಳನ್ನು (ಸಮಾಜವಾದಿ ಸಮಾಜದಲ್ಲಿ ಉತ್ಪಾದಕ ಶಕ್ತಿಗಳ ಬೆಳವಣಿಗೆಗೆ ಅನುಕೂಲವಾದ, ಚೀನಾದ ಸಮಗ್ರ ರಾಷ್ಟ್ರೀಯ ಶಕ್ತಿಗಳನ್ನು ಬಲಪಡಿಸಲು ಅನುಕೂಲಕರವಾದ ಹಾಗೂ ಜನಗಳ ಜೀವನ ಮಟ್ಟಗಳನ್ನು ಎತ್ತರಿಸಲು ಅನುಕೂಲವಾದ ಸ್ವರೂಪಗಳು) ಒದಗಿಸುವಂತಿರಬೇಕು ಎಂಬ ಮಾನದಂಡಕ್ಕೆ ಅನುಗುಣವಾಗಿದ್ದರೆ ಅದನ್ನು ಸಮಾಜವಾದದ ಗುರಿಸಾಧನೆಗೆ ಬಳಸಬಹುದು ಮತ್ತು ಬಳಸಲೇಬೇಕು"

ಅಂತರ್ರಾಷ್ಟ್ರೀಯ ಸಂಬಂಧಗಳ ಬಗ್ಗೆ ಮಾತನಾಡುತ್ತಾ "ಚೀನಾಕ್ಕೆ ಒಂದು ದೀರ್ಘಾವಧಿಯ ಶಾಂತಿಯುತ ಅಂತರ್ರಾಷ್ಟ್ರೀಯ ವಾತಾವರಣ ಬೇಕಾಗಿದೆ. ಮುಖ್ಯವಾಗಿ ಸುತ್ತಲಿನ ದೇಶಗಳೊಂದಿಗೆ ಉತ್ತಮ ಸಂಬಂಧಗಳು ಬೇಕಾಗಿದೆ" ಎಂದು ಜಿಯಾಂಗ್ ಜೆಮಿನ್ "ಚೀನಾ ಎಂದೂ, ಭವಿಷ್ಯದಲ್ಲಿ ಅಭಿವೃದ್ಧಿ ಹೊಂದಿದ ಮೇಲೂ ಯಾರ ಮೇಲೂ ಯಜಮಾನಿಕೆ ಹೇರಲು ಬಯಸುವುದಿಲ್ಲ. ಬಹಳ ದೀರ್ಘಕಾಲ ವಿದೇಶಿ ಶಕ್ತಿಗಳಿಂದ ಆಕ್ರಮಣ, ದಮನ, ಅವಮಾನಗಳನ್ನು ಅನುಭವಿಸಿದ ಚೀನೀ ಜನತೆ ಎಂದೆಂದೂ ಇತರರ ಮೇಲೆ ಈ ಸಂಕಟಗಳನ್ನು ಹೇರುವುದಿಲ್ಲ" ಎಂದು ಸಾರಿದರು-ಮೂರನೇ ಜಗತ್ತಿನ ದೇಶದೊಳಗೆ ಸೌಹಾರ್ದ ಹಾಗೂ ಸಹಕಾರವನ್ನೂ ಬಲಪಡಿಸುವುದಾಗಿಯೂ ಅವರು ಒತ್ತಿಹೇಳಿದರು.

ಕಮ್ಯುನಿಸ್ಟೇತರ ಚೀನೀ ಪ್ರಜಾಪ್ರಭುತ್ವವಾದಿ ಪಕ್ಷಗಳ ಮುಖಂಡರನ್ನೂ ಈ ಮಹಾಧೀವೇಶನದಲ್ಲಿ ಭಾಗವಹಿಸಲು ಆಹ್ವಾನಿಸಲಾಗಿತ್ತು. ಕಮ್ಯುನಿಸ್ಟರಲ್ಲದ ಚೀನಿ ಜನತಾಗಣತಂತ್ರದ ಉಪಾಧ್ಯಕ್ಷ ರೊಂಗ್ ಯರೆನ್, ರಾಷ್ಟ್ರೀಯ ಜನತಾ ಕಾಂಗ್ರೆಸ್(ಚೀನಾದ ಸಂಸತ್)ನ ಸ್ಥಾಯಿ ಸಮಿತಿಯ ಹಾಗೂ ಚೀನಾ ಜನತಾ ರಾಜಕೀಯ ಸಮಾಲೋಚನಾ ಸಮ್ಮೇಳನದ ರಾಷ್ಟ್ರೀಯ ಸಮಿತಿಯ ಕಮ್ಯುನಿಸ್ಟೇತರ ಉಪಾಧ್ಯಕ್ಷರುಗಳನ್ನು ಹಾಗೂ ಅಖಿಲ ಚೀನಾ ಕೈಗಾರಿಕೆ ಮತ್ತು ವಾಣಿಜ್ಯ ಒಕ್ಕೂಟದ ಮುಖಂಡರುಗಳನ್ನು ಈ ಅಧಿವೇಶನಕ್ಕೆ ಆಹ್ವಾನಿಸಲಾಗಿತ್ತು.

ಆರು ದಿನಗಳ ಕೂಟಗಳ ನಂತರ ಮಹಾಧಿವೇಶನದ 193 ಸದಸ್ಯರು ಹಾಗೂ 151 ಪರ್ಯಾಯ ಸದಸ್ಯರಿರುವ ಹೊಸ ಕೇಂದ್ರ ಸಮಿತಿಯನ್ನು, 21 ಸದಸ್ಯರುಳ್ಳ ಪೊಲಿಟ್ ಬ್ಯೂರೋವನ್ನು ಹಾಗೂ ಹೊಸ ಪೊಲಿಟ್ ಬ್ಯೂರೋ ಸ್ಥಾಯಿ ಸಮಿತಿಯನ್ನು ಆರಿಸಿತು.(ಆದಾರ ಚೈನಾ ಡೈಲಿ)

ಸಿಪಿಐ(ಎಂ) ಹಾರೈಕೆ

ಸೆಪ್ಟೆಂಬರ್ 12 ರಿಂದ 19ರ ವರೆಗೆ ನಡೆದ ಚೀಣಾ ಕಮ್ಯುನಿಸ್ಟ್ ಪಕ್ಷದ 15ನೇ ಮಹಾಧಿವೇಶನಕ್ಕೆ ಸಿಪಿಐ(ಎಂ) ಕೇಂದ್ರ ಸಮಿತಿಯ ಪರವಾಗಿ ಶುಭಾಶಯ ಸಂದೇಶವನ್ನು ಕಳಿಸುತ್ತಾ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್ಕಿಶನ್‌ಸಿಂಗ್ ಸುರ್ಜಿತ್‌ರವರು ಈಗಿರುವ ಕ್ಲಿಷ್ಟ ಅಂತರ್ರಾಷ್ಟ್ರೀಯ ಪರಿಸ್ಥಿತಿಯಲ್ಲಿ ಚೀಣಾ ಕಮ್ಯುನಿಸ್ಟ್ ಪಕ್ಷದ ಮುನ್ನಡೆ ಶೋಷಣಾರಹಿತ ಸಮಾಜಕ್ಕಾಗಿ ದುಡಿಯುತ್ತಿರುವ ಎಲ್ಲರಿಗೂ ಒಂದು ಸ್ಫೂರ್ತಿಯ ಸೆಲೆ ಎಂದಿದ್ದಾರೆ.

ವಿಶ್ವ ಸಾಮ್ರಾಜ್ಯಶಾಹಿ ಶಕ್ತಿಗಳು ರಾಜಕೀಯವಾಗಿಯೂ, ಆರ್ಥಿಕವಾಗಿಯೂ ತಮ್ಮ ಪ್ರಾಬಲ್ಯವನ್ನು ಹೇರಲು ಪ್ರಯತ್ನಿಸುತ್ತಿವೆ. ಆದರೆ ಅದಕ್ಕೆ ಪ್ರತಿರೋಧ ಬರುತ್ತಿದೆ. ಸಾಮ್ರಾಜ್ಯಶಾಹಿ ಏಕಧ್ರುವ ಜಗತ್ತಿನ ತನ್ನ ಕಣ್ಣೋಟವನ್ನು ಹೇರಬಯಸುತ್ತಿದ್ದಾರೆ. ಈಗ ಕಂಡು ಬರುತ್ತಿರುವ ಬೆಳವಣಿಗೆಗಳು ಬಹುಧ್ರುವೀಯ ಜಗತ್ತು ಮೂಡಿ ಬರುವ ಸಾಧ್ಯತೆಗಳನ್ನು ತೋರುತ್ತಿವೆ. ಇಂತಹ ಕ್ಲಿಷ್ಟ ಸನ್ನಿವೇಶದಲ್ಲಿ ಚೀಣಾ ಕಮ್ಯುನಿಸ್ಟ್ ಪಕ್ಷ ಸಮಾಜವಾದೀ ಪಥಕ್ಕೆ ದೃಢವಾಗಿ ಬದ್ಧವಾಗಿಟ್ಟುಕೊಂಡು 21ನೇ ಶತಮಾನದತ್ತ ಮುನ್ನಡೆಯುತ್ತಿರುವುದು ಶೋಷಣಾ ರಹಿತ ಸಮಾಜಕ್ಕಾಗಿ ಹೋರಾಡುತ್ತಿರುವ ಎಲ್ಲಾ ಜನಗಳಿಗೂ ಒಂದು ಸ್ಪೂರ್ತಿಯ ಸೆಲೆ.

ಕಾಂ|| ಡೆಂಗ್ ಕ್ಸಿಯಾಪೊಪಿಂಗ್ ಪ್ರತಿಪಾದಿಸಿದ ನಾಲ್ಕು ಮೂಲಾಧಾರವಾದ ನೀತಿಗಳಿಗೆ ಬದ್ಧವಾಗಿದ್ದುಕೊಂಡು ಸುಧಾರಣಾ ಪ್ರಕ್ರಿಯೆಯನ್ನು ಹಾಗೂ ಸಮಾಜವಾದೀ ಆಧುನೀಕರಣವನ್ನು ಮುಂದುರಿಸಿಕೊಂಡು ಹೋಗುತ್ತಿರುವ ಚೀಣಾ ಜನತಾ ಗಣತಂತ್ರ ಗಮನಾರ್ಹ ಆರ್ಥಿಕ ಮುನ್ನಡೆ ಸಾಧಿಸಿದೆ ಎಂದು ಸಿಪಿಐ(ಎಂ) ಶುಭಾಶಯ ಸಂದೇಶ ಗಮನಿಸಿದೆ. ಚೀಣಾದಲ್ಲಿ ಸಮಾಜವಾದ ವನ್ನು ಬಲಪಡಿಸುವ ಸ್ಪಷ್ಟ ಉದ್ದೇಶದಿಂದ ಸಮಾಜವಾದೀ ಆಧುನೀಕರಣದ ಕೆಲಸಕಾರ್ಯಗಳನ್ನು ಮುಂದೊಯ್ಯುವಲ್ಲಿ ಚೀಣಾ ಕಮ್ಯುನಿಸ್ಟ್ ಪಕ್ಷ ಯಶಸ್ವಿಯಾಗಲಿ ಎಂದು ಸಿಪಿಐ(ಎಂ) ಹಾರೈಸಿದೆ.

15ನೇ ಮಹಾಧಿವೇಶನದ ಕಲಾಪಗಳು ಚೀಣೀ ಗುಣಲಕ್ಷಣಗಳುಳ್ಳ ಸಮಾಜ ವಾದವನ್ನು ಕಟ್ಟುವ ಧ್ಯೇಯ ಸಾಧನೆ ಕಳೆದ ಮೂರು ವರ್ಷಗಳಲ್ಲಿ ಚೀಣೀ ಜನರ ಹೋರಾಟಗಳ ಇತಿಹಾಸದ ವಿಮರ್ಶೆಯ ಮೂಲಕ ಈಗಿರುವ ಅನುಕೂಲಕರ ಅವಕಾಶಗಳನ್ನು ಬಳಸಿಕೊಂಡು ಚೀಣಾ ವನ್ನು ಶತಮಾನಕ್ಕೆ ಒಯ್ಯಲು ಯೋಜನೆಗಳನ್ನು ರೂಪಿಸಿ ಚೀಣಾದಲ್ಲಿ ಸಮಾಜವಾದ ವನ್ನು ಕ್ರೋಢೀಕರಿಸುವ, ಬಲಪಡಿಸುವ ಪ್ರಕ್ರಿಯೆಗೆ ಕಾಣಿಕೆ ನೀಡುತ್ತದೆ ಎಂದೂ ಸಿಪಿಐ(ಎಂ) ಹಾರೈಸಿದೆ.

ಭಾರತ ಮತ್ತು ಚೀಣಾ ನಡುವೆ ಸಂಬಂಧಗಳು ಸುಧಾರಿಸುತ್ತಿವೆ ಎಂಬುದು ಸಂತೋಷದ ಸಂಗತಿ. ಇದು ಈ ಪ್ರಾದೇಶಿಕ ಶಾಂತಿ ಮತ್ತು ಸ್ಥಿರತೆಯ ಮೇಲೆ ಮಹತ್ವದ ಪ್ರಭಾವ ಬೀರುತ್ತದೆ. ಈ ಮಹಾಧಿವೇಶನದ ಕಲಾಪಗಳು ಈ ಪ್ರಕ್ರಿಯೆಯನ್ನು ಇನ್ನಷ್ಟು ಶಕ್ತಿಯುತಗೊಳಿಸುತ್ತವೆ ಎಂದು ಹಾರೈಸಿರುವ ಸಿಪಿಐ(ಎಂ) ಸಂದೇಶ ಈ ಮಹಾಧಿವೇಶನದ ಎಲ್ಲಾ ಪ್ರತಿನಿಧಿಗಳಿಗೆ ಸೋದರ ಶುಭಾಶಯಗಳನ್ನು ಕೋರಿದೆ.

ಅಂತರ ಪಾರ್ಲಿಮೆಂಟರೀ ಸಂಘ: ಪಾಶ್ಚಿಮಾತ್ಯ ಪರ ಪಕ್ಷಪಾತ!

ಕಳೆದವಾರ ನಡೆದ ಅಂತರ-ಪಾರ್ಲಿಮೆಂಟರಿ ಸಂಘ (IPU) ನ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ 15ನೇ ಬಾರಿಗೆ ಯುರೋಪಿನ ಅಭ್ಯರ್ಥಿ ಆಯ್ಕೆಯಾಗಿದ್ದಾರೆ. ಈ ಬಾರಿ ಸೋತ ಏಶ್ಯನ್ ಅಭ್ಯರ್ಥಿ ಭಾರತದ ಲೋಕಸಭಾಧ್ಯಕ್ಷ ಪಿ.ಎ.ಸಂಗ್ಮಾ. ಈ ಅಧ್ಯಕ್ಷ ಸ್ಥಾನದ ಚುನಾವಣೆಗೆ ನಿರ್ದಿಷ್ಟ ನಿಯಮಾವಳಿಗಳಿಲ್ಲ, ಅದು ಕೇವಲ ಕೆಲವು ದೇಶಗಳ ಮರ್ಜಿಗೆ ಅನುಗುಣವಾಗಿ ಇರುತ್ತದೆ ಎಂಬುದು ಹಲವು ಏಶ್ಯ, ಆಫ್ರಿಕಾ ದೇಶಗಳ ಸಂದೇಹ. ಈ ನಿಯಮಾವಳಿಗಳನ್ನು ನಿರ್ದಿಷ್ಟಪಡಿಸಬೇಕು, ಈ ಸಂಸ್ಥೆಯ ಪ್ರಜಾಪ್ರಭುತ್ವೀಕರಣವಾಗಬೇಕಾಗಿದೆ ಎಂದು ಹಲವು ಆಫ್ರಿಕಾ, ಏಶ್ಯದ ದೇಶಗಳ ರಾಜತಾಂತ್ರಿಕರು ಅಭಿಪ್ರಾಯ ಪಟ್ಟಿದ್ದಾರೆ. ಈ ಬಾರಿಯ ಚುನಾವಣೆಗಳಲ್ಲಿ ಕೆಲವು ದೇಶಗಳ ಪಕ್ಷಪಾತದ ನಿಲುವು ಸ್ಪಷ್ಟವಾಗಿ ಕಂಡುಬಂದಿದೆ ಎಂದು ಅವರು ಹೇಳುತ್ತಾರೆ.

ಪ್ಯಾಲೆಸ್ಟೈನ್ : ಶಾಂತಿ ಪ್ರಕ್ರಿಯೆಯನ್ನು ಬುಡಮೇಲು ಮಾಡುವ ಇಸ್ರೇಲಿ ಧೋರಣೆಗಳಿಗೆ ಅರಬ್ ದೇಶಗಳ ತಿರಸ್ಕಾರ

ಈಜಿಪ್ಟಿನ ರಾಜಧಾನಿ ಕೈರೋದಲ್ಲಿ ನಡೆದ ಅರಬ್ ಲೀಗ್ ಮಂಡಳಿಯ ಸಭೆ ಪ್ಯಾಲೆಸ್ಟೀನಿನಲ್ಲಿ ಒಂದು ನ್ಯಾಯಪೂರ್ಣ ಹಾಗೂ ಸಮಗ್ರ ಶಾಂತಿಗೆ ತಾನು ಬದ್ಧ ಎಂದು ಪುನರುಚ್ಚರಿಸುತ್ತಾ ಈ ಶಾಂತಿ ಪ್ರಕ್ರಿಯೆಯನ್ನು ಬುಡಮೇಲು ಮಾಡುತ್ತಿರುವ ಇಸ್ರೇಲಿ ಧೋರಣೆಗಳನ್ನು ತಿರಸ್ಕರಿಸಿದೆ. ಎಲ್ಲಾ ರೀತಿಯ ಮಾತುಕತೆಗಳು ಪುನರಾರಂಭಗೊಳ್ಳಬೇಕು ಎಂದು ಅದು ಕರೆ ನೀಡಿದೆ.

ಶಾಂತಿ ಪ್ರಕ್ರಿಯೆಗೆ ಅಧಿಕೃತವಾಗಿ ಒಪ್ಪಿದರೂ ಇಸ್ರೇಲ್ ಆರಂಭದಿಂದಲೂ ಪ್ಯಾಲಿಸ್ಟೇನಿಯನ್ನರಿಗೆ ಆದಷ್ಟು ನಿಧಾನವಾಗಿ ಆದಷ್ಟು ಕಡಿಮೆ ಸಿಗುವಂತೆ ಮಾಡಬೇಕು ಎಂಬ ನಿಲುವನ್ನು ಅಂಗೀಕರಿಸಿದೆ. ಇದರ ಪರಿಣಾಮವಾಗಿ ಮಾತುಕತೆಗಳು ಈಗ ಸ್ಥಗಿತಗೊಂಡಿವೆ. ಇಸ್ರೇಲಿನ ಇತ್ತೀಚಿನ ಕೃತ್ಯವೆಂದರೆ ಜೆರುಸಲಂ ಉಪನಗರಗಳಲ್ಲಿ ಹೊಸ ಯಹೂದಿ ವಸತಿ ಯೋಜನೆಗಳನ್ನು ಜಾರಿಗೆ ತರುವುದು ಹಾಗೂ ಅವನ್ನು ಪಶ್ಚಿಮ ತಟದವರೆಗೂ ವಿಸ್ತರಿಸುವುದು. ಪ್ಯಾಲೆಸ್ಟೇನ್ ಪ್ರದೇಶದ ಜನಸಂಖ್ಯಾ ಪ್ರಮಾಣವನ್ನು ವ್ಯತ್ಯಸ್ತಗೊಳಿಸುವುದು ಅದರ ಈ ನೀತಿಯ ಹಿಂದಿರುವ ಕುಯುಕ್ತಿ. ಪ್ಯಾಲೆಸ್ಟೇನಿಯನ್ನರಿಗೆ ಒಂದು ಸ್ವಾಯತ್ತ ಪ್ರಭುತ್ವ ಸಿಗುವುದಿಲ್ಲ, ಅವರು ತಮ್ಮ ಹತೋಟಿಗೆ ಬಂದಿರುವ ಎಂಟು ಪಟ್ಟಣಗಳಲ್ಲಿ ಮುನಿಸಿಪಲ್ ಅಧಿಕಾರದಿಂದಷ್ಟೇ ತೃಪ್ತರಾಗಬೇಕು ಎಂಬ ಇಸ್ರೇಲಿ ಪ್ರಧಾನಿಯ ಮಾತುಗಳು ವಾತಾವರಣವನ್ನು ಇನ್ನಷ್ಟು ಕಲುಷಿತಗೊಳಿಸಿವೆ. ಇದಕ್ಕೆ ಪರೋಕ್ಷವಾಗಿ ಅಮೇರಿಕನ್ ಸಾಮ್ರಾಜ್ಯಶಾಹಿಯ ಬೆಂಬಲವೂ ಇರುವುದರಿಂದ ಈ ಪ್ರದೇಶಗಳಲ್ಲಿ ಗಂಭೀರ ಪರಿಸ್ಥಿತಿ ಸೃಷ್ಟಿಯಾಗಿದೆ. ಈ ಶಾಂತಿ ಒಪ್ಪಂದವನ್ನು ಒಪ್ಪದ ಭಯೋತ್ಪಾದಕ ಗುಂಪುಗಳಿಗೆ ಇದರಿಂದಾಗಿ ಹೊಸ ಕುಮ್ಮಕ್ಕು ದೊರೆತಿದೆ. ಇಸ್ರೇಲಿ ಆಳರಸರು ಇದನ್ನೇ ನೆವ ಮಾಡಿಕೊಂಡು ಶಾಂತಿ ಪ್ರಕ್ರಿಯೆಗೆ ಅಡ್ಡಗಾಲು ಹಾಕುತ್ತಿದ್ದಾರೆ. ಇತ್ತೀಚಿಗೆ ಸೆಪ್ಟೆಂಬರ್ 7 ರಂದು ಜೆರುಸಲೆಂನಲ್ಲಿ ಭಯೋತ್ಪಾದಕ ಕೃತ್ಯದ ನಂತರ ಎಲ್ಲಾ ಭಯೋತ್ಪಾದಕರನ್ನು ಅವರ ಹಿತೈಷಿಗಳನ್ನು ಬಂಧಿಸಬೇಕೆಂಬುದು ಇತ್ತೀಚಿನ ಹೊಸ ಬೇಡಿಕೆ. ಆದರೆ, ಯಾಸರ್ ಅರಾಫತ್ 200 ಕ್ಕೂ ಹೆಚ್ಚು ಭಯೋತ್ಪಾದಕರನ್ನು ಬಂಧಿಸಿದರೂ ಇಸ್ರೇಲಿಗೆ ತೃಪ್ತಿಯಾಗಿಲ್ಲ. ಶಾಂತಿ ಒಪ್ಪಂದದ ಒಂದೇ ಒಂದು ಅಂಶವನ್ನು ಜಾರಿಗೊಳಿಸಿಲ್ಲ. ವಾಸ್ತವವಾಗಿ ಈ ಒಪ್ಪಂದದ ಪ್ರಕಾರ ಈಗಾಗಲೇ ಸಾಕಷ್ಟು ಪ್ರದೇಶ ಪ್ಯಾಲೆಸ್ಟೇನಿಯನ್ನರ ಹತೋಟಿಗೆ ಬಂದು ಜೆರುಸೆಲಂ ಭವಿಷ್ಯ ಹಾಗೂ ಪ್ಯಾಲೆಸ್ಟೇನಿನ ಪ್ರಭುತ್ವದ ಸ್ಥಾನಮಾನಗಳ ಬಗ್ಗೆ ಅಂತಿಮ ಚರ್ಚೆ ನಡೆಯಬೇಕಾಗಿತ್ತು.

50 ವರ್ಷಕ್ಕೂ ಹೆಚ್ಚು ಕಾಲ ತಮ್ಮ ತಾಯ್ನಾಡಿಗಾಗಿ ಹೋರಾಡುತ್ತಿರುವ ಪ್ಯಾಲೆಸ್ಟೇನಿಯನ್ನರು ಈಗ ಇಸ್ರೇಲಿ ಆಳರಸರ ಹಠಮಾರಿತನದ ಹೊಸ ಆಕ್ರಮಣವನ್ನು ಎದುರಿಸಲು ಸಜ್ಜಾಗುತ್ತಿದ್ದಾರೆ.

ಭ್ರಷ್ಟಾಚಾರ ಆಪಾದನೆ ಮೇಲೆ ಜಪಾನಿ ಮಂತ್ರಿಯ ರಾಜೀನಾಮೆ

11 ದಿನಗಳ ಹಿಂದೆ ಹೊಸದಾಗಿ ನೇಮಕಗೊಂಡ ಜಪಾನಿನ ಸಂಪುಟ ದರ್ಜೆಯ ಮಂತ್ರಿ ಕೋಕೋಸಾಟೋ ದೇಶಾದ್ಯಂತ ವ್ಯಕ್ತಗೊಂಡ ಪ್ರತಿಭಟನೆಗಳಿಂದಾಗಿ ರಾಜೀನಾಮೆ ನೀಡಬೇಕಾಗಿ ಬಂದಿದೆ. ಪ್ರಧಾನ ಮಂತ್ರಿ ಹಾಶಿಮೋಟೋರವರ 'ಸುಧಾರಣ ಕ್ರಮ'ಗಳ ಜಾರಿ ನಿರ್ವಹಣೆ ಹಾಗೂ ಸಂಯೋಜನೆಯ ಜವಾಬ್ದಾರಿಯನ್ನು ಈ ಮಂತ್ರಿಗೆ ನೀಡಲಾಗಿತ್ತು.

ಕಳೆದ ದಶಕದಲ್ಲಿ ಕುಖ್ಯಾತವಾದ ಲಾಕ್‌ಹೀಟ್ ಲಂಚ ಪ್ರಕರಣದಲ್ಲಿ ಎರಡು ಮಿಲಿಯ ಯೆನ್ ಲಂಚ ತೆಗೆದುಕೊಂಡ ಅಪರಾಧದ ಮೇಲೆ 1986 ರಲ್ಲಿ ಶಿಕ್ಷೆಯಾಗಿತ್ತು. ಆಳುವ ಎಲ್.ಡಿ.ಪಿ. ಪಕ್ಷದ ಅಧ್ಯಕ್ಷ ಹಾಗೂ ಮಾಜಿ ಪ್ರಧಾನಿ ನಕಾಸೋನೆಯ ಒತ್ತಡದಿಂದ ಈತನಿಗೆ ಮಂತ್ರಿ ಪದವಿ ಕೊಡಲಾಗಿತ್ತು ಎನ್ನಲಾಗಿದೆ. ಆದರೆ ಇದಕ್ಕೆ ಆ ಪಕ್ಷದ ಬೆಂಬಲದಿಂದಲೇ ಭಾರೀ ಪ್ರತಿಭಟನೆ ವ್ಯಕ್ತವಾಯಿತು.

ಆಲ್ಜೀರಿಯಾದಲ್ಲಿ ಇನ್ನೊಂದು ಹತ್ಯಾಕಾಂಡ

ಧಾರ್ಮಿಕ ಮೂಲಭೂತವಾದಿಗಳ ಹಲ್ಲೆಗಳಿಗೆ ಒಳಗಾಗಿರುವ ಆಲ್ಜೀರಿಯಾದಲ್ಲಿ ಸೆಪ್ಟೆಂಬರ್ 23 ರಂದು ಒಂದು ಭಯಾನಕ ಸಾಮೂಹಿಕ ಹತ್ಯಾಕಾಂಡದಲ್ಲಿ 200 ಜನರ ಕೊಲೆಯಾಗಿ ನೂರಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ ಎಂದು ತಿಳಿದುಬಂದಿದೆ. ಇಸ್ಲಾಮಿ ಮೂಲಭೂತವಾದಿಗಳು ಸರಕಾರವನ್ನು ಪದಚ್ಯುತಗೊಳಿಸಲು ಈ ಹೀನ ಕೃತ್ಯ ಎಸಗಿದ್ದಾರೆ ಎಂದು ಅಲ್ಲಿ ಸರಕಾರ ಹೇಳಿದೆ. ಈ ನಡುವೆ ಸರಕಾರದ ವಿರುದ್ಧ ಬಂಡುಕೋರ ಚಟುವಟಿಕೆಗಳಲ್ಲಿ ತೊಡಗಿರುವ 'ಇಸ್ಲಾಮಿ ಮೂಲಭೂತವಾದಿ 'ಇಸ್ಲಾಮಿ ಮುಕ್ತಿರಂಗ' ದ ಇಸ್ಲಾಮಿ ಮುಕ್ತಿ ಸೇನೆ ಈ ಹೀನ ಸಾಮೂಹಿಕ ಹತ್ಯಾಕಾಂಡಕ್ಕೆ ಇನ್ನೊಂದು ಮೂಲಭೂತವಾದಿ ಗುಂಪು ಕಾರಣ ಎನ್ನುತ್ತಾ ತನ್ನ ಬಂಡುಕೋರ ಚಟುವಟಿಕೆಗಳನ್ನು ತಾತ್ಕಾಲಿಕವಾಗಿ ನಿಲ್ಲಿಸುವುದಾಗಿ ಹೇಳಿದೆ.

ಕೃಷಿ ಕಾರ್ಮಿಕರ ಎಚ್ಚರಿಕೆ

ಭಾರತ ಸರ್ಕಾರ ಈಗಾಗಲೇ ಸಿದ್ಧವಾಗಿರುವ ಕೃಷಿ ಕಾರ್ಮಿಕರ ಸಮಗ್ರ ಶಾಸನವನ್ನು ಮುಂಬರುವ ಸಂಸತ್ ಅಧಿವೇಶನದಲ್ಲಿ ಮಂಡಿಸಬೇಕೆಂದು ಕೃಷಿ ಕಾರ್ಮಿಕರ ಸಂಘಟನೆಗಳು ಸೇರಿಕೊಂಡು ರಚಿಸಿಕೊಂಡಿರುವ ಕೃಷಿ ಕಾರ್ಮಿಕರ ಸಂಘಗಳ ಸಂಯೋಜನಾ ಸಮಿತಿ ಒತ್ತಾಯಿಸಿದೆ.

ಸೆಪ್ಟೆಂಬರ್ 15 ರಂದು ಈ ಸಮಿತಿ ನೀಡಿರುವ ಪತ್ರಿಕಾ ಹೇಳಿಕೆಯಲ್ಲಿ ಈ ಒತ್ತಾಯವನ್ನು ಪುನರುಚ್ಚರಿಸಲಾಗಿದೆ. ಕಳೆದ ಎರಡು ದಶಕಗಳಿಂದ ಕೃಷಿ ಕಾರ್ಮಿಕರು ಇದಕ್ಕಾಗಿ ಹೋರಾಡುತ್ತಲೇ ಬಂದಿದ್ದಾರೆ. ಇಂದಿರಾಗಾಂಧೀಯವರಿಂದ ಹಿಡಿದು ದೇವೇಗೌಡರವರೆಗೆ ಎಲ್ಲಾ ಪ್ರಧಾನ ಮಂತ್ರಿಗಳು ಈ ಬಗ್ಗೆ ನೀಡಿದ ವಚನವನ್ನು ಈಡೇರಿಸಿಲ್ಲ. ಅಷ್ಟೇ ಅಲ್ಲ ಒಂದು ವರ್ಷಕ್ಕಿಂತಲೂ ಹೆಚ್ಚು ಸಮಯದಿಂದ ಅಧಿಕಾರದಲ್ಲಿರುವ ಸಂಯುಕ್ತರಂಗದ ಸಮಾನ ಕನಿಷ್ಟ ಕಾರ್ಯಕ್ರಮದಲ್ಲಿಯೂ ಈ ಬಗ್ಗೆ ಆಶ್ವಾಸನೆ ಇದೆ. ಆದ್ದರಿಂದ ಈ ಬಗ್ಗೆ ಕ್ರಮ ತೆಗೆದುಕೊಳ್ಳಲೇಬೇಕಾದ ಸಮಯವಿದು. ಇಲ್ಲವಾದರೆ ಸರಕಾರ ದೇಶಾದ್ಯಂತ ಸಮರ ಧೀರ ಹೋರಾಟಗಳನ್ನು ಎದುರಿಸಬೇಕಾಗುತ್ತದೆ ಎಂದು ಸಂಯೋಜನಾ ಸಮಿತಿ ಎಚ್ಚರಿಸಿದೆ. ಭಾರತ ಸರ್ಕಾರದ ಮಾಜೀ ಕಾರ್ಮಿಕ ಮಂತ್ರಿ, ಕೃಷಿ ಮಂತ್ರಿ, ಕಾನೂನು ಮಂತ್ರಿ ಹಾಗೂ ಈ ಹಿಂದೆ ಪ್ರಧಾನ ಮಂತ್ರಿಯಾಗಿದ್ದವರನ್ನೆಲ್ಲಾ ನಾವು ಭೇಟಿಯಾಗಿದ್ದೇವೆ. ಸರಕಾರ ಈ ಶಾಸನವನ್ನು ಮುಂದಿನ ಅಧಿವೇಶನದಲ್ಲಿ ತಪ್ಪದೆ ಸಂಸತ್ತಿನಲ್ಲಿ ಮಂಡಿಸಬೇಕು. ಈ ಬಗ್ಗೆ ಹೊರಗಡೆ ಇನ್ನಷ್ಟು ಚರ್ಚೆ ಅಗತ್ಯವಿಲ್ಲ. ಕರಡು ಇದೆ, ರಾಜ್ಯಗಳೊಂದಿಗೆ ಹಲವು ಬಾರಿ ಚರ್ಚೆ ನಡೆದಿದೆ. ಪಂಜಾಬ್, ಹರಿಯಾಣ ಮತ್ತು ಮಹಾರಾಷ್ಟ್ರ ಬಿಟ್ಟು ಬೇರೆಲ್ಲಾ ರಾಜ್ಯಗಳು ಈ ಕ್ರಮವನ್ನು ಬೆಂಬಲಿಸಿವೆ ಎಂದು ಕೃಷಿ ಕಾರ್ಮಿಕರ ಮುಖಂಡರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

"ಮಾರ್ಚ್ 12, 1997 ರಂದು ಸಾವಿರಾರು ಕೃಷಿ ಕಾರ್ಮಿಕರು ಸಂಸತ್ ಮಾರ್ಗವನ್ನು ನಾಲ್ಕು ಗಂಟೆಗಳ ಕಾಲ ಅಡ್ಡಗಟ್ಟಿ ನಂತರ ಬಂಧನಕ್ಕೊಳಗಾದರು. ಇನ್ನು ಮುಂದೆ ಮತ್ತಷ್ಟು ಸಮರಧೀರ ಕಾರ್ಯಾಚರಣೆಗಳನ್ನು ರೂಪಿಸಲಾಗುವುದು. ನಮ್ಮ ನ್ಯಾಯಪೂರ್ಣ ಗುರು ಈಡೇರುವವರೆಗೆ ನಾವು ವಿಶ್ರಮಿಸುವುದಿಲ್ಲ" ಎಂದು ಎಚ್ಚರಿಸಿರುವ ಈ ಹೇಳಿಕೆ ಈಗಲೂ ದೇಶದ 8 ಕೋಟಿ ನಾಗರೀಕರಿಗೆ ತಮ್ಮ ಮೂಲಭೂತ ಹಕ್ಕುಗಳನ್ನು ರಕ್ಷಿಸುವ ಒಂದು ಕಾನೂನು ಇಲ್ಲ ಎಂಬುದನ್ನು ಗಮನದಲ್ಲಿಟ್ಟುಕೊಂಡು ತನ್ನ ಸಮಾನ ಕನಿಷ್ಟ ಕಾರ್ಯಕ್ರಮದಲ್ಲಿ ಆಶ್ವಾಸನೆಯಿತ್ತ ಈ ಶಾಸನವನ್ನು ಈಗಲಾದರೂ ಪಾಸು ಮಾಡಬೇಕು ಎಂದು ಆಗ್ರಹಪಡಿಸಿದೆ. ಈ ಹೇಳಿಕೆಗೆ ಅಖಿಲ ಭಾರತ ಕೃಷಿ ಕಾರ್ಮಿಕರ ಸಂಘದ ಸುನೀತ್ ಛೋಪ್ರಾ, ಭಾರತ್ ಖೇತ್ ಮಜ್ದೂರ್ ಯೂನಿಯನ್ನಿನ ಪಿ.ಕೆ. ಕೊಡಿಯನ್, ಅಖಿಲ ಭಾರತ ಅಗ್ರಗಾಮಿ ಕಿಸಾನ್ ಸಭಾದ ಅಭನಿ ರಾಯ್ ಹಾಗೂ ಹಿಂದ್ ಖೇತ್ ಮಜ್ದೂರ್ ಯೂನಿಯನ್ನಿನ ಆರ್.ಎ. ಮಿತ್ತಲ್ ಸಹಿ ಮಾಡಿದ್ದಾರೆ. (ಐ.ಎನ್.ಎನ್.)

ಉತ್ತರ ಕರ್ನಾಟಕದಲ್ಲಿ ಮಂತ್ರಿ ಮಂಡಲದ ದಂಡ ಯಾತ್ರೆ

ಪುಟ 1 ರಿಂದ

ಬಾದ್ ಕರ್ನಾಟಕದಲ್ಲಿಯೂ ಪಕ್ಷದ ಸಭೆ, ಅಧಿಕಾರಿಗಳ ಜೊತೆಯಲ್ಲಿ ಸಮಾಲೋಚನೆಗಳನ್ನು ಮುಗಿಸಿ 22-9-97 ರಂದು ಹುಬ್ಬಳ್ಳಿಯಲ್ಲಿ ಮಂತ್ರಿ ಮಂಡಲದ ಸಭೆ ನಡೆಸಲಾಯಿತು. ಈ ದಂಡ ಯಾತ್ರೆಗೆ ಲಕ್ಷಾವಧಿ ರೂಪಾಯಿ ಖರ್ಚು ಮಾಡಲಾಯಿತು. ಈ ಮಹಾದಂಡ ಯಾತ್ರೆಯಿಂದಾಗಿ ದಳದ ಸಂಘಟನೆಯ ಮೇಲೆ, ಸರಕಾರಿ ಆಡಳಿತೆಯ ಮೇಲೆ ಎಷ್ಟು ಪರಿಣಾಮ ಬೀರಲು ಸಾಧ್ಯವೆಂಬುದು ಮುಂದಿನ ದಿನಗಳಲ್ಲಿ ಕಾಣಬಹುದು.


ಈ ಖರ್ಚಿನ ಅಗತ್ಯವಿದೆಯೇ?

ಸ್ಥಳೀಯ ಸಂಸ್ಥೆಗಳ ವತಿಯಿಂದ ವಿಧಾನ ಪರಿಷತ್ತಿಗೆ ನಡೆಯುತ್ತಿರುವ ಚುನಾವಣೆ ಹಾಗೆಯೇ ಧಾರವಾಡ ಮತಕ್ಷೇತ್ರದಿಂದ ವಿಧಾನ ಸಭೆಗೆ ನಡೆಯಲಿರುವ ಉಪ-ಚುನಾವಣೆಗಳನ್ನೂ ಗಮನದಲ್ಲಿಟ್ಟುಕೊಂಡು ತಮ್ಮ ಪಕ್ಷ ದೇಶಗೊಳಗೆ ಕಾರ್ಯಕರ್ತರ ಮಧ್ಯೆ ಉಲ್ಬಣಗೊಳ್ಳುತ್ತಿರುವ ಅಸಮಾಧಾನ, ಗುಂಪುಗಾರಿಕೆಗಳನ್ನು ಸ್ವಲ್ಪಮಟ್ಟಿಗಾದರೂ ಶಮನಗೊಳಿಸುವ ಪ್ರಯತ್ನವನ್ನು ಸರಕಾರದ ಖರ್ಚಿನಿಂದಲೇ ಮಾಡಿದೆ. ಜೆ.ಎಚ್.ಪಟೇಲ ಮಂತ್ರಿ ಮಂಡಲ ಎಂಬುದನ್ನು ಗಮನಿಸಬೇಕು. ಉತ್ತರ ಕರ್ನಾಟಕದ ಎರಡು ಜಿಲ್ಲೆಗಳ ಆಡಳಿತೆಯ ವಿಮರ್ಶೆ ನಡೆಸಿ ಆ ಜಿಲ್ಲೆಗಳ ಅವಶ್ಯಕತೆಗಳಿಗೆ ಸಮರ್ಪಕವಾದ ಪರಿಹಾರ ಒದಗಿಸುವ ಅವಶ್ಯಕತೆಗಳಿದ್ದಲ್ಲಿ ಅಂಥ ಸಮಸ್ಯೆಗಳನ್ನು ಮಂತ್ರಿ ಮಂಡಲದಲ್ಲಿ ಚರ್ಚಿಸಿ ಸಮರ್ಪಕ ಕ್ರಮಗೊಳ್ಳುವ ಜವಾಬ್ದಾರಿಯನ್ನು ಆಯಾ ಜಿಲ್ಲೆಯ ಇನ್-ಚಾರ್ಜ್ ಮಂತ್ರಿಯವರಿಗೆ ವಹಿಸಬಹುದಾಗಿತ್ತು. ಇಲ್ಲವಾದರೆ ಪ್ರತಿಯೊಂದು ಜಿಲ್ಲೆಗೆ ಇನ್-ಚಾರ್ಜ್ ಮಂತ್ರಿ ಎಂದರೆ ಏನರ್ಥ? ಪ್ರತಿ ಜಿಲ್ಲೆಗೆ 15 ರಿಂದ 20 ಮಂತ್ರಿಗಳು ಅಧಿಕಾರಿಗಳ ಜೊತೆಯಲ್ಲಿ ಪಕ್ಷದ ಸಭೆ, ಅಡಿಗಲ್ಲು ಸಮಾರಂಭ, ಉದ್ಘಾಟನೆಗಳಂಥ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಒಂದು ಗಂಟೆ ಅಧಿಕಾರಿಗಳ ಸಭೆಯಲ್ಲಿ ಪಾಲ್ಗೊಂಡು ಕಾರ್ಯಸಾಧನೆಯ ಕುರಿತು ವಿಚಾರ ವಿನಿಮಯ ನಡೆಸಲು ಲಕ್ಷಾವಧಿ ರೂಪಾಯಿ ಖರ್ಚು ಮಾಡುವ ಅಗತ್ಯವಿದೆಯೇ?

ಜೆ.ಎಚ್.ಪಟೇಲ್ ಸರಕಾರದ ಈ ದಂಡಯಾತ್ರೆ ಹೋದಲ್ಲೆಲ್ಲ ಸರಕಾರದ ಬೆಲೆಯೇರಿಕೆ ನೀತಿ ವಿರುದ್ಧ, ಜನರ ಸಮಸ್ಯೆಗಳ ಪರಿಹಾರಕ್ಕಾಗಿ ಪ್ರತಿಭಟನೆಗಳನ್ನೆದುರಿಸಬೇಕಾಯಿತು. ಜನತಾದಳದ ಕಾರ್ಯಕರ್ತರೂ ಇಂಥ ಪ್ರತಿ ಭಟನೆಗಳಲ್ಲಿ ಪಾಲ್ಗೊಂಡಿದ್ದರೆಂಬುದು ಗಮನಿಸತಕ್ಕದ್ದು. ಅವರ ಪ್ರತಿಭಟನೆಯೂ ಬಹಿರಂಗವಾಗಿಯೇ ನಡೆದಿತ್ತು.

ಮುಖ್ಯಮಂತ್ರಿಗಳಾಗಲೀ, ಮಂತ್ರಿ ಮಂಡಲದ ಇತರ ಮಂತ್ರಿ ಮಹಾಶಯರಾಗಲೀ ಕೆಲಸವಿದ್ದಲ್ಲಿ ಜಿಲ್ಲೆಗಳಿಗೆ ಹೋಗಲಭ್ಯಂತರವಿಲ್ಲ. ತಮ್ಮ ಪಕ್ಷದ ಕಾರ್ಯಕ್ರಮಗಳಿಗೂ ಹೋಗಬಹುದು. ಆದರೆ ಪಕ್ಷ ಮತ್ತು ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಮಂತ್ರಿಗಳ ಗುಂಪು ಎಂಟು ಜಿಲ್ಲೆಗಳಲ್ಲಿ ಓಡಾಡಿ ಲಕ್ಷಾವಧಿ ರೂಪಾಯಿ ಸರಕಾರದ ಹಣವನ್ನು ಖರ್ಚು ಮಾಡಿರುವುದು ಅಕ್ಷಮ್ಯ. ಜನರಿಗೆ ಬಗೆದ ದ್ರೋಹವಿದು. ಇಂಥ ಚಾಳಿಯನ್ನು ಜೆ.ಎಚ್. ಪಟೇಲ ಸರಕಾರ ತಿದ್ದಿಕೊಳ್ಳುವುದು ಅಗತ್ಯ.

ಪದಬಂಧ-2



ಮೇಲಿನಿಂದ ಕೆಳಕ್ಕೆ


1. ಕೊಲೆಗೀಡಾದ ರಂಗ ಕರ್ಮಿಯ ಸ್ಮರಣಾರ್ಥ ಸಂಸ್ಥೆ (4)
4. ದುಡಿಯುವ ಜನರ ಪರವಾದ ಪ್ರಮುಖ ಬಂಗಾಳಿಪತ್ರಿಕೆ (4)
5. ಎಚ್.ಎಸ್.ಶಿವಪ್ರಕಾಶರ ಒಂದು ನಾಟಕ (4)
6. ರಾಜಕೀಯ ವಿಡಂಬನೆಯ ಸಿನಿಮಾ (4)
8. ಕರ್ನಾಟಕ ಸರಕಾರ ನಿರ್ವಹಿಸುತ್ತಿರುವ ವೃತ್ತಿನಾಟಕ ತಂಡ(4)
10. ಕಮ್ಯುನಿಸ್ಟ್ ಆಂದೋಲನದಲ್ಲಿ ಸಕ್ರಿಯರಾಗಿದ್ದ ಕನ್ನಡ ಸಾಹಿತಿ. (4)
12. ಇದು ಒಂದು ವಿಧದ ಜಮೀನು (3)

ಎಡದಿಂದ ಬಲಕ್ಕೆ

1. ಗೂಂಡಾಗಳಿಂದ ಹತರಾದ ಮಹಾನ್ ಬೀದಿ ನಾಟಕ ಚಳುವಳಿಕಾರ. (5)
2. ಕರ್ನಾಟಕದಲ್ಲಿ ಬೀದಿ ನಾಟಕ ಆಂದೋಲನಕ್ಕೆ ಹೊಸ ಆಯಾಮ ಕೊಟ್ಟ ಸಾಂಸ್ಕೃತಿಕ ಸಂಘಟನೆ. (4)
3. ಕುವೆಂಪುರವರ ಒಂದು ಕಾದಂಬರಿ (10)
7. ಒಂದು ಋತು.(2)
9. ಐಎನ್ಎನ್ ಸುದ್ದಿ ಸಂಸ್ಥೆಯ ಪ್ರಮುಖ ಲೇಖಕಿ (3)
11. ಬಂಡವಾಳಶಾಹಿ ರಾಜಕಾರಣಿಗಳ ಆಶ್ವಾಸನೆಗಳಿಂದ ಇದನ್ನು ಕಟ್ಟಬಹುದಷ್ಟೆ (5)
13. ಒಂದು ಜನಪ್ರಿಯ ನಾಟಕ (6)
14. ಇದರ ಪ್ರಯೋಗಕ್ಕೆ ಬಿಲ್ಲು ಅಗತ್ಯ (2)
15. ಭಕ್ತಿ ಪಂಥದ ಮೂಲಕ ಸಮಾಜ ಸುಧಾರಣೆಗೆ ಶ್ರಮಿಸಿದ ದಾಸವರೇಣ್ಯ (5)

ಶ್ರಮ ಜೀವಿ ಬಂಧುವಿನೊಡನೆ ಒಂದು ದಿನ ....

- ಜೆ.ಎಸ್. ಮೋಹನ್



ಕ್ಯೂಬಾದ ಸಂತಸ, ದುಗುಡ ಎರಡನ್ನೂ ಎದೆಯಲ್ಲಿಟ್ಟುಕೊಂಡು ಭಾರತಕ್ಕೆ ವಾಪಸಾಗುವ ಹಾದಿಯಲ್ಲಿ ಲಂಡನ್‌ನಲ್ಲಿಳಿದಾಗ ನಮಗಿದ್ದದ್ದು ಒಂದೇ ಕನಸು. ಆ ಕ್ರಾಂತಿಕಾರಿ, ಬದಲಾವಣೆಯ ಹರಿಕಾರ, ಶ್ರಮಜೀವಿ ಬಂಧುವಿನೊಡನೆ ಒಂದು ಬೆಳಗು ಕಳೆಯಬೇಕು.

ಹೈಗೇಟ್-ಲಂಡನ್ನಿನ ಮೂಲೆಯಲ್ಲಿರುವ ಮಸಣ ಇಂದು ವಿಶ್ವದ ಯಾತ್ರಿಕರ ಕೇಂದ್ರವಾಗಿ ಹೋಗಿದೆ. 'ವಿಶ್ವದ ಕಾರ್ಮಿಕರೆ ಒಂದಾಗಿ' ಎಂಬ ನುಡಿ ಕೇಳಿದವರು ಹೈಗೇಟ್‌ಗೆ ಕಾಲಿಡದೇ ಹೋಗುವುದೇ ಇಲ್ಲ. ಲಂಡನ್ನಿನ ಪ್ರವಾಸಿ ಪುಸ್ತಗಳಲ್ಲಿ, ನಕಾಶೆಗಳಲ್ಲಿ ಹೈಗೇಟ್‌ಗೆ ಸ್ಥಾನವೇ ಇಲ್ಲ. ಆದರೆ ಲಂಡನ್ನಿಗೇನು ಗೊತ್ತು ಜನ ತಮ್ಮ ಹೃದಯದ ನಕಾಶೆಯಲ್ಲಿ ಹೈಗೇಟ್‌ನಲ್ಲಿ ಒರಗಿ ಮಲಗಿದ ಮಾರ್ಕ್ಸ್‌ನನ್ನು ಅಚ್ಚೊತ್ತಿಸಿಕೊಂಡಿದ್ದಾರೆಂದು.

ಆಗಸ್ಟ್ 13 ರಂದು ಇನ್ನೂ ಚುಮು ಚುಮು ಬೆಳಕಿರುವಾಗಲೇ ನಾವು ಹೈಗೇಟ್‌ನ ಎದುರು ಇದ್ದೆವು. ಎಲ್ಲೆಂದರಲ್ಲಿ ಹೂಗಳೇ ಚೆಲ್ಲಾಡಿ ಹೋಗಿರುವ ತೋಟಗಳನ್ನು ಹಾದು ಹೈಗೇಟ್ ಸ್ಮಶಾನಕ್ಕೆ ಬಂದಾಗ 'ಸಂಕೋಲೆಗಳನ್ನು ಕಳಚಿ' ಎಂದು ಹೇಳಿ ಜಗತ್ತಿಗೇ ದೊಡ್ಡವನಾಗಿ ನಿಂತ ಕಾರ್ಲ್‌ಮಾರ್ಕ್ಸ್‌ನನ್ನು ಇನ್ನೇನು ನೋಡಿಯೇ ಬಿಡುತ್ತೇವೆ ಎಂಬ ಸಂಭ್ರಮ.

'ಎಲ್ಲಾ ದಾರಿಗಳು ಇಲ್ಲಿ ಸೇರುತ್ತಿವೆ' ಎಂಬಂತೆ ಕಮ್ಯುನಿಸಂನ ತತ್ವದಡಿಯಲ್ಲಿ ವಿಶ್ವದ ಎಲ್ಲಾ ದಾರಿಗಳನ್ನೂ ಕೂಡಿ ಹಾಕಲು ಪ್ರಯತ್ನಿಸಿದ ಆ ಪೊದೆಗಡ್ಡದ ಮಾರ್ಕ್ಸ್‌ರ ಗಂಭೀರ ಪ್ರತಿಮೆ ಆ ವಿಶಾಲ ಮಸಣದಲ್ಲಿ.

'ಎಲ್ಲ ನೆಲದ ಶ್ರಮಿಕರೇ ಒಂದಾಗಿ' ಎಂದು ಚಿನ್ನದ ಅಕ್ಷರಗಳಲ್ಲಿ ಕೆತ್ತಿದ್ದ ಮಾತು ಮಾತಲ್ಲ ವಿಶ್ವವನ್ನು ಬದಲಾಯಿಸಿದ ಕಣ್ಣೋಟ' ಅಲ್ಲಿತ್ತು. ಕಾರ್ಲ್ ಮಾರ್ಕ್ಸ್ ಇಲ್ಲಿಯೂ ಒಂಟಿಯಲ್ಲ. ಮಾರ್ಕ್ಸ್‌ನ ಜೊತೆಗೆ ಕಷ್ಟಗಳನ್ನು ಹಂಚಿಕೊಂಡ ನೋವನ್ನುಂಡ ಹೆಂಡತಿ ಜೆನ್ನಿ, ಮೊಮ್ಮಗ ಹ್ಯಾರಿ, ಮಗಳು ಎಲೆನ ಎಲ್ಲರೂ ಮಾರ್ಕ್ಸ್‌ನೊಂದಿಗೆ ಇಲ್ಲಿ ಮಲಗಿದ್ದಾರೆ.

'ಈ ಒಬ್ಬ ಮನುಷ್ಯ ಯಾರನ್ನು ಯಾರೊಂದಿಗೊ ಯಾವ ದೇಶದವರನ್ನು ಇನ್ನಾವ ದೇಶದವರೊಂದಿಗೋ ಹೇಗೆಲ್ಲಾ ಬೆಸದುಬಿಟ್ಟ' ಎಂದು ಕ್ಯೂಬಾದ ನೆಲದಲ್ಲಿ ಹೋದಲ್ಲಿ, ಬಂದಲ್ಲಿ ಜಲಪಾತದ ಕೆಳಗಡೆ ನಿಂತಲ್ಲಿ ಒಂದು ಕ್ಷಣಕ್ಕೇ ನೆಂಟರಾಗಿ ಹೋಗುತ್ತಿದ್ದ 'ಕಾಮ್ರೆಡ್'ಗಳನ್ನು ಕಂಡು ಗುರುಶಾಂತ್ ಉದ್ಗರಿಸಿದ್ದ.

ಆ ಜಗದ ನೆಂಟನ ಮುಂದೆ ಎಲ್ಲಾ ದೇಶದವರು ಬಂದು ಹೋಗಿದ್ದಾರೆ. ಹೋರಾಟದ ಪಾಠ ಕಲಿಸಿದ ಮಾರ್ಕ್ಸ್‌ನ ಪ್ರತಿಮೆಯ ಮುಂದೆ ವಿವಿಧ ದೇಶಗಳವರು ಬಂದು ಪುಷ್ಪಗುಚ್ಛವನ್ನು ಇರಿಸಲಿಲ್ಲ. ಬದಲಾಗಿ ತಮ್ಮ ದೇಶದಲ್ಲಿ ತಾವು ನಡೆಸುತ್ತಿರುವ ಹೋರಾಟದ ಕರ ಪತ್ರಗಳನ್ನು ಇಟ್ಟು ಹೋಗುತ್ತಿದ್ದರು. ಹೋರಾಟ ಕಲಿಸಿದಾತನಿಗೆ ಇದಕ್ಕಿಂತ ಇನ್ನಾವ ಕಾಣಿಕೆ ಬೇಕು?

ಏನೂ ಬರೆಯಲು ತೋಚದವರು ತಮ್ಮ ದೇಶದ ಹೆಸರನ್ನು ಬರೆದು ಹೋಗಿದ್ದರು. ತಾವು ನಡೆಸಿದ ರ‍್ಯಾಲಿಗಳ ಫೋಟೊಗಳನ್ನು ಹಾಕಿ ಹೋಗಿದ್ದರು.

'ಗೆಲ್ಲುವವರೆಗೆ ಹೋರಾಟ' ಎಂದು ಮಾಜಿಯಾ ಬರೆದರೆ 'ಇನ್ನೂ ಕ್ರಾಂತಿ' ಎಂದು ರೆ ಗ್ರುಸ್ಸೆ ಡೀನ್ ಚೀಟಿಯಲ್ಲಿ ಬರೆದಿದ್ದರು. 'ಗೆಲುವಾಗಿರು ಅಜ್ಜ' ಎಂದು ಅಮೀಟಿಸುನ ಚೀಟಿ ಹಾರೈಸುತ್ತಿತ್ತು.

'ದಾರ್ಶನಿಕರು ಈ ಜಗತ್ತನ್ನು ವಿವಿಧ ಬಗೆಗಳಲ್ಲಿ ಅರ್ಥೈಸಿದ್ದಾರೆ. ಆದರೆ ವಿಷಯ ಜಗತ್ತನ್ನು ಬದಲು ಮಾಡುವುದು' ಎಂಬ ಬರಹ ಹೊತ್ತ ಮಾರ್ಕ್ಸ್ ಪುತ್ಥಳಿಯ ಮುಂದೆ ನಿಂತಾಗ ಏಕೋ ಮಾರ್ಕ್ಸ್‌ನ ಬದುಕಿನ ನೋವಿನ ಕ್ಷಣಗಳ ಬಗ್ಗೆ ಎಕ್ಕುಂಡಿ ಬರೆದ ಕವನಗಳ ಸಾಲು ಸಾಲುಗಳು ಮೂಡಿ ಹೋದವು.

'ಬಂಡವಾಳ' ಬರೆಯುವುದರಲ್ಲಿ ನಿರತನಾಗಿದ್ದ ಮಾರ್ಕ್ಸ್‌ನ ಮನೆಯ ಬಾಗಿಲು ತಟ್ಟಿದ ಹಾಲಿನವರು, ಮಾಂಸದವರು, ಬ್ರೆಡ್‌ನವರ ಎಲ್ಲರಿಗೂ ಹಣವಿಲ್ಲ ಎಂದು ನೊಂದು ನುಡಿದ ಮಾರ್ಕ್ಸ್‌ನ ಮನೆಯ ಬಾಗಿಲು ಮತ್ತೆ ತಟ್ಟಿದ್ದು ಎಂಗೆಲ್ಸ್. ನೊಂದ ಕುಟುಂಬಕ್ಕೆ ಸಾಂತ್ವನದ ಚಿಂತನ.

ಗಿರವಿಯಂಗಡಿಯಲ್ಲಿ ಮದುವೆಯುಂಗುರ, ಮಕ್ಕಳ ಗೊಂಬೆ, ಅಂಗಿ ಷರಾಯಿ ಕೋಟು, ಹೆಂಡತಿಯ ಎದೆ ನೋವು, ಮಗನ ಕಾಯಿಲೆಗೆ ಹಣವಿಲ್ಲದೆ ಗಿರವಿ ಅಂಗಡಿಗೆ ಎಲ್ಲವನ್ನು ಒತ್ತೆ ಇಡಬೇಕಾಗಿ ಬಂದ ಮಾರ್ಕ್ಸ್.

ಎಕ್ಕುಂಡಿಯವರ ಕವನ ಈತ ನೋವುಗಳ ಜೊತೆಗಾರ ಎಂಬುವುದನ್ನು ಹೇಳಿತ್ತು. ನಾನು, ತ್ರಿಪುರದ ಸಚಿವ ಜಿತೇಂದ್ರ ಚೌಧರಿ ಇಬ್ಬರೂ ಮಾರ್ಕ್ಸ್‌ನ ಪ್ರತಿಮೆಯ ಎದುರು ಫೋಟೊ ಹಿಡಿಸಿಕೊಳ್ಳಲು ನಿಂತೆವು. ಕೊನೆಗೆ ಏನೆನ್ನಿಸಿತೋ 'ಎಲ್ಲಾ ನೆಲದ ಶ್ರಮಿಕರೇ ಒಂದಾಗಿ' ಎಂದು ಸಾರಿದವನ ಮುಂದೆ ಒಂದೇ ನೆಲದ ಇಬ್ಬರೇಕೆ ಎನ್ನಿಸಿ ಮಾರ್ಕ್ಸ್‌ನ ಪ್ರತಿಮೆ ಹುಡುಕುತ್ತಾ ಬಂದ ಜರ್ಮನಿಯ ಕಾಮ್ರೆಡ್‌ನನ್ನು ಕರೆದು ಒಟ್ಟಿಗೆ ನಿಂತು ಫೋಟೊ ತೆಗೆಸಿಕೊಂಡೆವು. ○

KRNM/BGS-405 MAG (2) PRB DECR 319-79/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ. ರಾಮಚಂದ್ರರಾವ್
ಸಂಪಾದಕರು: ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು – 27 ಫೋನ್ ನಂ. 2236462, ವ್ಯವಸ್ಥಾಪಕ ಕಛೇರಿ: ನಂ.24, 5ನೇ ಮುಖ್ಯ ರಸ್ತೆ ಗಾಂಧಿನಗರ, ಬೆಂಗಳೂರು–9 ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ ಬೆಂಗಳೂರು